
ರಂಜನೆ ಬೋಧನೆ ಪ್ರಚೋದನೆ

# ಗೌರಿ ಲಂಕೇಶ್

ಏಪ್ರಿಲ್ 16, 2008 ರೂ. 10/-




# ತೆಲುಗರ ಕಪಿಮುಷ್ಠಿಯಲ್ಲಿ ಬಿಜೆಪಿ



## ರೈ ಮುಖಕ್ಕೆ ರಮೇಶ್ ಮಸಿ





ಕಾರಂತರ ಆಸ್ತಿ

## ರಂಗಭೂಮಿ ರಗಳೆ



ಮಂಡ್ಯ:

## ಕೃಷ್ಣ ನಿಲ್ತಾರಾ?



ಅನಂತುಗೆ ಯಡ್ಡಿ

## ಫಿಟ್ಟಿಂಗ್




# ನಮ್ಮ ರಾಜಕೀಯ ಪಕ್ಷಗಳು ಸಂವಿಧಾನಬದ್ಧ ಪಕ್ಷಗಳೇ?

ಚಾರ್ವಾಕ
shivasundar35@rediffmail.com
ಶಿವಸುಂದರ್

ಮೇಲ್ನೋಟಕ್ಕೆ ಈ ಪ್ರಶ್ನೆಯೇ ಅಸಂಬದ್ಧವೆನಿಸಬಹುದು. ಅದರಲ್ಲೂ ಕರ್ನಾಟಕದಲ್ಲಿ ಚುನಾವಣೆಯು ಘೋಷಣೆಯಾಗಿ ಜನರ ಮುಂದೆ ಇದೇ ರಾಜಕೀಯ ಪಕ್ಷಗಳು ಓಟನ್ನು ಬೇಡುತ್ತಾ ಬರಲಿರುವಾಗ ಈ ಪ್ರಶ್ನೆ ಗೊಂದಲಕಾರಿಯಾಗಿಯೂ ಕಾಣಬಹುದು. ಆದರೂ ಈ ಪ್ರಶ್ನೆ ಪ್ರಜಾತಂತ್ರದ ದೃಷ್ಟಿಯಿಂದ ಅತ್ಯಂತ ಮುಖ್ಯವಾಗಿದೆ.

ಚುನಾವಣಾ ಆಯೋಗ ಮಾನ್ಯತೆ ನೀಡಿದ ಎಲ್ಲಾ ಪಕ್ಷಗಳು ಸಂವಿಧಾನಬದ್ಧ ರಾಜಕೀಯ ಪಕ್ಷಗಳೇ ಆಗುವುದರಿಂದ ಮೇಲಿನ ಪ್ರಶ್ನೆಗೆ ಅರ್ಥವೇನು?

ಸಾಮಾನ್ಯವಾಗಿ ಯಾವ ಪಕ್ಷ ಅಥವಾ ವ್ಯಕ್ತಿ ಈ ದೇಶದ ಸಂವಿಧಾನವನ್ನು ಒಪ್ಪುವುದಿಲ್ಲವೋ ಅವರನ್ನು ಸಂವಿಧಾನ ವಿರೋಧಿಗಳೆಂದೂ, ಪ್ರಜಾತಂತ್ರ ವಿರೋಧಿಗಳೆಂದೂ ಕೆಲವು ಸ್ವಘೋಷಿತ ಬುದ್ಧಿಜೀವಿಗಳು ಮತ್ತು ಚುನಾವಣಾ ಆಯೋಗವು ಮಾನ್ಯತೆ ನೀಡಿರುವ ಎಲ್ಲಾ ಪಕ್ಷಗಳು ಆರೋಪಿಸುತ್ತಿರುತ್ತವೆ. ಉದಾಹರಣೆಗೆ ಈ ವ್ಯವಸ್ಥೆಯು ನಿಜವಾದ ಪ್ರಜಾತಂತ್ರವಲ್ಲವೆಂದು ತಿರಸ್ಕರಿಸುವ, ಚುನಾವಣೆಗಳನ್ನು ಬಹಿಷ್ಕರಿಸುವ ನಕ್ಸಲೈಟರನ್ನು ಸಂವಿಧಾನ ವಿರೋಧಿಗಳೆಂದು ಮತ್ತು ಸಂವಿಧಾನ ಬಾಹಿರ ಶಕ್ತಿಗಳೆಂದು ಕರೆಯುತ್ತದೆ. ಅಲ್ಲ ಜರೆಯುತ್ತದೆ. ಅದರರ್ಥ ಇಂದು ಚುನಾವಣೆಗೆ ನಿಲ್ಲುತ್ತಿರುವ ಪಕ್ಷಗಳೆಲ್ಲಾ ಸಂವಿಧಾನದ ಆಶಯಗಳನ್ನು ಒಪ್ಪಿಕೊಳ್ಳುವ ಸಂವಿಧಾನಬದ್ಧ ಪಕ್ಷಗಳು ಎಂದಾಯ್ತು. ಆದರೆ ಈ ರಾಜಕೀಯ ಪಕ್ಷಗಳು ನಿಜಕ್ಕೂ ಸಂವಿಧಾನದ ಆಶಯಗಳಿಗೆ ಬದ್ಧವಾಗಿವೆಯೇ? ಸಂವಿಧಾನದ ಆಶಯಗಳಿಗೆ ಬದ್ಧವಾಗಿರದ ಮತ್ತು ಅದಕ್ಕೆ ತದ್ವಿರುದ್ಧವಾಗಿ ಕೆಲಸ ಮಾಡುತ್ತಿರುವ ಪಕ್ಷಗಳನ್ನು ಸಂವಿಧಾನಬದ್ಧ ಪಕ್ಷಗಳೆಂದು ಕರೆಯಲು ಸಾಧ್ಯವೇ?

ನಮ್ಮ ಸಂವಿಧಾನದ ಮೂಲ ಆಶಯದಲ್ಲಿ "ನಾವು, ಈ ದೇಶದ ಜನರು ನಮ್ಮ ದೇಶವನ್ನು ಒಂದು ಪ್ರಜಾತಾಂತ್ರಿಕ, ಜಾತ್ಯತೀತ, ಸಮಾಜವಾದಿ ಗಣರಾಜ್ಯವನ್ನಾಗಿ ನಿರ್ಮಿಸಲು ಬದ್ಧರಾಗಿದ್ದೇವೆ" ಎಂದು ಘೋಷಿಸಿಕೊಂಡಿದ್ದೇವೆ. ಅಲ್ಲದೆ ಈ ಗಣರಾಜ್ಯದ ಆಶಯಗಳಾಗಿ "ಎಲ್ಲಾ ಜನರಿಗೂ ಜಾತಿ, ಬಣ್ಣ, ಲಿಂಗ ಮತ್ತು ಧರ್ಮದ ಭೇದವಿಲ್ಲದೆ ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆ ಮತ್ತು ರಾಜಕೀಯ ಸ್ವಾತಂತ್ರ್ಯವನ್ನು" ಒದಗಿಸಲು ಬದ್ಧರಾಗಿರುವುದಾಗಿಯೂ ಘೋಷಿಸಿಕೊಂಡಿದ್ದೇವೆ. ಇವೆಲ್ಲವನ್ನೂ ಅನುಷ್ಠಾನಕ್ಕೆ ತರಲೆಂದು ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ರಾಜಕೀಯ ವ್ಯವಸ್ಥೆಯನ್ನು ರಚಿಸಿಕೊಳ್ಳಲಾಗಿದೆ. ಹೀಗಾಗಿ ಈ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸ ಬಯಸುವ ಪ್ರತಿಪಕ್ಷ ಮತ್ತು ಅಭ್ಯರ್ಥಿಗೂ ಈ ಹೊಣೆಗಾರಿಕೆ ಇರುತ್ತದೆ.

ಇಷ್ಟು ಮಾತ್ರವಲ್ಲದೆ ಸಂವಿಧಾನದ ನಾಲ್ಕನೇ ಪರಿಚ್ಛೇದದಲ್ಲಿ ಪ್ರಭುತ್ವಕ್ಕೆ ನೀಡಲಾಗಿರುವ ನಿರ್ದೇಶನಾ ತತ್ವದಲ್ಲಿ ಈ ಮೇಲಿನ ಆಶಯಗಳನ್ನು ಈಡೇರಿಸಲು ಆಳುವ ಪ್ರಭುತ್ವಗಳು ಯಾವ ಬಗೆಯ ನೀತಿಯನ್ನು ಅನುಸರಿಸಬೇಕೆಂಬ ಮಾರ್ಗದರ್ಶನವಿದೆ. ಅಂದರೆ ಜನತೆ ಪ್ರಭುತ್ವಕ್ಕೆ ಯಾವ ರೀತಿಯ ನೀತಿಗಳನ್ನು ರೂಪಿಸಬೇಕೆಂದು ನಿರ್ದೇಶನ ನೀಡಿದೆ ಎಂದರ್ಥ. ವಾಸ್ತವವಾಗಿ ನಮ್ಮ ಸಂವಿಧಾನವನ್ನು ರೂಪಿಸಿದ ಸಂವಿಧಾನ ಸಭೆ ಜನರಿಂದ ಆಯ್ಕೆಯಾದದ್ದಲ್ಲ, ಆದ್ದರಿಂದ ನಿಜಕ್ಕೂ ಅದು ಜನರ ಆಶಯಗಳನ್ನು ಪ್ರತಿನಿಧಿಸುತ್ತಿತ್ತೇ ಎಂಬ ಪ್ರಶ್ನೆಯನ್ನು ಉಳಿಸಿಕೊಳ್ಳಬಹುದಾದರೂ ಡಾ.ಅಂಬೇಡ್ಕರ್‌ರಂತಹ ಸಾಮಾಜಿಕ ಕ್ರಾಂತಿಕಾರಿಯೇ ಅದರ ಅಧ್ಯಕ್ಷರಾಗಿದ್ದರಿಂದ ನಿರ್ದೇಶನಾ ತತ್ವಗಳ ಮಟ್ಟಿಗಾದರೂ ಜನರ ಪ್ರಾತಿನಿಧ್ಯ ಇಲ್ಲದಿರುವ ಕೊರತೆಯನ್ನು ತುಂಬಿತ್ತು. ಆದರೆ ಈ ನಿರ್ದೇಶನಾ ತತ್ವಗಳು ರೆಕ್ಕೆಗಳಿಲ್ಲದ ಪಕ್ಷಿಯೆಂಬುದು ಕಳೆದ ಅರವತ್ತು ವರ್ಷಗಳಲ್ಲಿ ಸಾಬೀತಾಗಿದ್ದರೂ ಸಂವಿಧಾನದ — ಅಂದರೆ ಜನತೆಯ — ಆಶಯಗಳನ್ನು ಸ್ಪಷ್ಟಪಡಿಸುವಲ್ಲಿ ಮಾತ್ರ ಯಶಸ್ವಿಯಾಗಿದೆ. ಹೀಗಾಗಿ ಒಂದು ಪ್ರಜಾತಂತ್ರದಲ್ಲಿ ಯಾವ ಪಕ್ಷ ಅಥವಾ ಅಭ್ಯರ್ಥಿ ಈ ನಿರ್ದೇಶನಾ ತತ್ವಗಳನ್ನು ಪಾಲಿಸಲು ಬದ್ಧರಾಗಿದ್ದಾರೋ ಅವರು ಮಾತ್ರ ಸಂವಿಧಾನ ಬದ್ಧರು ಇಲ್ಲದಿದ್ದರೆ ಅವರು ಜನದ್ರೋಹಿಗಳು ಮತ್ತು ಸಂವಿಧಾನ ದ್ರೋಹಿಗಳು ಆಗುತ್ತಾರೆ, ಅಲ್ಲವೇ?

ಹಾಗಿದ್ದಲ್ಲಿ ಆಳುವ ಪ್ರಭುತ್ವಕ್ಕೆ ನಮ್ಮ ಸಂವಿಧಾನ ನೀಡಿರುವ ನಿರ್ದೇಶನಗಳೇನು ಮತ್ತು ಅವನ್ನು ಈ ರಾಜಕೀಯ ಪಕ್ಷಗಳು ಎಷ್ಟರಮಟ್ಟಿಗೆ ಪಾಲಿಸುತ್ತವೆ ಎಂಬುದನ್ನು ಗಮನಿಸುವುದು ಈ ಚುನಾವಣಾ ಸಂದರ್ಭದಲ್ಲಿ ಅತ್ಯಂತ ಮುಖ್ಯ. ನಮ್ಮ ಸಂವಿಧಾನದಲ್ಲಿ ಆರ್ಟಿಕಲ್ 36 ರಿಂದ 51ರವರೆಗೆ ಆಳುವ ಪ್ರಭುತ್ವಗಳಿಗೆ ಅತ್ಯಂತ ಪ್ರಮುಖ ನಿರ್ದೇಶನಗಳನ್ನು ನೀಡಲಾಗಿದೆ. ಅವೆಲ್ಲವನ್ನೂ ಪರಿಶೀಲಿಸುವುದು ಮುಖ್ಯವಾದರೂ ಸದ್ಯಕ್ಕೆ ಕೆಲವು ಪ್ರಮುಖ ಅಂಶಗಳನ್ನು ಗಮನಿಸೋಣ.

ಮುಖ್ಯವಾಗಿ ಆರ್ಟಿಕಲ್ 39 ಪ್ರಭುತ್ವವು ಜನರ ಪರವಾಗಿ ನೀತಿಗಳನ್ನು ರೂಪಿಸುವಾಗ ಅನುಸರಿಸಬೇಕಾದ ನಿರ್ದೇಶನವೇನು ಎಂಬುದನ್ನು ಸ್ಪಷ್ಟಪಡಿಸುತ್ತದೆ.

**39. Certain principles of policy to be followed by the State.— The State shall, in particular, direct its policy towards securing—**

**(a) that the citizens, men and women equally, have the right to an adequate means of livelihood;**

**(b) that the ownership and control of the material resources of the community are so distributed as best to subserve the common good;**

**(c) that the operation of the economic system does not result in the concentration of wealth and means of production to the common detriment;**

**(d) that there is equal pay for equal work for both men and women;**

**(e) that the health and strength of workers, men and women, and the tender age of children are not abused and that citizens are not forced by economic necessity to enter avocations unsuited to their age or strength;**

**(f) that children are given opportunities and facilities to develop in a healthy manner and in conditions of freedom and dignity and that childhood and youth are protected against exploitation and against moral and material abandonment.**

ಅಂದರೆ ಪ್ರಭುತ್ವದ ನೀತಿಗಳು ಪುರುಷರು ಮತ್ತು ಮಹಿಳೆಯರೆಲ್ಲರಿಗೂ ಜೀವನಾವಶ್ಯಕ ಸಾಧನಗಳನ್ನು ಪಡೆದುಕೊಳ್ಳುವ ಹಕ್ಕನ್ನು ಖಾತರಿಪಡಿಸಲು, ಸಮುದಾಯದ ಎಲ್ಲಾ ಭೌತಿಕ ಆಸ್ತಿಪಾಸ್ತಿಗಳ ಒಡೆತನ ಮತ್ತು ನಿಯಂತ್ರಣಗಳು ಎಲ್ಲರ ಆಸಕ್ತಿಯನ್ನು ಪೂರೈಸುವ ರೀತಿಯಲ್ಲಿ ಇರುವಂತೆಯೂ, ಆರ್ಥಿಕ ವ್ಯವಸ್ಥೆಯ ನಿರ್ವಹಣೆಯು ಜನತೆಯ ಒಳಿತಿಗೆ ವಿರುದ್ಧವಾಗಿ ಸಂಪತ್ತು ಮತ್ತು ಉತ್ಪಾದನಾ ಸಾಧನಗಳ ಕೇಂದ್ರೀಕರಣವಾಗದಂತೆ ತಡೆಯುವಂತೆಯೂ, ಪುರುಷ ಮತ್ತು ಮಹಿಳೆಯರಿಗೆ ಸಮಾನ ವೇತನವನ್ನು ಖಾತರಿಪಡಿಸಿಕೊಳ್ಳುವಂತೆಯೂ, ಆರ್ಥಿಕ ಅಗತ್ಯಗಳ ಅನಿವಾರ್ಯತೆಗಳು ಕಾರ್ಮಿಕರ, ಮಹಿಳೆಯರ, ಪುರುಷರ ಮತ್ತು ಮಕ್ಕಳ ಆರೋಗ್ಯ ಮತ್ತು ಶಕ್ತಿ ಸಾಮರ್ಥ್ಯಕ್ಕೆ ಧಕ್ಕೆ ಆಗುವಂತಹ ಉದ್ಯೋಗಗಳಿಗೆ ಅವರನ್ನು ದೂಡುವಂತೆ ತಡೆಯುವ, ಮಕ್ಕಳ ಸಂಪೂರ್ಣ ಸ್ವಾತಂತ್ರ್ಯ ಮತ್ತು ಘನತೆಯನ್ನು ಕಾಪಾಡುವ ಆರೋಗ್ಯಕರವಾಗಿ ಬೆಳೆಯುವ ಸೌಕರ್ಯ ಮತ್ತು ಅವಕಾಶಗಳನ್ನು ಒದಗಿಸುವ, ಮಕ್ಕಳು ಮತ್ತು ಯುವಕರು ಭೌತಿಕ ಮತ್ತು ನೈತಿಕ ಸ್ಥೈರ್ಯವನ್ನು ಕಳೆದುಕೊಳ್ಳುವಂತಹ ವಾತಾವರಣದಿಂದ ರಕ್ಷಿಸುವಂತ ಆರ್ಥಿಕ ಮತ್ತು ರಾಜಕೀಯ ನೀತಿಗಳನ್ನು ಅನುಸರಿಸುವಂತೆ ಸಂವಿಧಾನವು ಪ್ರಭುತ್ವಕ್ಕೆ ನಿರ್ದೇಶನ ನೀಡುತ್ತದೆ.

1991ರ ತನಕ, ರಾಜಕೀಯ ಪಕ್ಷಗಳು ಇವೆಲ್ಲವನ್ನೂ ತಾತ್ವಿಕವಾಗಿ ಒಪ್ಪಿಕೊಂಡರೂ ಅನುಷ್ಠಾನದಲ್ಲಿ ಎದುರಾಗುತ್ತಿರುವ ತೊಂದರೆಗಳು ಅಥವಾ ರಾಜಕೀಯ ಇಚ್ಛಾಶಕ್ತಿಯ ಕೊರತೆಯು ಇವೆಲ್ಲಾ ಆಗದಿರಲು ಕಾರಣವೆಂದು ಹೇಳಲಾಗುತ್ತಿತ್ತು. ಆದರೆ ಜಾಗತೀಕರಣದ ನೀತಿಗಳಿಗೆ ಭಾರತವು ತೆರೆದುಕೊಂಡ ನಂತರ ತಾತ್ವಿಕವಾಗಿಯೂ ಎಲ್ಲಾ ಪಕ್ಷಗಳು ಮೇಲಿನ ಸಂವಿಧಾನದ ಆಶಯವನ್ನು ನಿರಾಕರಿಸುತ್ತಿವೆ. ಉದಾಹರಣೆಗೆ ಸದನದಲ್ಲಿ 2002ರ ಫೆಬ್ರವರಿಯಲ್ಲಿ ಆಗ ಲೋಕಸಭೆಯ ಭಾಗವಾಗಿದ್ದ ಎಲ್ಲಾ ಪಕ್ಷಗಳ ಸರ್ವಸಮ್ಮತಿಯೊಂದಿಗೆ **Fiscal Responsibility And Budget Management Act (FRBM)**-ಹಣಕಾಸು ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಕಾಯಿದೆ-ಯನ್ನು ಜಾರಿಗೆ ತಂದಿವೆ. ಇದೇ ನೀತಿಯನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬಿಜೆಪಿಯ ಯಾವುದೇ ವಿರೋಧವಿಲ್ಲದೆ 2003ರಲ್ಲಿ ಜಾರಿಗೆ ತಂದಿತು. ಈ ಕಾಯಿದೆಯು ಸಾರಾಂಶದಲ್ಲಿ ಹೇಳುವುದೇನೆಂದರೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸರ್ಕಾರ ಜನರ ಸಂಕ್ಷೇಮ ಮತ್ತು ಕಲ್ಯಾಣ ಕಾರ್ಯಕ್ರಮಗಳಿಗೆ ಮಾಡುತ್ತಿರುವ ವೆಚ್ಚವನ್ನು ಕಡಿಮೆ ಮಾಡಬೇಕೆಂದೂ ಅದರ ಬದಲಿಗೆ ಸಾಮಾನ್ಯ ಜನರ ಮೇಲೆ ಹೆಚ್ಚಿನ ತೆರಿಗೆ ಹಾಕಿ ಬೊಕ್ಕಸ ತುಂಬಿಸಿಕೊಂಡು ಸ್ವದೇಶಿ ಮತ್ತು ವಿದೇಶಿ ಬಂಡವಾಳಕ್ಕೆ ಪೂರಕವಾದ ಸೌಕರ್ಯಗಳನ್ನು ನಿರ್ಮಿಸಬೇಕೆಂದು ಕಡ್ಡಾಯ ಮಾಡುತ್ತವೆ. ಅದೇರೀತಿ ಈವರೆಗೆ ಶ್ರೀಮಂತರ ಮೇಲೆ ಹೆಚ್ಚಿನ ತೆರಿಗೆ ಹಾಕಿ ಬಡವರ ಮೇಲೆ ತೆರಿಗೆ ಭಾರ ಕಡಿಮೆ ಮಾಡುತ್ತಿದ್ದ ಪ್ರಗತಿಪರ ತೆರಿಗೆ ಪದ್ಧತಿಯನ್ನು ರದ್ದು ಮಾಡಿ ಬಡವರ ಮೇಲೆ ಹೆಚ್ಚಿನ ತೆರಿಗೆ ಹಾಕಿ ಸಂಪತ್ತಿನ ಕೇಂದ್ರೀಕರಣಕ್ಕೆ ಮತ್ತು ಉತ್ಪಾದನಾ ಸಾಧನಗಳ ಕೇಂದ್ರೀಕರಣಕ್ಕೆ ಕಾರಣವಾಗುವ **Goods and Service Tax** ಅನ್ನು ಜಾರಿಗೆ ತರುವ ನೀತಿಗೆ ಎಲ್ಲಾ ಪಕ್ಷಗಳು ಸಹಿ ಹಾಕಿವೆ. ಇದನ್ನು ಜಾರಿಗೆ ತರುವ ಮುಂಚೂಣಿಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವಿತ್ತು. ಹೀಗಾಗಿಯೇ ಜಾಗತೀಕರಣ ನೀತಿಗಳು ಜಾರಿಗೆ ಬಂದ ನಂತರ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಸಂಪತ್ತು ಒಂದೇ ಕಡೆ ಕೇಂದ್ರೀಕೃತವಾಗುತ್ತಿದೆ. ಬಡತನ ವಿಸ್ತೃತವಾಗಿ ಹರಡುತ್ತಿದೆ. ಒಂದೆಡೆ 27 ಬಿಲಿಯನ್ನರುಗಳು, ಮತ್ತೊಂದೆಡೆ ಅರ್ಧ ಬಿಲಿಯನ್ ಬಡವರು ಏಕಕಾಲದಲ್ಲಿ ಸೃಷ್ಟಿಯಾಗುತ್ತಿದ್ದಾರೆ. ಕೋಟ್ಯಾಂತರ ಜನರ ಪರವಾಗಿರಬೇಕಿದ್ದ ಪ್ರಭುತ್ವಗಳು ಅಧಿಕೃತವಾಗಿಯೇ ಕೋಟ್ಯಾಧಿಪತಿಗಳ ಪ್ರಭುತ್ವವಾಗುತ್ತಿದೆ.

ಸಂವಿಧಾನದ ಆಶಯಗಳಿಗೆ ತದ್ವಿರುದ್ಧವಾಗಿರುವ ಈ ನೀತಿಗಳ ಮೂಲ ಗಂಗೋತ್ರಿ ಜಾಗತೀಕರಣ. ಐಎಂಎಫ್, ವಿಶ್ವ ವಾಣಿಜ್ಯ ಸಂಸ್ಥೆಯ ಶರತ್ತುಗಳು. ಇಂದು ಚುನಾವಣೆಯಲ್ಲಿರುವ ಯಾವುದೇ ಪಕ್ಷಗಳು ಇವನ್ನು ವಿರೋಧಿಸುವುದಿಲ್ಲ. ಇವನ್ನು ವಿರೋಧಿಸದೇ ಅವು ಭರವಸೆ ನೀಡುವ ಪುಕ್ಕಟೆ ಸಾಲ, ಅಕ್ಕಿ, ಆರೋಗ್ಯ ಸೇವೆಗಳು ಜಾರಿಗೆ ಬರುವುದೂ ಇಲ್ಲ.

ಹಾಗಿದ್ದಲ್ಲಿ ಸಂವಿಧಾನದ ನಿರ್ದೇಶನಾ ತತ್ವಗಳಿಗೆ ತದ್ವಿರುದ್ಧವಾದ ಆಶಯಗಳನ್ನು ಮತ್ತು ನೀತಿಗಳನ್ನು ಇಟ್ಟುಕೊಂಡಿರುವ ಈ ರಾಜಕೀಯ ಪಕ್ಷಗಳು ನಿಜಕ್ಕೂ ಸಂವಿಧಾನ ವಿರೋಧಿ ಪಕ್ಷಗಳಲ್ಲವೇ? ಇವರಿಂದ ನಮ್ಮ ಸಂವಿಧಾನವನ್ನು ಮತ್ತು ನಮ್ಮ ಬದುಕನ್ನು ನಾವೇ ರಕ್ಷಿಸಿಕೊಳ್ಳಬೇಕಲ್ಲವೇ?


## No Comments

"ದಾಳಿಕೋರರಂತೆ ಜನಗಳ ಮೇಲೆ ದಂಡೆತ್ತಿ ಬರುತ್ತಿರುವ ಬಿಜೆಪಿ, "ಉಂಡರೆ ಉಬ್ಬಸ, ಹೇತರೆ ಸಂಕಟ'ಎಂಬ ಸ್ಥಿತಿಯಲ್ಲಿರುವ ಕಾಂಗ್ರೆಸ್, ಎದುರು ಕಂಡರೆ ಮೂಗುಮುಚ್ಚಿಕೊಂಡು ಹೋಗಬೇಕು ಎನ್ನಿಸುವ ಜೆಡಿಎಸ್."

- ಹಿ.ಶಿ.ರಾಮಚಂದ್ರಗೌಡ


"1947ರಲ್ಲಿ ಛೋಟಾ ನಾಗ್ಪುರದ ಆದಿವಾಸಿಗಳು ಭಾರತ ಗಣರಾಜ್ಯದೊಳಗೆ ಸೇರಲು ನಿರಾಕರಿಸುತ್ತಾ 'ಈ ಭಾರತ ನಿಮ್ಮದು, ಸಂವಿಧಾನ ನಿಮ್ಮದು, ಪರಮಾಧಿಕಾರ ನಿಮ್ಮದು, ಗಡಿಗಳು ನಿಮ್ಮವು. ನಮ್ಮದು ಅಂಥ ಏನಿದೆ?' ಎಂದು ಹೇಳಿದ್ದನ್ನು ನೆನಪಿಸಿಕೊಳ್ಳಬೇಕು."

- ಮಹೇಶ್ ಹರವೆ



"ಒಬ್ಬ ಸಿನಿಮಾ ಸ್ಟಾರು ಜನರಿಗೆ ಮನರಂಜನೆ ನೀಡಬೇಕು. ಅಳುವಂತೆ ಅಥವಾ ನಗುವಂತೆ ಮಾಡಬೇಕು. ಆದರೆ ಬಾಲಿವುಡ್ ನಟಿಯರು ಬಹುಮಟ್ಟಿಗೆ ಇವೇನನ್ನೂ ಮಾಡುವುದಿಲ್ಲ."

- ಇಮಾನ್ ಅಲಿ, ಪಾಕಿಸ್ತಾನದ ನಟಿ



"ನಮ್ಮ ಚಿತ್ರೋದ್ಯಮವು ಬ್ಲ್ಯಾಕ್, ಸಾವರಿಯಾದಂತಹ ಚಿತ್ರಗಳನ್ನು ಮಾಡುತ್ತವೆಯೇ ವಿನಃ ಈವರೆಗೆ 9/11ರ ದಾಳಿಯ ಬಗ್ಗೆ ಒಂದು ಸಿನಿಮಾವನ್ನು ಮಾಡಲಿಲ್ಲ."

- ನಾಸಿರುದ್ದೀನ್ ಶಾ


"ಎರಡು ಎಕರೆ ಜಮೀನು ಇರುವ ಸಣ್ಣ ರೈತ ಕುಟುಂಬ ಒಂದು ವರ್ಷಕ್ಕೆ ರೂ. 8,600 ಆದಾಯ ಗಳಿಸುತ್ತದೆ. ಅಂದರೆ ತಿಂಗಳಿಗೆ 1,720 ರೂ. ಮಾತ್ರ! ಆದರೆ ಅದೇ ಆ ಇಡೀ ಕುಟುಂಬ ಕೂಲಿಗಳಾಗಿ ಕೆಲಸ ಮಾಡಿದ್ದಲ್ಲಿ ಪ್ರತಿಯೊಬ್ಬರಿಗೆ ತಿಂಗಳಿಗೆ ರೂ.8,800 ಸಿಗುತ್ತಿತ್ತು."

-ಯೋಜನಾ ಆಯೋಗದ ಒಂದು ಅಧ್ಯಯನ ವರದಿ

"ಅವರು ಮೊದಲು ದಲಿತರು. ಆ ನಂತರವೇ ಮುಸ್ಲಿಮರು ಅಥವಾ ಕ್ರಿಶ್ಚಿಯನ್ನರೂ ಆಗಿರುತ್ತಾರೆ. ಅದರಲ್ಲೂ ದಲಿತ ಮುಸ್ಲಿಮರ ಸ್ಥಿತಿಗತಿ ಎಲ್ಲಾ ಧರ್ಮಗಳಲ್ಲಿರುವ ದಲಿತರಿಗಿಂತ ಹೀನಾಯವಾಗಿದೆ. ಆದ್ದರಿಂದ ದಲಿತರು ಯಾವುದೇ ಧರ್ಮಗಳಿಗೆ ಸೇರಿದ್ದರೂ ಮೀಸಲಾತಿಗೆ ಅರ್ಹರು."

-ಪ್ರೊ.ಸತೀಶ್ ದೇಶಪಾಂಡೆ, ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ನೇಮಕ ಮಾಡಿದ ಅಧ್ಯಯನ ಸಮಿತಿಯ ಅಧ್ಯಕ್ಷ

## ನಂಬಿದ್ರೆನಂಬಿ ಬಿಟ್ರೆಬಿಡಿ



"ಕಾಂಗ್ರೆಸ್ ಸರಕಾರವು ಸಮಾಜದಲ್ಲಿನ ಅಸಮಾನತೆಯನ್ನು ತೊಲಗಿಸಿ ಸಮಾನತೆಯನ್ನು ಸ್ಥಾಪಿಸಲು ಪ್ರಯತ್ನಿಸಿತ್ತು. ಆದರೆ ಕಳೆದ ಬಾರಿ ಅಧಿಕಾರದಲ್ಲಿದ್ದ ಜೆಡಿಎಸ್-ಬಿಜೆಪಿ ಪಕ್ಷಗಳು ಸಮಾಜದಲ್ಲಿ ಅಸಮಾನತೆ ತಲೆದೋರುವಂತೆ ಮಾಡಿವೆ."

-ದಿ.ಬಿ.ಚಂದ್ರೇಗೌಡ

"ಕ್ರಿಮಿನಲ್ ಹಿನ್ನೆಲೆ ಹೊಂದಿರುವವರಿಗೆ ಮತ್ತು ರಿಯಲ್ ಎಸ್ಟೇಟ್ ವ್ಯವಹಾರದವರಿಗೆ ಟಿಕೆಟ್ ನೀಡುವುದಿಲ್ಲ."

- ಜಗದೀಶ್ ಟೈಟ್ಲರ್

## ಬಣ್ಣದ ಜನಗಳಿಗೆ ಒಂದು ಬುದ್ಧಿಮಾತು

"ಹೊಗೇನಕಲ್ ವಿವಾದದಲ್ಲಿ ಚಿತ್ರ ಕಲಾವಿದರು ರಾಜಕಾರಣಿಗಳ ಭಾಷೆಯಲ್ಲಿ ಮಾತನಾಡದೆ ಕಲಾವಿದರ ಭಾಷೆಯಲ್ಲಿ ಮಾತಾಡಬೇಕು. ಕಲೆ ಪ್ರೀತಿಸುವುದನ್ನು ಹೇಳಿಕೊಡುತ್ತದೆ. ಕಲಾವಿದರು ಪ್ರೀತಿಯ ಪ್ರತಿಪಾದಕರಾಗಬೇಕೇ ಹೊರತು ದ್ವೇಷವನ್ನು ಪ್ರತಿಪಾದಿಸಬಾರದು. ಹೊಗೇನಕಲ್ ಚಿತ್ರದ ವಿಲನ್‌ಗಳು ರಾಜಕಾರಣಿಗಳು. ಸದ್ಯಕ್ಕೆ ಈ ವಿಲನ್‌ಗಳ ಕೈಯಿಂದ ನಾಡನ್ನು ಉಳಿಸಲು ಮತ್ತು ಶಾಂತಿ-ಸೌಹಾರ್ದ ಸ್ಥಾಪನೆ ಮಾಡಲು ತಮಿಳು ಮತ್ತು ಕನ್ನಡ ಚಿತ್ರನಟರು ಒಂದಾಗಿ ಕರೆ ನಿಡಬೇಕು.".

- ವಾರ್ತಾ ಭಾರತಿ ಪತ್ರಿಕೆಯ ಸಂಪಾದಕೀಯದ ಸಾಲುಗಳು

## ವಿವೇಕವನ್ನು ಕಂಪಲ್ಸರಿ ರಜೆಯ ಮೇಲೆ ಕಳಿಸಿದಾಗ ಆಗುವ ಪ್ರಮಾದಗಳು

"ಉಡುಪಿ ಮಠ ಮತ್ತು ಧರ್ಮಸ್ಥಳ ಕ್ಷೇತ್ರಗಳು ಕರಾವಳಿಯ ಎರಡು ಪ್ರಬಲ ಶಕ್ತಿ ಕೇಂದ್ರಗಳು. ಅವು ಸದಾ ಮೇಲ್ಜಾತಿಗಳ ಬಲಿಷ್ಠ ಹಿತವನ್ನು ಕಾಯುವಲ್ಲೇ ಮಗ್ನವಾಗಿವೆ. ಇದು ದೂರದಲ್ಲಿರುವ ಅಂದರೆ ಬೆಂಗಳೂರಿನಲ್ಲಿ ಕೂತವರಿಗೆ ಕಾಣಲಿಕ್ಕಿಲ್ಲ. ಕೆಳಜಾತಿಯಿಂದ ಬಂದ, ಇವರ ಪ್ರತಿಯೊಂದನ್ನೂ ಹುಟ್ಟಿದಾಗಿನಿಂದ ಹತ್ತಿರದಿಂದ ಬಲ್ಲ ನನ್ನಂತವನಿಗೆ ನಿಮ್ಮ ಪತ್ರಿಕೆಯ ವಿಶೇಷ ಪುರವಣಿ ಮುಜುಗರಕ್ಕೀಡುಮಾಡಿತು."

- ಅಜಯ್‌ಕುಮಾರ್ ಶೆಟ್ಟಿ, ವಿಕ್ರಾಂತ ಕರ್ನಾಟಕ ಪತ್ರಿಕೆಯಲ್ಲಿ

# ಸತ್ಯ-ಸುಳ್ಳುಗಳ ಹೊಗೇನಕಲ್ ವಿವಾದ



## ಕಂಡಹಾಗೆ

■ ಗೌರಿ ಲಂಕೇಶ್

ಮನುಷ್ಯನೊಬ್ಬನ ಅಜ್ಞಾನ ಮಾತ್ರ ಅಷ್ಟು ಅಪಾಯಕಾರಿಯಾಗಿರುವುದಿಲ್ಲ, ಆದರೆ ಆತನಲ್ಲಿ ಅಜ್ಞಾನದೊಂದಿಗೆ ದುರ್ಬುದ್ಧಿಯೂ ಸೇರಿಕೊಂಡರೆ ಆತ ಸೈತಾನನಿಗಿಂತಲೂ ಅಪಾಯಕಾರಿಯಾಗುತ್ತಾನೆ. ರಾಜ್ಯದ ಮುಖ್ಯಮಂತ್ರಿ ಆಗುವ ಮಹತ್ವಾಕಾಂಕ್ಷೆಯನ್ನು ಹೊಂದಿರುವ ಯಡಿಯೂರಪ್ಪ ಅಜ್ಞಾನ, ದುರ್ಬುದ್ಧಿ ಎರಡೂ ಸಮ್ಮಿಲನಗೊಂಡಿರುವ ಅಪಾಯಕಾರಿ ಸೈತಾನನ ತದ್ರೂಪಿ!

ಇದನ್ನ ಯಾಕೆ ಹೇಳುತ್ತಿದ್ದೇನೆಂದರೆ ಮೊನ್ನೆ ಮಿತ್ರರೊಬ್ಬರು ಈತನನ್ನು ಸಂದರ್ಶಿಸಲು ಹೋದಾಗ ಈಗ ಎಲ್ಲೆಡೆ ಗಲಭೆಗೆ ಕಾರಣವಾಗಿರುವ ಹೊಗೇನಕಲ್ ವಿವಾದದಿಂದ ಹಿಡಿದು ರಾಜ್ಯದ ಪ್ರಸ್ತುತ ಆಗುಹೋಗುಗಳ ಬಗ್ಗೆಯೂ ಯಡ್ಡಿ ಅಪಾರ ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ಉದಾಹರಣೆಗೆ ಹೊಗೇನಕಲ್ ವಿವಾದದ ನೆಲೆ ಏನೆಂದು ಯಡಿಯೂರಪ್ಪನವರಿಗೆ ಸ್ಪಷ್ಟವಾಗಿ ಗೊತ್ತಿಲ್ಲ. ಪ್ರಸ್ತುತ ಯೋಜನೆಗೆ 1988 ರಲ್ಲೇ ಆಗ ಕೇಂದ್ರದಲ್ಲಿ ಅಧಿಕಾರ ಹೊಂದಿದ್ದ ಆತನ ಬಜೆಪಿ ಪಕ್ಷವೇ ತಮಿಳುನಾಡಿಗೆ ಅನುಮತಿ ನೀಡಿತ್ತು ಎಂಬುದೂ ಗೊತ್ತಿಲ್ಲ. ಹೋಗಲಿ, ರಾಜ್ಯಗಳ ನಡುವಿನ ಜಲ ವಿವಾದಗಳನ್ನು ಕುರಿತಂತೆ ತಮ್ಮವರ ಪಕ್ಷದ ನಿಲುವಾದರೂ ಏನು ಎಂಬುದೂ ಅವರಿಗೆ ಗೊತ್ತಿಲ್ಲ. ಇವುಗಳನ್ನು ಕುರಿತ ಯಾವ ಪ್ರಶ್ನೆಗೂ ಸಮರ್ಪಕವಾಗಿ ಉತ್ತರಿಸಲಾಗದ ಯಡಿಯೂರಪ್ಪ "ಇದೆಲ್ಲ ಸುಳ್ಳು. ಸಾಕ್ಷ್ಯ ತೋರಿಸಲಿ. ಅದೆಲ್ಲ ನನಗೆ ಗೊತ್ತಿಲ್ಲ. ವಿವಾದವನ್ನು ಅರ್ಥ ಮಾಡಿಕೊಳ್ಳಲು ಹೊಗೇನಕಲ್‌ಗೆ ಹೋಗಿದ್ದೆ. ಇಲ್ಲಿನ ಗಲಭೆಗಳಿಗೆ ಕರುಣಾನಿಧಿಯೇ ಕಾರಣ" ಎಂದೆಲ್ಲ ಸಂದರ್ಶನದುದ್ದಕ್ಕೂ ಅರಚಾಡಿದ್ದಾರೆ.

ಒಂದು ವಿಷಯದ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಳ್ಳಲೂ ಪ್ರಯತ್ನಿಸದ, ಬದಲಾಗಿ ಅದಕ್ಕೊಂದು ಸೈಟ್ ಸೀಯಿಂಗ್ ಟೂರ್ ಹೋಗುವ, ಎಲ್ಲಾ ಸಮಸ್ಯೆಗಳಿಗೆ ಬೇರೆಯವರತ್ತ ಬೊಟ್ಟು ಮಾಡುವ ಈ ಮನುಷ್ಯ ನಾಳೆ ಈ ರಾಜ್ಯದ ಮುಖ್ಯಮಂತ್ರಿಯಾದರೆ ಏನು ಗತಿ?

ಸದ್ಯಕ್ಕೇನೊ ಈ ವಿವಾದ ತಣ್ಣಗಾಗಿದೆ. ಚುನಾವಣೆಗಳ ಗಲಾಟೆ, ಸರ್ಕಾರ ರಚನೆಯ ಅಬ್ಬರ ಮುಗಿದ ನಂತರ ಇದು ಮತ್ತೊಮ್ಮೆ ಭುಗಿಲೇಳುವುದು ನಿಶ್ಚಿತ. ಹಾಗೆಯೇ ಗೆದ್ದರೂ, ಸೋತರೂ ಯಡಿಯೂರಪ್ಪ ಅದನ್ನು ತನ್ನ ರಾಜಕೀಯ ಲಾಭಕ್ಕಾಗಿ ಈಗಿನಂತೆ ಆಗಲೂ ಉಪಯೋಗಿಸಿಕೊಳ್ಳುವುದರಲ್ಲಿ ಅನುಮಾನಗಳಿಲ್ಲ.

ಸುಮ್ಮನೆ ಯೋಚಿಸಿ. ಇತ್ತ ಚುನಾವಣೆಗಳು ಮುಗಿಯುತ್ತಿದ್ದಂತೆ ಅತ್ತ ಈ ಯೋಜನೆಗೆ ಕರುಣಾನಿಧಿ ಮರುಚಾಲನೆ ನೀಡುತ್ತಾರೆ. ಆಗ ರಾಜ್ಯದಲ್ಲಿ ಮತ್ತೆ ಪ್ರತಿಭಟನೆಗಳು ಶುರುವಾಗುತ್ತವೆ. ತಮಿಳು ಸಿನಿಮಾ, ಪತ್ರಿಕೆ, ಕೇಬಲ್ ಟಿವಿ ಬಂದ್ ಮಾಡಿ ಎಂದು ಇಲ್ಲಿಯವರು ಅಬ್ಬರಿಸಿದರೆ ಅಲ್ಲಿ ಕರ್ನಾಟಕ ಬಸ್‌ಗಳಿಗೆ ಕಲ್ಲು ತೂರುವ, ಸವಾಲೆಸೆಯುವಂತೆ ಮಾತಾಡುವವರು ಕಾಣಿಸಿಕೊಳ್ಳುತ್ತಾರೆ. ಒಂದು ವೇಳೆ ಇಂತಹ ಉದ್ವೇಗಕಾರಿ ಸನ್ನಿವೇಶ ಉದ್ಭವವಾದರೆ ಎರಡೂ ಕಡೆ ಸಂಯಮದಿಂದ ಪರಿಹಾರ ಸೂಚಿಸಬಲ್ಲ, ಹಾಗೆ, ಪರಸ್ಪರ ಸೌಹಾರ್ದಯುತವಾಗಿ ಕೊಡು-ತೊಗೋ ರೀತಿಯ ಹೊಂದಾಣಿಕೆಯ ಮಾತುಗಳಿಗೆ ಜಾಗವೇ ಇರುವುದಿಲ್ಲ.

ಕಳೆದ ಹತ್ತು ದಿನಗಳ ಗಲಾಟೆಗಳನ್ನೇ ನೋಡಿ. ತಮಿಳುನಾಡಿನ 1335 ಕೋಟಿಯ ಈ ಕುಡಿಯುವ ನೀರು ಹಾಗೂ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಯೋಜನೆಗೆ 1998 ರಲ್ಲೇ ಜೆ.ಎಚ್. ಪಟೇಲರ ಸರ್ಕಾರ ಸಮ್ಮತಿ ನೀಡಿ ದುಡುಕಿತ್ತು, ಈ ಒಪ್ಪಿಗೆಯ ವ್ಯವಹಾರವನ್ನು ಕುದುರಿಸಿಕೊಟ್ಟಿದ್ದು ಆಗ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ. ಅದನ್ನೆಲ್ಲ ಬೇಕಂತಲೇ ಮರೆತಿರುವ, ಅಥವಾ ಗೊತ್ತಿರದ ಯಡಿಯೂರಪ್ಪ ಈಗ ಇಡೀ ವಿವಾದಕ್ಕೆ ಬೆಂಕಿ ಹಚ್ಚಿದ್ದಾರೆ.

ತಾನೇ ಕರ್ನಾಟಕದ ಮುಂದಿನ ಮುಖ್ಯಮಂತ್ರಿಯಾಗಬೇಕೆಂದು ವಿಪರೀತ ಟೆನ್ಶನ್ ಮಾಡಿಕೊಂಡು ತಲೆಕೆಟ್ಟವನಂತೆ ತಿರುಗುತ್ತಿರುವ ಯಡಿಯೂರಪ್ಪ ಹೊಗೇನಕಲ್ ವಿಚಾರ ಕಿವಿಗೆ ಬೀಳುತ್ತಿದ್ದಂತೆ ನಿಂತ ಕಾಲಲ್ಲೇ ಅಲ್ಲಿಗೆ ಓಡಿಹೋದರು. ಲೈಫ್ ಜಾಕೆಟ್ ಧರಿಸಿ ತೆಪ್ಪದಲ್ಲಿ ಕೂತು ಒಂದೆರಡು ರೌಂಡ್ ಹಾಕಿ ವಾಪಸ್ ಬಂದರು. "ಅನ್ಯಾಯ, ಅನ್ಯಾಯ" ಎಂದು ಅರಚಿದರು.



ಈ ಯಡಿಯೂರಪ್ಪ ಎಂಥ ಅವಿವೇಕಿಯೆಂದರೆ ಆತನಂತೆ ತಮಿಳುನಾಡಿನಲ್ಲಿ ಚೆಡ್ಡಿ ತೊಟ್ಟಿರುವ ಬಿಜೆಪಿಗಳೇ 'ಯಡಿಯೂರಪ್ಪನದು ಬರೀ ಸ್ಟಂಟ್' ಎಂದು ಗೇಲಿ ಮಾಡಿವೆ.

ಹಾಗಾದರೆ ಒಂದು ರಾಷ್ಟ್ರೀಯ ಪಕ್ಷವಾಗಿರುವ ಬಿಜೆಪಿಗೆ ಈ ವಿವಾದದ ಬಗೆಗಿನ ಖಚಿತ ನಿಲುವೇನು?

ಬೇರೇನಿರಲು ಸಾಧ್ಯ. ಅನುಕೂಲಸಿಂಧು ನಿಲುವೇ ಅವರ ನಿಲುವಲ್ಲವೇ?

ಇನ್ನು ಕಾಂಗ್ರೆಸ್ ಹಾಗೂ ಜನತಾದಳಗಳ ನಿಲುವುಗಳೂ ಇದಕ್ಕಿಂತ ಭಿನ್ನವಾಗಿರಲು ಸಾಧ್ಯವಿಲ್ಲ. ರಾಜಕೀಯ ಪಕ್ಷಗಳ ಇಬ್ಬಂದಿತನ ಈ ರೀತಿಯದ್ದಾದರೆ ನಮ್ಮ ಕನ್ನಡ ಸಂಘಟನೆಗಳ ನಿಲುವುಗಳಲ್ಲಾದರೂ ಒಂದು ದೂರದೃಷ್ಟಿ, ರಚನಾತ್ಮಕ ಚಿಂತನೆಗಳಿವೆಯಾ ಎಂದು ನೋಡಿದರೆ ಅಲ್ಲೂ ನಿರಾಶೆಯಾಗುತ್ತದೆ. ಅವರಿಗೆ ಪ್ರತಿಭಟನೆ, ಪತ್ರಿಕಾ ಪ್ರಚಾರಗಳು ಮುಖ್ಯವಾಗುತ್ತದೆಯೇ ವಿನಃ ಪರಿಹಾರಗಳತ್ತ ಯೋಚಿಸುವಷ್ಟು ವ್ಯವಧಾನವಿಲ್ಲ.

ಈಗ ಹೊಗೇನಕಲ್ ವಿವಾದದತ್ತ ಗಮನಹರಿಸುವ. 1998 ರ ಸುಮಾರಿಗೆ ಧರ್ಮಪುರಿ ಹಾಗೂ ಕೃಷ್ಣಗಿರಿ ಜಿಲ್ಲೆಗಳ 30 ಲಕ್ಷ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಹೊಗೇನಕಲ್ ಕುಡಿಯುವ ನೀರಿನ ಯೋಜನೆಗೆ ತಮಿಳುನಾಡು ಚಾಲನೆ ನೀಡಿತ್ತು, ಸಹಜವಾಗೇ ಕರ್ನಾಟಕ ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿತ್ತು, ಆಗ ಕರ್ನಾಟಕದ ಕಾವೇರಿ 4 ನೇ ಹಂತದ ಬೆಂಗಳೂರಿನ ಕುಡಿಯುವ ನೀರಿನ ಯೋಜನೆಗೆ ತಮಿಳುನಾಡು ಕೂಡ ಆಕ್ಷೇಪಿಸಿತ್ತು, ನಂತರದ ದಿನಗಳಲ್ಲಿ ರಾಜ್ಯದ ಕಳಸಾ ಬಂಡೂರಿ ಮತ್ತಿತರ ಅನೇಕ ಏತ ನೀರಾವರಿ ಯೋಜನೆಗಳಿಗೂ ತಮಿಳುನಾಡು ಅಡ್ಡಿ ಮಾಡಿತ್ತು.

ಕಾವೇರಿ ನದಿ ನೀರಿನ ಹಂಚಿಕೆಯ ಒಪ್ಪಂದ ಹಾಗೂ ನಂತರದ ವಾದ ವಿವಾದಗಳನ್ನು ಕೇಳಿದ್ದ ನ್ಯಾಯಮಂಡಳಿ ಕೇರಳ ಸೇರಿದಂತೆ ಮೂರು ರಾಜ್ಯಗಳಿಗೆ ನೀರಿನ ಪಾಲನ್ನು ನಿಗಧಿಗೊಳಿಸಿದ್ದೇ ಅಲ್ಲದೆ ಯಾವುದೇ ರಾಜ್ಯ ಹೊಸ ಯೋಜನೆ ಕೈಗೊಳ್ಳುವಾಗ ಸಂಬಂಧಿಸಿದ ಇನ್ನೊಂದು ರಾಜ್ಯದ ಸಹಮತ ಪಡೆಯಬೇಕೆಂದು ಸೂಚಿಸಿತ್ತು.

ಈ ನಿಯಮ ಈಗಲೂ ಜಾರಿಯಲ್ಲಿವೆ. ಮತ್ತೊಂದೆಡೆ ರಾಷ್ಟ್ರೀಯ ಜಲಮಂಡಳಿಯ ಯಾವುದೇ ಜಲವಿವಾದಗಳಿದ್ದಾಗಲೂ ಜನರಿಗೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಲು ಮೊದಲ ಆದ್ಯತೆ ನೀಡಬೇಕೆಂದು ಹೇಳುತ್ತದೆ.

ಈ ನಿಯಮಗಳ ಹಿನ್ನೆಲೆಯಲ್ಲಿ 1998 ರ ಜೂನ್ 29 ರಂದು ದೆಹಲಿಯಲ್ಲಿ ಒಂದು ಜಂಟಿ ಸಭೆ ನಡೆಯಿತು. ಆಗಿನ ಕೇಂದ್ರ ನೀರಾವರಿ ಸಚಿವಾಲಯದ ಹಿರಿಯ ಅಧಿಕಾರಿಯೊಬ್ಬ ಮಧ್ಯಸ್ಥಿಕೆ ವಹಿಸಿ ಬೆಂಗಳೂರಿಗೆ ಕಾವೇರಿ 4 ನೇ ಹಂತದ ನೀರು ಸರಬರಾಜು ಯೋಜನೆಗೆ ತಮಿಳುನಾಡು ಆಕ್ಷೇಪಿಸದಂತೆಯೂ, ಅದೇ ರೀತಿ ಹೊಗೇನಕಲ್ ಕುಡಿಯುವ ನೀರಿನ ಯೋಜನೆಗೆ ಆಕ್ಷೇಪಿಸದೆ ಕರ್ನಾಟಕ ಒಪ್ಪಬೇಕೆಂದೂ ಒಂದು ಪ್ರಸ್ತಾಪವನ್ನು ಮುಂದಿಟ್ಟಿದ್ದರು.

ವಾಸ್ತವ ಸಂಗತಿ ಏನೆಂದರೆ ಎರಡೂ ರಾಜ್ಯಗಳೂ ಈ ಪ್ರಸ್ತಾಪಕ್ಕೆ ಸಮ್ಮತಿಸಿದ್ದವು. ಅಷ್ಟೇ ಅಲ್ಲದೆ ಆಗ ಕೇಂದ್ರ ವಿದ್ಯುತ್ ಸಚಿವರಾಗಿದ್ದ ಕುಮಾರಮಂಗಳಂ ಇನ್ನೊಂದು ಪ್ರಸ್ತಾಪವಿಟ್ಟು "ಹೊಗೇನಕಲ್ ಜಲ ವಿದ್ಯುತ್ ಯೋಜನೆಯಲ್ಲಿ ಕರ್ನಾಟಕವು ಹಣ ಹೂಡಿ ಒಟ್ಟು ಉತ್ಪತ್ತಿಯಾಗುವ 400 ಮೆಗಾವ್ಯಾಟ್ ವಿದ್ಯುತ್‌ನಲ್ಲಿ ತಲಾ 200 ಮೆಗಾವ್ಯಾಟ್ ಹಂಚಿಕೊಂಡು ಬಳಸುವಂತಾ ಗಲಿ" ಎಂದೂ ಸೂಚಿಸಿದ್ದರು.

ನಿಜಕ್ಕೂ ಇದೊಂದು ರಚನಾತ್ಮಕ ಸಲಹೆಯಾಗಿತ್ತು.

ಕರ್ನಾಟಕ ಈ ಅವಕಾಶವನ್ನು ಯಾಕೆ ಉಪಯೋಗಿಸಿಕೊಳ್ಳಲಿಲ್ಲ ಎಂಬುದು ಯಾರಿಗೂ ಗೊತ್ತಾಗುತ್ತಿಲ್ಲ.


ಅದೆಲ್ಲ ಇರಲಿ, ಈಗ ಎಲ್ಲರಿಗೂ ಗೊತ್ತಿರುವಂತೆ ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪಿನಂತೆ ಕರ್ನಾಟಕ ಪ್ರತಿ ವರ್ಷ ತಮಿಳುನಾಡಿಗೆ 192 ಟಿಎಂಸಿ ಅಡಿಗಳಷ್ಟು ನೀರು ಹರಿಸಬೇಕಿದೆ. ಅದನ್ನು ಅಳೆಯುವ ಕೇಂದ್ರ ಬಿಳಿಗುಂಡ್ಲುವಿನಲ್ಲಿದೆ. ಇದು ಹೊಗೇನಕಲ್‌ಗಿಂತ ಹತ್ತು ಕಿಲೋಮೀಟರ್ ಮೊದಲೇ ಇರುವ ಸ್ಥಳ. ಆದರೆ ತಮಿಳುನಾಡು ಈಗಲೂ ಮೊಟ್ಟೂರಿನಲ್ಲೇ ಈ ಮಾಪನ ನಡೆಯಬೇಕೆಂದು ಸುಪ್ರೀಂಕೋರ್ಟಿನಲ್ಲಿ ಕೇಳುತ್ತಿದೆಯಾದರೂ ಅದಿನ್ನು ಬಗೆಹರಿದಿಲ್ಲ. ಸಾರಾಂಶದಲ್ಲಿ ಹೇಳಬೇಕೆಂದರೆ ಕರ್ನಾಟಕ ಒಮ್ಮೆ ತಮಿಳುನಾಡಿಗೆ ನಿಗದಿತ 192 TMC ನೀರು ಬಿಳೀಗುಂಡ್ಲುಗೆ ಹರಿಸಿದ ನಂತರ ಆ ಲಭ್ಯ ನೀರಿನಲ್ಲಿ ತಮಿಳುನಾಡು ಯಾವ ಯೋಜನೆ ಕೈಗೊಂಡರೂ ಅದನ್ನು ಆಕ್ಷೇಪಿಸುವುದು ಅರ್ಥಹೀನ. ಅಂದರೆ ಹೊಗೇನಕಲ್ ಕುಡಿಯುವ ನೀರಿನ ಯೋಜನೆಗೆ ಬಳಕೆಯಾಗಲಿರುವ 1.4 ಟಿಎಂಸಿ ಅಡಿ ನೀರು ಕರ್ನಾಟಕ ಹೆಚ್ಚುವರಿಯಾಗಿ ಹರಿಸಬೇಕಾದ ನೀರಲ್ಲ, ತಮಿಳುನಾಡು ತನ್ನ ಪಾಲಿನ ನೀರಿನಲ್ಲಿ ಕೈಗೊಳ್ಳುತ್ತಿರುವ ಯೋಜನೆ ಅದು. ಕಾವೇರಿ ನದಿಯು ಬಿಳೀಗುಂಡ್ಲು ದಾಟದ ನಂತರ ಕರ್ನಾಟಕದ ಜವಾಬ್ದಾರಿ ಮುಗಿಯುತ್ತದೆ. ವಸ್ತುಸ್ಥಿತಿ ಹೀಗಿದ್ದಾಗಲೂ ಯಡಿಯೂರಪ್ಪ ಹುಯಿಲೆಬ್ಬಿಸಿದ್ದೇಕೆ?

ಆತುರಗೆಟ್ಟ ಆಂಜನೆಯನಂತೆ ವರ್ತಿಸುವ ಯಡ್ಡಿಯಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಬರಲಿರುವ ಚುನಾವಣೆಯಲ್ಲಿ ಮೆಜಾರಿಟಿ ಸೀಟ್ ಗೆದ್ದು ಬರಲು ನಾನಾ ಸರ್ಕಸ್ ನಡೆಸುತ್ತಿರುವ ಯಡ್ಡಿಗೆ ಹೊಗೇನಕಲ್‌ನ ತಳಬುಡ ಗೊತ್ತಿಲ್ಲದಿದ್ದರೂ ದೊಡ್ಡ ವಿವಾದವೆಬ್ಬಿಸಿದರು. ಅದಕ್ಕೆ ಸರಿಯಾಗಿ ಕನ್ನಡ ಸಂಘಟನೆಗಳೂ, ಸಿನಿಮಾ ಕಲಾವಿದರೂ ಬೀದಿಗಿಳಿದರು. ತಮಿಳುನಾಡಿನಲ್ಲೂ ನಿಜ ಸ್ಥಿತಿ ಏನೆಂದು ವಿವರಿಸುವ ಬದಲಾಗಿ ವೀರಾವೇಶದ ಮಾತುಗಳು ಕೇಳಿಬಂದವು.

ಈಗಲೂ ಕಾಲ ಮಿಂಚಿಲ್ಲ, ಕರ್ನಾಟಕ-ತಮಿಳುನಾಡು ಪರಸ್ಪರ ಮಾತುಕತೆಯ ಮೂಲಕ ಯಾರಿಗೂ ಹೊರೆಯಾಗದಂತೆ ಎರಡೂ ರಾಜ್ಯಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಕೈಗೊಳ್ಳಬೇಕು.

ಹೊಗೇನಕಲ್ ಪ್ರದೇಶ ಸುತ್ತಲಿನ ಜಾಗ ಯಾರಿಗೆ ಸೇರಬೇಕೆಂಬ ಬಗ್ಗೆ ವೈಜ್ಞಾನಿಕ ಸರ್ವೆ ನಡೆಸಿ ಗಡಿ ವಿಚಾರ ಬಗೆಹರಿಸಿಕೊಳ್ಳಬೇಕು.

ಇಷ್ಟನ್ನು ಸರ್ವಸಮ್ಮತವಾಗಿ ಏರ್ಪಡಿಸಲು ಕೇಂದ್ರ ಸರ್ಕಾರ, ಎರಡೂ ರಾಜ್ಯ ಸರ್ಕಾರಗಳೂ ಹಾಗೂ ಅಷ್ಟೇ ಮುಖ್ಯವಾಗಿ ರೈತ, ಜನಪರ ಸಂಘಟನೆಗಳೂ ಕ್ರಿಯಾಶೀಲರಾಗಬೇಕು. ಅಷ್ಟನ್ನು ಅವರೆಲ್ಲರಿಂದ ನಿರೀಕ್ಷಿಸುವಂತಾಗಲಿ. ■




# Toilet ಲೀಡರ್ ಪ್ರಧಾನಿ ಆಗ್ತಾರಂತೆ!

ಇತರೆ ಇಂಗ್ಲಿಷ್ ಪತ್ರಿಕೆಗಳಿಗಿಂತ ಅತಿ ಹೆಚ್ಚು ಪ್ರಸಾರ ಹೊಂದಿರುವ ದೈನಿಕವನ್ನು ಹಲವರು TOI ಎಂದು ಸಂಕ್ಷಿಪ್ತವಾಗಿ ಕರೆಯುವುದುಂಟು. ಆದರೆ ಆ ಪತ್ರಿಕೆಯಲ್ಲಿ ಪ್ರಕಟವಾಗುವ ಸುದ್ದಿಗಳನ್ನು, ಅದು ನಡೆಸುವ ಜನಾಂದೋಲನಗಳನ್ನು ಅಪಾರ ಕಾಳಜಿ ವಹಿಸುವ ವಿಷಯಗಳನ್ನು ಗಮನಿಸಿರುವ ಜನರು ಆ ಪತ್ರಿಕೆಯ ಸಂಕ್ಷಿಪ್ತ ಹೆಸರಿನೊಂದಿಗೆ let ಎಂಬ ಮೂರು ಅಕ್ಷರಗಳನ್ನು ಜೋಡಿಸಿ ಅದನ್ನು `Toilet' ಪತ್ರಿಕೆ ಎಂದೂ ಕರೆಯುವುದುಂಟು.

ಈ Toilet ಪತ್ರಿಕೆ ಇತ್ತೀಚೆಗೆ `Lead India' ಎಂಬ ಆಂದೋಲನವನ್ನು ನಡೆಸಿತ್ತು. (ಈ ಆಂದೋಲನ ಅದರ ಪುಟಗಳಿಗೆ ಮಾತ್ರ ಸೀಮಿತವಾಗಿತ್ತು ಎಂಬುದು ಬೇರೆ ವಿಷಯ). ಭಾರತದಾದ್ಯಂತ ನಡೆದ ಈ Toilet ಆಂದೋಲನದಲ್ಲಿ ಆರ್.ಕೆ. ಮಿಶ್ರಾ ಎಂಬ ಉತ್ತರ ಪ್ರದೇಶ ಮೂಲದ ಬೆಂಗಳೂರು ನಿವಾಸಿ ಗೆದ್ದಿದ್ದನಲ್ಲದೆ ಈ Toilet ಲೀಡರ್‌ಗೆ ನಮ್ಮ ಪ್ರಜಾತಂತ್ರ ದೇಶದ ಪ್ರಧಾನಿ ಮನಮೋಹನ್ ಸಿಂಗ್‌ರೇ 'ಭಾರತದ ಲೀಡರ್' ಎಂಬ ಪ್ರಶಸ್ತಿಯನ್ನು ದಯಪಾಲಿಸುವ ವ್ಯವಸ್ಥೆಯನ್ನು Toilet ಮಾಡಿತ್ತು.

ಇದು ಭಾರತದ ಪ್ರಜಾತಂತ್ರ ವ್ಯವಸ್ಥೆ ಬಗ್ಗೆ Toilet ಮಾಡಿದ ವ್ಯಂಗ್ಯವೋ ಅಥವಾ ಅಂತಹ ಲೀಡರ್ ಒಬ್ಬನನ್ನು ಗೌರವಿಸುವ ಮೂಲಕ ಪ್ರಧಾನಿಯವರು ಎಲ್ಲಾ ಭಾರತೀಯರಿಗೆ ಮಾಡಿದ ಅವಮಾನವೋ ಬಲ್ಲವರಾರು?

ಅದೆಲ್ಲ ಬದಿಗಿರಲಿ, ಸದ್ಯದ ವಿಷಯ ಯಾವುದೆಂದರೆ ಆ Toilet ಪ್ರಶಸ್ತಿಯನ್ನೇ ನೆತ್ತಿಗೇರಿಸಿಕೊಂಡಿರುವ Toilet ಲೀಡರ್ ಮಿಶ್ರಾ ತನ್ನ ಕಾರ್ಪೊರೇಟ್ ಹುದ್ದೆಗೆ ಈಗ ಟಾಟಾ ಹೇಳಿದ್ದಾನಲ್ಲದೆ, ಎಲ್ಲಾ ವಿಷಯಗಳ ಬಗ್ಗೆ ತನ್ನ ಗಬ್ಬುನಾರುವ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನೇ ಹೊಸ ಕಸುಬನ್ನಾಗಿಸಿಕೊಂಡಿದ್ದಾನೆ. Toilet ಜಗತ್ತಿನಲ್ಲಿ ಆತನ ಅಭಿಪ್ರಾಯಗಳನ್ನು ಬಯಸುವ Toilet ಜನರೂ ಇದ್ದಾರೆಂಬುದು ವಿಪರ್ಯಾಸದ ಸಂಗತಿಯಾದರೂ ಸತ್ಯ!

ಈ Toilet ಮನುಷ್ಯನಿಂದ 'ಜ್ಞಾನ' ಮತ್ತು ಮಾರ್ಗದರ್ಶನವನ್ನು ಪಡೆಯಲು ಇತ್ತೀಚೆಗೆ ಆತ ಪ್ರಾರಂಭಿಸಿರುವ ಪ್ರತಿದಿನದ 'ದರ್ಬಾರ್'ಗೆ ಕೆಲ ಜನರೂ ಹಾಜರಾಗುತ್ತಿದ್ದಾರೆ. ಈ ದರ್ಬಾರ್‌ಗಳಲ್ಲಿ ಮಿಶ್ರಾನ ಸಲಹೆಗಾರರಾಗಿ ಆತನಷ್ಟೇ 'ಅ'ಜ್ಞಾನಿಗಳಾದ ತಮಿಳುನಾಡು ಕಂ ಅಮೆರಿಕಾ ಮೂಲದವನೊಬ್ಬ ಮತ್ತು Toilet ನಲ್ಲಿ ಹಿರಿಯ ಪತ್ರಕರ್ತನಾಗಿರುವ 'ರಾಮನ ಬಾಲ'ನೊಬ್ಬ ಹಾಗೂ ಈಗ ವಿಸರ್ಜನೆಗೊಂಡಿರುವ ಬ್ಯಾಂಗಳೂರ್ ಅಜೆಂಡಾ ಟಾಸ್ಕ್ ಫಾರ್ಸ್ (Bangalore Agenda Task Farce) ಎಂಬ ಸಾಹುಕಾರರ ತಂಡದ ಬ್ರೇಮಿನ್‌ಗಳೂ ಕಾರ್ಯಪ್ರವೃತ್ತರಾಗಿದ್ದಾರಂತೆ.

Toilet ಜನ್ಮ ನೀಡಿರುವ ಈ ಪೇಪರ್ ಹುಲಿ ಇತ್ತೀಚೆಗೆ 'ಭಾರತ ಲೀಡರ್' ಎಂಬ ಲೆಟರ್‌ಹೆಡ್‌ನಲ್ಲಿ ಸರ್ಕಾರದ ವಿವಿಧ ಅಧಿಕಾರಿಗಳಿಗೆ ಆದೇಶಗಳನ್ನು ನೀಡಲಾರಂಭಿಸಿದ್ದಾನಂತೆ. ಈ ಹಿಂದೆ ಇದೇ ಮಿಶ್ರಾ ಸಾಹೇಬರು ನಗರಾಭಿವೃದ್ಧಿ ನೆಪದಲ್ಲಿ ರಸ್ತೆ, ಚರಂಡಿ ಮತ್ತು ಕಕ್ಕಸು ವಿಷಯಗಳಲ್ಲಿ ಮೂಗು ತೂರಿಸಿ ಸಾರ್ವಜನಿಕರಿಂದಲೂ, ಅಧಿಕಾರಿಗಳಿಂದಲೂ, ಉಗಿಸಿಕೊಂಡಿದ್ದರು. ಹಾಗೆ ಉಗಿಸಿಕೊಂಡಿದ್ದ ಪ್ರಕರಣಗಳ ಫೋಟೋಗಳನ್ನೇ ತನ್ನ ನೇತೃತ್ವದಲ್ಲಿ ನಡೆದ ಜನಸಾಮಾನ್ಯರ ಹೋರಾಟ ಎಂದು ಆತ ಬಿಂಬಿಸಿದ್ದರಿಂದಲೇ ಆತನನ್ನು Toilet ಲೀಡರ್ ಎಂದು Toilet ಪತ್ರಿಕೆ ಗುರುತಿಸಿತ್ತು. ಆದರೆ Toilet ಪತ್ರಿಕೆಯ ಅಜ್ಞಾನ ಸದ್ಯಕ್ಕೆ ಕರ್ನಾಟಕದ ಅಧಿಕಾರಿಗಳನ್ನು ಆವರಿಸಿಕೊಂಡಿಲ್ಲದಿರುವುದೇ ಮಾತೆ ಭುವನೇಶ್ವರಿಯ ಲಕ್!

ಅಂದಹಾಗೆ, ಈ Toilet ಲೀಡರ್ ಇನ್ನು ಹತ್ತು ವರ್ಷಗಳಲ್ಲಿ ತಾನು ಈ ದೇಶದ ಪ್ರಧಾನಿ ಆಗಲಿದ್ದೇನೆ ಎಂಬ ಭ್ರಮೆಯಲ್ಲಿದ್ದಾನಂತೆ. Toilet ಪತ್ರಿಕೆ ತನ್ನ ಹುಚ್ಚಾಟದಲ್ಲಿ ಇವನನ್ನು Toilet ಲೀಡರ್ ಎಂದು ಗುರುತಿಸಿರಬಹುದು. ಆದರೆ ಇಂತಹ ಮೂರ್ಖನನ್ನು ತನ್ನ ಪ್ರಧಾನಿಯನ್ನಾಗಿಸುವುದಕ್ಕೆ ಭಾರತವಂತೂ ಇನ್ನು ಒಂದೇ ದಶಕದಲ್ಲಿ (ಸಂಪೂರ್ಣವಾಗಿ) toilet ಆಗಿರುವುದಿಲ್ಲ ಎಂಬ ಭರವಸೆಯಂತೂ ನಮ್ಮಂಥವರಿಗಿದೆ!

# ದುಡ್ಡಿಗಾಗಿ ಸೋತ ಕ್ರಿಕೆಟಿಗರು

ನಮ್ಮ ಭಾರತೀಯ ಕ್ರಿಕೆಟ್ ಆಟಗಾರರು ಅಪ್ರತಿಮ ದೇಶ ಭಕ್ತರು. ಅವರು ಬ್ಯಾಟ್ ಬೀಸಲಿ, ಚೆಂಡೆಸೆಯಲಿ, ಫೀಲ್ಡಿಂಗ್ ಮಾಡುತ್ತಿರಲಿ, ಕೊನೆಗೆ ಪೆವಿಲಿಯನ್‌ನಲ್ಲಿ ಸುಮ್ಮನೆ ಕೂತಿರುವಾಗಲೂ ಈ ದೇಶದ ಬಗ್ಗೇನೇ ಯೋಚಿಸುತ್ತಿರುತ್ತಾರೆ. ಕ್ರಿಕೆಟ್ ಆಡುವ ಮೂಲಕ ಭಾರತದ ಮಾನ, ಗೌರವ ಪ್ರತಿಷ್ಠೆಗಳನ್ನು ಹೇಗೆ ಇನ್ನೂ ಎತ್ತರಕ್ಕೆ ಒಯ್ಯಬೇಕೆಂದು ಚಡಪಡಿಸುತ್ತಿರುತ್ತಾರೆ.

ಇಂಥ ಕಾಗಕ್ಕ-ಗುಬ್ಬಕ್ಕ ಕತೆಯನ್ನು ಮೊದಲಿನಿಂದಲೂ ನಮಗೆ ಅರೆದು ಕುಡಿಸಲಾಗುತ್ತಿದೆ. ಪೇಪರ್, ಟಿ.ವಿಗಳೆಲ್ಲ ನಮ್ಮ ಕ್ರಿಕೆಟರ್‌ಗಳ ಇಮೇಜ್ ಬಿಂಬಿಸಲ್ಪಡುವುದೇ ಹೀಗೆ...!

ಅದಿರಲಿ,

ಮೊನ್ನೆ ಚೆನ್ನೈನಲ್ಲಿ ನಡೆದ ಭಾರತ-ದಕ್ಷಿಣ ಆಫ್ರಿಕಾ ನಡುವಿನ 2ನೇ ಟೆಸ್ಟ್ ಮ್ಯಾಚ್‌ನಲ್ಲಿ ಇಂಡಿಯನ್ ಟೀಂನವರಿಗೆ ಸರಿಯಾದ ಒದೆ ಬಿತ್ತಲ್ಲ, ಆ ಹೀನಾಯ ಸೋಲಿನ ಹಿಂದೆಯೂ ಒಂದು ದುಡ್ಡಿನ ಕತೆ ಇದೆ ಗೊತ್ತಾ?

ಏಪ್ರಿಲ್ ಒಂಬತ್ತರಿಂದ ಈ 2ನೇ ಟೆಸ್ಟ್ ಶುರುವಾಗಬೇಕಿತ್ತು. ಇಂಥ ಮಹತ್ವರ ಮ್ಯಾಚುಗಳಿದ್ದಾಗ ಆಟಗಾರರು ಒಂದೆರಡು ದಿನ ಮೊದಲೇ ಸ್ಥಳಕ್ಕೆ ಹೋಗಿ ಪ್ರಾಕ್ಟೀಸ್ ಮಾಡುತ್ತಾ ಇರುತ್ತಾರೆ. ಆದರೆ ರಾಹುಲ್ ದ್ರಾವಿಡ್ ಬುಧವಾರದ ಬೆಳ್ಳಂಬೆಳಗ್ಗೆ ಚೆನ್ನೈಗೆ ಓಡೋಡಿ ಬಂದು ಪ್ಯಾಡ್ ಕಟ್ಟಿ ಬ್ಯಾಟಿಂಗ್‌ಗೆ ಇಳಿದ. ಅದಕ್ಕೂ ಮೊದಲು ಅವನೆಲ್ಲಿದ್ದ ಗೊತ್ತೇ?

ಬೆಂಗಳೂರಿನಲ್ಲಿ.....!

ಏನು ಮಾಡುತ್ತಿದ್ದ ಗೊತ್ತಾ.....?

ಜಾಹೀರಾತು ಶೂಟಿಂಗ್.....!!

ಯಾರಿಗಾಗಿ ಗೊತ್ತಾ.....?

ಮಲ್ಯ ಒಡೆತನದ ಕಿಂಗ್‌ಫಿಷರ್ ಕ್ರಿಕೆಟ್ ಟೀಂಗಾಗಿ ಮತ್ತು ದುಡ್ಡಿಗಾಗಿ.....!!!




ಈ ಮಾನಗೇಡಿ ಆಟಗಾರ ಕಿಂಗ್‌ಫಿಷರ್ ಟೀಂಗೆ ತನ್ನನ್ನೇ ಹರಾಜಾಕಿಕೊಂಡಿರುವ ಸಂಗತಿ ನಿಮಗೆ ಗೊತ್ತೇ ಇದೆ. ಇಂತಾ ಹರಾಜುಕೋರ ಕ್ರಿಕೆಟರ್‌ಗಳ ಐಪಿಎಲ್ ಟೂರ್ನಿ ಇದೇ ಏಪ್ರಿಲ್ 18ರಿಂದ ಶುರುವಾಗುತ್ತಿದೆ.

ಇದರ ಪೂರ್ವಭಾವಿ ಸಿದ್ಧತೆಗಾಗಿ ಭಾರೀ ಜಾಹೀರಾತುಗಳು, ಪ್ರಚಾರದ ಸಿದ್ಧತೆ ನಡೆಯುತ್ತಿದೆ. ಅದರಲ್ಲಿ ಭಾಗಿಯಾಗಲು ಏಪ್ರಿಲ್ 7-8ರ ಸೋಮವಾರ - ಮಂಗಳವಾರ ಪೂರ್ತಿ ದ್ರಾವಿಡ ಬೆಂಗಳೂರಲ್ಲೇ ಇದ್ದ, ಕುಡಿಯುತ್ತಾ ಡ್ಯಾನ್ಸ್ ಮಾಡುತ್ತಾ ನಿದ್ದೆಗೆಟ್ಟು ಬುಧವಾರ ನೇರಾ ಚೆನ್ನೈಗೆ ಆಡಲು ಹೋಗಿದ್ದಾನೆ.

ಇನ್ನು ಶ್ರೀಶಾಂತ್, ಯುವರಾಜ್ ಸಿಂಗರ ಕತೆಯೂ ಇದೇನೆ.

ಇವರಿಬ್ಬರೂ ದೇಶಭಕ್ತ ಕ್ರಿಕೆಟರ್‌ಗಳು. ಟೆಸ್ಟ್‌ಮ್ಯಾಚ್‌ನ ಹಿಂದಿನ ಎರಡು ದಿನ ದೆಹಲಿಯಲ್ಲಿ ಇದೇ ರೀತಿ ಡ್ಯಾನ್ಸ್ ಪಾರ್ಟಿಯ ಮೋಜಿನಲ್ಲಿದ್ದದ್ದು ಇಂಗ್ಲಿಷ್ ಟಿವಿ ಚಾನೆಲ್‌ಗಳಲ್ಲಿ ಪ್ರಸಾರವಾಗಿದೆ.

ಅತ್ತ ಸೌತ್ ಆಫ್ರಿಕಾ ಟೀಂನವರು ಟೆಸ್ಟ್ ಮ್ಯಾಚಿಗೆ ಪ್ರಾಕ್ಟೀಸ್ ಮಾಡುತ್ತಿದ್ದಾಗ ಇಂಡಿಯನ್ ಆಟಗಾರರು ತಮ್ಮನ್ನು ಖರೀದಿಸಿದ್ದ ಬಾಸ್‌ಗಳೆದುರು ಶಿಖಂಡಿ ನೃತ್ಯ ಮಾಡುತ್ತಿದ್ದರು. ವಾಸ್ತವ ಹೀಗಿರುವಾಗ ಟೆಸ್ಟ್ ಮ್ಯಾಚ್ ಗೆಲ್ಲುವ ಮಾತೆಲ್ಲಿ ಹೇಳಿ?


సాక్షి
WWW.SAKSHI.COM
అర్హులందరికీ తెల్ల కార్డులు

# 'ಸಾಕ್ಷಿ' ಎಂಬ ಪ್ರಾಕ್ಸಿ ವಾರ್

ಪಕ್ಕದ ತೆಲುಗು ನಾಡಿನ ಪತ್ರಿಕಾ ಸಮರದ ಕತೆ ಇದು.

ಅಲ್ಲಿ ಮೊನ್ನೆ ಮಾರ್ಚ್ 23ರಂದು ಹೊಸ ದಿನಪತ್ರಿಕೆ ಲಾಂಚ್ ಆಗಿದೆ. ಹೆಸರು 'ಸಾಕ್ಷಿ.'

ಬರೋಬ್ಬರಿ 23 ಎಡಿಷನ್‌ಗಳು, ಭರ್ತಿ ಮೂವತ್ತು ಕಲರ್ ಪುಟಗಳು, ಜುಜುಬಿ 2 ರೂಪಾಯಿಗಳಿಗೆ ಸಿಗುವ ಸಾಕ್ಷಿ ಶುರುವಾದ ಎರಡನೇ ದಿನವೇ ಅದರ ಸರ್ಕುಲೇಷನ್ ಹನ್ನೆರಡೂಮುಕ್ಕಾಲು ಲಕ್ಷಕ್ಕೆ ತಲುಪಿತ್ತು ಅಂತ ಜಗನ್‌ಮೋಹನ್ ಹೇಳಿಕೊಂಡಿದ್ದಾನೆ. ಈ ಜಗನ್ ಸಾಕ್ಷಿಯ ಮಾಲೀಕ, ಈ ಜಗನ್ ಆಂಧ್ರ ಮುಖ್ಯಮಂತ್ರಿ ಕಾಂಗ್ರೆಸ್‌ನ ರಾಜಶೇಖರ ರೆಡ್ಡಿಯ ಮಗನೂ ಹೌದು. ಒಂದು ಕಾಲಕ್ಕೆ ಪತ್ರಿಕೋದ್ಯಮ ಪತ್ರಿಕೋದ್ಯಮಿಗಳ ಕೈಲಿತ್ತು, ಕಳೆದ ದಶಕದಿಂದೀಚೆಗೆ ಕಾರ್ಪೊರೇಟ್ ಕುಬೇರರು ಅಲ್ಲಿಗೆ ಕಾಲಿಟ್ಟಿದ್ದರು. ಕೇಬಲ್ ಟಿವಿ ಬಂದ ಮೇಲಂತೂ ಹೊಸ ಚಾನೆಲ್ ಶುರು ಮಾಡುವುದು ಬ್ಯುಸಿನೆಸ್‌ಮೆನ್‌ಗಳ ಪಾಲಿಗೆ ತಮ್ಮ ವ್ಯವಹಾರದ ವಿಸ್ತರಣೆಯಂತಾಗಿ ಹೋಗಿದೆ.

ಇದೀಗ ರಾಜಕಾರಣಿಗಳ ಸರದಿ.

ಜಗನ್ ಸಾಕ್ಷಿ ಶುರು ಮಾಡಲು ಪ್ರಮುಖ ಕಾರಣ ರಾಜಕೀಯವೆ. ಆಂಧ್ರದ ಲೀಡಿಂಗ್ ಡೈಲಿಯಾದ ಈನಾಡು ತೆಲುಗು ದೇಶಂ ಬೆಂಬಲಿಗ ರಾಮೋಜಿರಾಯರ ಪತ್ರಿಕೆ. ಇನ್ನು ಆಂಧ್ರಜ್ಯೋತಿ ಕಾಂಗ್ರೆಸ್ ವಿರೋಧಿ. ಇವೆರಡೂ ಪತ್ರಿಕೆಗಳು ಮುಖ್ಯಮಂತ್ರಿ ರಾಜಶೇಖರ ರೆಡ್ಡಿಯನ್ನು ನಿತ್ಯ ಬೆಂಬಿ... ಕಿರುಕುಳ ನೀಡುತ್ತಿದ್ದವು. ಕಳೆದ ಬಾರಿಯ ಚುನಾವಣೆಯಲ್ಲೂ ರೆಡ್ಡಿಗೆ ಕಾಟ ನೀಡಿದ್ದವು. ಇದರಿಂದ ಕೆರಳಿದ ರೆಡ್ಡಿ ಎಲೆಕ್ಷನ್ ಗೆದ್ದ ಮೇಲೆ ತಮಗೆ ಸಿಕ... ಅಧಿಕಾರ ಬಳಸಿಕೊಂಡು ರಾಮೋಜಿರಾಯರ ಈನಾಡು, ಈಟಿವಿ ಹಾಗೂ ಮಾರ್ಗದರ್ಶಿ ಚಿಟ್ ಫಂಡ್ ವಿರುದ್ಧ ವ್ಯವಸ್ಥಿತ ತಿರುಗೇಟು ಕೊಟ್ಟರು.

ರಾಮೋಜಿರಾವ್‌ಗೆ ಈಗ ಅಲ್ಲಿ ಉಸಿರುಗಟ್ಟುವ ಪರಿಸ್ಥಿತಿ ಬಂದಿದೆ. ಏಟಿನ ಮೇಲೆ ಏಟೆಂಬಂತೆ 'ಈನಾಡು'ಗೆ ವಿರುದ್ಧವಾಗಿ ರೆಡ್ಡಿ ಮಗ ಜಗನ್ ಈಗ ಸಾಕ್ಷಿ ಡೈಲಿ ಲಾಂಚ್ ಮಾಡಿದ್ದಾನೆ. ಚಂದ್ರಬಾಬು ನಾಯ್ಡು ಮೇಲೆ ಸಾಕ್ಷಿಯಲ್ಲೀಗ ನಿತ್ಯ ಪ್ರತಿ ದಾಳಿ ನಡೆದಿದೆ.



ಆಂಧ್ರದ ಹತ್ತೊಂಭತ್ತು ಕೇಂದ್ರಗಳಲ್ಲದೆ ದೆಹಲಿ, ಬಾಂಬೆ, ಚೆನ್ನೈ ಹಾಗೂ ಬೆಂಗಳೂರು ಎಡಿಷನ್‌ಗಳೂ ಸಾಕ್ಷಿಗಿದೆ. ಕರ್ನಾಟಕದ ಸುದ್ದಿಗಳೇ ಮೂರ್ನಾಲ್ಕು ಪುಟ ಸಾಕ್ಷಿಯಲ್ಲಿ ಪ್ರಿಂಟಾಗುತ್ತಿವೆ.

ದುಡ್ಡಿನ ಬಲ ಒಂದಿದ್ದರೆ ಹಣವಂತರು ಏನನ್ನು ಬೇಕಾದರೂ ಮಾಡಲು ಹೊರಡುತ್ತಾರೆನ್ನಲು ಸಾಕ್ಷಿಯೇ ಸಾಕ್ಷಿ.

ಓದುಗನ ಮನಸ್ಸಾಕ್ಷಿ 'ಸಾಕ್ಷಿ'ಯನ್ನು ಒಪ್ಪುತ್ತದಾ ಕಾದು ನೋಡಬೇಕಿದೆ.



## ರಾಜ್ಯಸಭೆಯಲ್ಲಿ ಅಂಬಾನಿ ಶಾಖೆ

ಮುಖೇಶ್ ಅಂಬಾನಿ ಎಂಬ ಕೋಟ್ಯಾಧಿಪತಿ ಉದ್ಯಮಿ ತನ್ನ ಮೂರು ಆಪ್ತರನ್ನು ಮೂರು ವಿವಿಧ ರಾಜ್ಯಗಳಿಂದ ರಾಜ್ಯಸಭೆಗೆ ಚುನಾಯಿತರಾಗುವಂತೆ ನೋಡಿಕೊಳ್ಳುವ ಮೂಲಕ ಈಗ ರಾಜ್ಯಸಭೆಯಲ್ಲೇ ತನ್ನ ರಿಲೈಯನ್ಸ್ ಕಂಪನಿಯ ಶಾಖೆಯೊಂದನ್ನು ತೆರೆದಿದ್ದಾನೆ. ಬರುವ ದಿನಗಳಲ್ಲಿ ಈ ಮೂವರು ಸಂಸದರನ್ನು ಪೆಟ್ರೋಲಿಯಂ, ಟೆಲಿಕಾಮ್ ಮತ್ತು ಚಿಲ್ಲರೆ ವ್ಯಾಪಾರ ಇಲಾಖೆಗಳು ತಮ್ಮ ಸಲಹಾ ಮಂಡಳಿಗಳಿಗೆ ನೇಮಿಸಿಕೊಂಡು ಅಂಬಾನಿ ಇನ್ನಷ್ಟು ಶ್ರೀಮಂತನಾಗುವಂತ ಕಾರ್ಯಾಚರಣೆ ಪ್ರಾರಂಭಿಸಿದರೆ ಅಚ್ಚರಿ ಇಲ್ಲ.



ಅಂದಹಾಗೆ, ಈ ಮೂವರಲ್ಲಿ ಪರಿಮಲ್ ನಾಥವಾಣಿ ಎಂಬಾತ ಜಾರ್ಖಂಡ್ ರಾಜ್ಯದಿಂದ ಆಯ್ಕೆಯಾದ ಪ್ರಕ್ರಿಯೆ ಈಗ ರಾಜಕೀಯ ವಲಯಗಳಲ್ಲಿ ಗಬ್ಬುನಾಥವನ್ನು ಹರಡಿದೆ. ಯಾಕೆಂದರೆ ಆ ರಾಜ್ಯದ ಜೆಎಂಎಂ ಪಕ್ಷದ ಶಾಸಕರಿಗೆ ಮುಖೇಶ್ ಅಂಬಾನಿ ಅದೆಷ್ಟು ಅಮೇಧ್ಯ ತಿನ್ನಿಸಿದನೆಂದರೆ ಅವರೆಲ್ಲ ತಮ್ಮ ಪಕ್ಷದ ಅಧಿಕೃತ ಅಭ್ಯರ್ಥಿಯನ್ನೇ ಸೋಲಿಸಿ ನಾಥವಾಣಿಯನ್ನು ಗೆಲ್ಲಿಸಿದ್ದಾರೆ! ಅಂದರೆ ಜನರು ಆಯ್ಕೆ ಮಾಡಿ ಗೆಲ್ಲಿಸಿದ್ದ ಶಾಸಕರು ತಮ್ಮನ್ನು ತಾವೇ ಹರಾಜು ಮಾಡಿಕೊಂಡಿದ್ದಾರೆ. ಎಷ್ಟು ಅದ್ಭುತ ನಮ್ಮ ಪ್ರಜಾಪ್ರಭುತ್ವ!

## ಸುಮ್ ಸುಮ್ಮನೆ




ಭಿಕ್ಷುಕ : ತುಂಬಾ ಹಸಿವಾಗ್ತಿದೆ. ನಂಗೊಂದಿಷ್ಟು ಊಟ ಕೊಡಿ.

ಪುರುಷ : ಊಟ ಕೊಡಲ್ಲ, ವಿಸ್ಕಿ ಬೇಕೂಂದ್ರೆ ಕೊಡ್ತಿನಿ.

ಭಿಕ್ಷುಕ : ನನಗೆ ಮದ್ಯ ಬೇಡ, ಊಟ ಬೇಕು.

ಪುರುಷ : ಸಿಗರೇಟು ಕೊಡ್ತಿನಿ ಬೇಕಾ?

ಭಿಕ್ಷುಕ : ನಾನು ಸಿಗರೇಟು ಸೇದುವುದಿಲ್ಲ, ಊಟ ಬೇಕು.

ಪುರುಷ : ನೋಡು, ನಿನಗೆ ಬಟ್ಟೆಯಾಗಿ ಒಬ್ಬಳು ಮಹಿಳೆಯನ್ನು ಒದಗಿಸಬಲ್ಲೆ.

ಭಿಕ್ಷುಕ : ಬೇಡ ನಾನು ನನ್ನ ಹೆಂಡತಿಗೆ ನಿಷ್ಠನಾಗಿದ್ದೇನೆ. ನನಗೆ ಊಟ ಬೇಕಷ್ಟೆ.

ಪುರುಷ : ನಾನು ನಿನಗೆ ಊಟ ಕೊಡುತ್ತೇನೆ, ಆದರೆ ಒಂದು ಷರತ್ತಿನ ಮೇಲೆ...

ಭಿಕ್ಷುಕ : ಏನು ಷರತ್ತು?

ಪುರುಷ : ನೀನು ಮೊದಲು ನನ್ನ ಹೆಂಡತಿಯನ್ನು ಭೇಟಿಯಾಗಬೇಕು

ಭಿಕ್ಷುಕ : ಯಾಕೆ?


ಪುರುಷ : ಯಾಕೆಂದರೆ ಮದ್ಯ ಕುಡಿಯದ, ಸಿಗರೇಟ್ ಸೇದದ, ಪರಸ್ತ್ರೀಯರೊಂದಿಗೆ ಲೈಂಗಿಕ ಸಂಪರ್ಕ ಬೇಡವೆನ್ನುವ ಮನುಷ್ಯ ಹೇಗಿರುತ್ತಾನೆ ಎಂದು ಆಕೆಗೆ ತೋರಿಸಲು!

****

"ಮದ್ಯಪಾನ ಎಲ್ಲಾ ಸಮಸ್ಯೆಗಳಿಗೆ ಉತ್ತರವಲ್ಲ ನಿಜ. ಆದರೆ ದರಿಂದ ನಿಮ್ಮ ಎಲ್ಲ ಸಮಸ್ಯೆಗಳು ಮರೆತುಹೋಗುತ್ತವೆ"

– 'ಸ್ವಾಮಿ' ವಿಜಯ್ ಮಲ್ಯ


## ಅತಿ ಆಶೆಯ ಲಿಂಬಾವಳಿ ಗತಿಗೇಡಿನ ಮೈಲಾರಿ



ಬಿಜೆಪಿಯಲ್ಲಿ ಯಡ್ಡಿ ಮಕ್ಕಳಷ್ಟೇ ರಾಜಕೀಯಕ್ಕೆ ಬರುತ್ತಿಲ್ಲ, ಪಕ್ಕಾ ಚೆಡ್ಡಿಗಳಿಗೂ ಅಪ್ಪಾ ಮಕ್ಕಳ ಖಾಯಿಲೆ ಅಂಟಬಿಟ್ಟದೆ. ಇದಕ್ಕೆ ತಾಜಾ ಉದಾಹರಣೆ ಅಂತಿದ್ದರೆ, ಅದು 'ದಲಿತ ಬ್ರಾಹ್ಮಣ' ಅರವಿಂದ ಲಿಂಬಾವಳಿ.

ಜನ್ಮಾಪಿ ಬ್ರಾಹ್ಮಣರನ್ನೇ ನಾಚಿಸುವಂತೆ ಆರೆಸ್ಸೆಸ್ ಸಂಸ್ಕಾರ ವಂತನಾದ ಲಿಂಬಾವಳಿ ಸದ್ಯ ಬಿಜೆಪಿ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷ. ಮೊದಲೇ ಎಮ್ಮೆಲ್ಸಿಗಿರಿಯಿದೆ. ಹಾಗೊಮ್ಮೆ ಬಿಜೆಪಿ ಸರ್ಕಾರ ಬಂದರೆ ಖಂಡಿತಾ ಮಂತ್ರಿಯಾಗಬಲ್ಲ, ಆದರೆ ದುರಾಶೆ ಬಿಡಬೇಕಲ್ಲ; ಅದೇನೋ ಮಗನಿಗೆ ಹೆಣ್ಣು ನೋಡಲು ಬಂದ ಅಪ್ಪ ತಾನೇ ಮತ್ತೊಂದು ಮದುವೆಯಾಗ್ತೀನಿ ಅಂದಂತೆ; ಲಿಂಬಾವಳಿಗೆ ಬೆಂಗಳೂರಿನ ಮಹದೇವಪುರದಿಂದ ಬಿಜೆಪಿ ಅಭ್ಯರ್ಥಿಯಾಗುವ ಪಿತ್ಥ ಕೆದರಿಬಿಟ್ಟದೆ.


ಅಷ್ಟಕ್ಕೂ ಲಿಂಬಾವಳಿಗೂ ಮಹದೇವಪುರಕ್ಕೂ ಏನಕೇನ ಸಂಬಂಧವಿಲ್ಲ, ಇಲ್ಲಿಂದ ಬಿಜೆಪಿ ಅಭ್ಯರ್ಥಿಯಾಗುವ ಕನಸು ಹೊತ್ತು ಕಳೆದೆರಡು ವರ್ಷಗಳಿಂದ ಬಿಜೆಪಿ ಬಾಗಿಲು ಬಡಿದದ್ದು ಬೆಂಗಳೂರು ವೀವಿಯ ದಲಿತ ಪ್ರೊಫೇಸರ್ ಮೈಲಾರಪ್ಪ, ಹಾಗೊಮ್ಮೆ ಮೈಲಾರಪ್ಪ ಬೇಡವೆಂದರೆ ಮತ್ತೊಬ್ಬ ದಲಿತ ನಾಯಕ ಕೆಂಪಾಪುರ ಮೂರ್ತಿಗೆ ಮಹದೇವಪುರದ ಇಂಚಿಂಚೂ ಗೊತ್ತಿದೆ. ವೈ. ವೆಂಕಟೇಶ್, ಮದನ್‌ಮಲ್ಲು, ಚೀನಾ ರಾಮು; ಹೀಗೆ ಬಿಜೆಪಿ ಟಿಕೆಟ್ಟಗಾಗಿ ಹಪಹಪಿಸುತ್ತಿರುವ ದಲಿತರ ಹಿಂಡೇ ಮಹದೇವ ಪುರದಲ್ಲಿದೆ.



ಹೀಗಿದ್ದೂ ಲಿಂಬಾವಳಿಗೆ ತಾನೇ ಮಹದೇವಪುರಕ್ಕೆ ಅಭ್ಯರ್ಥಿಯಾಗುವ ಚಪಲ. ಸರಿ, ಕ್ಷೇತ್ರದ ಪರಿಚಯವಾದರೂ ಇದೆಯಾ? ಅಂದರೆ ಲಿಂಬಾವಳಿಯದ್ದು ದೂರದ ಬಾಗಲಕೋಟೆ. ಎಮ್ಮೆಲ್ಲೇಯಾಗೇ ತೀರಬೇಕೆಂಬ ದರ್ದೂ ಇದ್ದಂತಿಲ್ಲ, ಈಗಾಗಲೇ ಎಮ್ಮೆಲ್ಸಿಯಾಗಿದ್ದಾರೆ. ಸಾಲದ್ದಕ್ಕೆ ಅವರ ತಂಗಿಯ ಗಂಡ ರಘು ಈಗಾಗಲೇ ಶಾಂತಿನಗರಕ್ಕೆ ಎಮ್ಮೆಲ್ಲೆಯಾಗಿದ್ದು ಸದ್ಯ ಸಿ.ವಿ. ರಾಮನ್‌ನಗರಕ್ಕೆ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ರಘು ಪತ್ನಿ ಅಂದರೆ ಲಿಂಬಾವಳಿ ಖಾಸಾ ತಂಗಿ ಪ್ರತಿಮಾ ರಘು ಈ ಹಿಂದೆ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲರ್ ಆಗಿ ಅಧಿಕಾರ ಉಂಡಾಗಿದೆ. ಭಾಮೈದನಿಗೊಂದು 'ಬ' ಫಾರ್ಮ್, ಪಕ್ಕದಲ್ಲೇ ತನಗೂ ಒಂದು 'ಬ' ಫಾರ್ಮ್ ಗಿಟ್ಟಿಸಿ; 'ಭಾವ-ಭಾಮೈದ, ಇಬ್ಬರೂ ಎಮ್ಮೆಲ್ಲೇಗಳಾದರೆ ಮುಂದೊಮ್ಮೆ ತಂಗಿಯನ್ನೇ ಬೆಂಗಳೂರು ಮೇಯರ್ ಮಾಡುವುದು ಎಷ್ಟು ಹೊತ್ತು?

ಲಿಂಬಾವಳಿ ದುರಾಶೆಗೂ ಬಿಜೆಪಿಯ ವಂಶಾಳ್ವಿಕೆಗೂ ಅಂಕುಶವುಂಟೆ?

## ಲಂಕೇಶರ 'ಮಂಜು ಕವಿದ ಸಂಜೆ' ತಮಿಳಿಗೆ




ಲಂಕೇಶರ 'ಮಂಜು ಕವಿದ ಸಂಜೆ ಮತ್ತು ಇತರ ಕತೆಗಳು' ಸಂಕಲನ ಈಗ ತಮಿಳಿಗೆ ಅನುವಾದಗೊಂಡು ಪ್ರಕಟವಾಗಿದೆ.

ತಮಿಳು ಸಾಹಿತ್ಯದ ಪ್ರಸಿದ್ಧ ಬರಹಗಾರ ಹಾಗೂ ಪ್ರಗತಿಪರ ಚಿಂತಕ ಎರಾಯಡಿಯನ್ (ದಾಸ್) ಈ ಕತೆಗಳನ್ನು ಅನುವಾದಿಸಿದ್ದಾರೆ.

ಡಿಸೋಜಾನ ಊವಿನ ವೃತ್ತಿ, ಶಾರದೆಯ ಪುಟ್ಟ ಸಾಹಸ, ಕ್ಷೀಜುವಿನ ಹಠ, ದಯೆ ಮತ್ತು ದಾಕ್ಷಿಣ್ಯ ಮುಂತಾದ 12 ಕತೆಗಳಿರುವ ಈ ಸಂಕಲನ ಲಂಕೇಶರ ನಿರ್ಗಮನದ ನಂತರ 2004ರಲ್ಲಿ ಮೊದಲ ಬಾರಿಗೆ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿತ್ತು. ಕಾವೇರಿ, ಹೊಗೇನಕಲ್ ಗಡಿ ಮುಂತಾದ ನಿತ್ಯ ಕಲಹದಲ್ಲಿ ಮುಳುಗಿರುವ ಕನ್ನಡಿಗರು ಹಾಗೂ ತಮಿಳರ ನಡುವೆ ಈಗ ಪರಸ್ಪರ ಸ್ನೇಹ, ಸಹಕಾರ, ಹಿತಾಸಕ್ತಿಗಳ ರಕ್ಷಣೆಗೆ ಪೂರಕ ವಾತಾವರಣ ನಿರ್ಮಾಣವಾಗಲೇಬೇಕಾದ ಕಾಲಘಟ್ಟವಿದು.


ಕನಿಷ್ಠ ಏನಿಲ್ಲವೆಂದರೂ ಸಾಂಸ್ಕೃತಿಕ ವಿನಿಮಯವಾಗುವಷ್ಟು space ಉಳಿದಿರುವುದಂತೂ ಖುಷಿಯ ಸಂಗತಿ.

ಲಂಕೇಶರ ಕತೆಗಳು ಈಗ ತಮಿಳು ಭಾಷೆಗೆ ಹೋಗಿರುವುದು ಅಂತಾದ್ದೊಂದು ಪುಟ್ಟ ಘಟನೆ.

# ಅನಂತ್‌ಕುಮಾರ್‌ಗೆ ಯಡ್ಡಿ ಫಿಟ್ಟಿಂಗ್

**ಯಡ್ಡಿ ಯಾಕೆ ಹೀಗೆ ಅನಂತ್ ವಿರುದ್ಧ ಹಠ ಸಾಧಿಸುತ್ತಿದ್ದಾರೆ ಗೊತ್ತೆ? ಇನ್ನೇನು ಆರೆಂಟು ತಿಂಗಳಲ್ಲಿ ಪಾರ್ಲಿಮೆಂಟ್ ಚುನಾವಣೆ ಬರಲಿದೆ. ಆಗ ಬೆಂಗಳೂರು ದಕ್ಷಿಣದಿಂದ ಅನಂತ್‌ಕುಮಾರ್ ಮತ್ತೆ ಬಿಜೆಪಿ ಅಭ್ಯರ್ಥಿಯಾಗುತ್ತಾರೆ. ಅವತ್ತು ಅನಂತೂಗೆ ಯಡ್ಡಿ ಬಣದಿಂದ ಗೆದ್ದು ಬಂದಿರುವ ಬಿಜೆಪಿ ಎಂಎಲ್‌ಎಗಳ ಸಹಕಾರ ಸಿಗಕೂಡದು, ಅರ್ಥಾತ್ ಅನಂತ್‌ಕುಮಾರ್ ಸೋಲಬೇಕು ಅಷ್ಟೆ.**

ಬಿಜೆಪಿಯ ಒಳಗೆ ಎಲ್ಲವೂ ಸರಿಯಾಗಿಲ್ಲ. ಅನಂತ್‌ಕುಮಾರ್ ಹಾಗೂ ಯಡಿಯೂರಪ್ಪ ನಡುವಿನ ಮುಸುಕಿನ ಗುದ್ದಾಟ ದಶಕಗಳಷ್ಟು ಹಳೆಯದು. ಆದರೆ ಈಗ ಚುನಾವಣೆಗೆ ಇನ್ನೇನು ಒಂದೇ ತಿಂಗಳು ಉಳಿದಿರುವಾಗಲೂ ಈ ನಾಯಕರಿಬ್ಬರ ಮುಸುಕಿನ ಗುದ್ದಾಟ ನಿಲ್ಲುತ್ತಿಲ್ಲ.



ಈ ಬಾರಿ ತೋಳೇರಿಸಿಕೊಂಡು ಗುದ್ದಾಟಕ್ಕೆ ಇಳಿದಿರುವುದು ಮಾತ್ರ ಯಡ್ಡಿ. ಬೆಂಗಳೂರು ದಕ್ಷಿಣ ಕ್ಷೇತ್ರದ ಪಾರ್ಲಿಮೆಂಟ್ ಮೆಂಬರ್ ಆಗಿರುವ ಅನಂತ್ ಕುಮಾರ್‌ಗೆ ಸಿಟ್ಟು ಬರುವ ರೀತಿಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಯಡ್ಡಿ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ಸ್ವತಃ ಅನಂತ್‌ಕುಮಾರ್‌ರ ಕ್ಷೇತ್ರದೊಳಗಿನ ಎಂಟು ವಿಧಾನಸಭಾ ಕ್ಷೇತ್ರಗಳ ವಿಚಾರವಿದು.

ಬೆಂಗಳೂರು ದಕ್ಷಿಣ ಸಂಸತ್ ಕ್ಷೇತ್ರದ ವ್ಯಾಪ್ತಿಗೆ ಗಾಂಧಿನಗರ, ಚಿಕ್ಕಪೇಟೆ, ಜಯನಗರ, ಬಿಟಿಎಂ ಲೇಔಟ್, ಬೊಮ್ಮನಹಳ್ಳಿ, ಪದ್ಮನಾಭನಗರ, ಬಸವನಗುಡಿ, ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರಗಳು ಬರುತ್ತವೆ. ಯಾವುದೇ ಪಕ್ಷವಾದರೂ ಹೀಗೆ ಅಸೆಂಬ್ಲಿ ಎಲೆಕ್ಷನ್‌ಗೆ ಅಭ್ಯರ್ಥಿಗಳನ್ನು ಆರಿಸುವಾಗ ಆಯಾ ಸಂಸತ್ ಕ್ಷೇತ್ರದ ವ್ಯಾಪ್ತಿಯ ಸದಸ್ಯರ ಅಭಿಪ್ರಾಯ ಕೇಳೇ ಕೇಳುತ್ತಾರೆ. ಈವನ್ ಮಾಜಿ ಎಂಪಿಯಾಗಿರಲಿ ಅಥವಾ ಸ್ಪರ್ಧಿಸಿ ಸೋತಿರುವವರಾಗಲಿ.

ಹಾಲಿ ಬೆಂಗಳೂರು ದಕ್ಷಿಣ ಲೋಕಸಭಾ ಸದಸ್ಯರಾಗಿರುವವರು ಬಿಜೆಪಿಯ ಅನಂತ್‌ಕುಮಾರ್. ಆದರೆ ಯಡ್ಡಿ ಗ್ಯಾಂಗ್ ಅನಂತ್‌ರನ್ನು ಒಂದು ಮಾತೂ ಕೇಳದೆ ಅನಂತ್ ವ್ಯಾಪ್ತಿಗೆ ಬರುವ ಎಂಟೂ ಅಸೆಂಬ್ಲಿ ಕ್ಷೇತ್ರಗಳ ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಕೈಹಾಕಿದೆ.

ಅಷ್ಟೇ ಅಲ್ಲ, ಸಂಭವನೀಯ ಅಭ್ಯರ್ಥಿಗಳೆಂದು ಆರಿಸಲ್ಪಟ್ಟಿರುವ ಬಹುತೇಕರು ಅನಂತ್‌ಕುಮಾರ್ ವಿರೋಧಿಗಳೆಂಬುದೇ ಇದರ ವಿಶೇಷ.

ಚಿಕ್ಕಪೇಟೆಯ ವಿಚಾರವನ್ನೇ ತೆಗೆದುಕೊಳ್ಳಿ. ಈ ಮೊದಲು ಅಲ್ಲಿಂದ ಗೆದ್ದಿದ್ದ ಬಿಜೆಪಿಯ ಪಿ.ಸಿ. ಮೋಹನ್ ಈ ಬಾರಿ ಗಾಂಧಿನಗರಕ್ಕೆ ಬರುತ್ತಿದ್ದಾರೆ. ಅಲ್ಲಿ ಅವರು ಕಾಂಗ್ರೆಸ್‌ನ ದಿನೇಶ್ ಗುಂಡೂರಾವ್ ಹಾಗೂ ಜೆಡಿಎಸ್‌ನ ಬಾಂಬ್‌ನಾಗನ ಜೊತೆ ಸೆಣೆಸಾಡಲಿದ್ದಾರೆ.

ಇತ್ತ ಖಾಲಿ ಬಿದ್ದ ಚಿಕ್ಕಪೇಟೆಗೆ ಟಿಕೆಟ್ ಬಯಸುತ್ತಿರುವವರಲ್ಲಿ ಮಾಜಿ ಕೌನ್ಸಿಲರ್ ಚಂದ್ರಪ್ಪ ಒಬ್ಬ, ಉಳಿದಂತೆ ವೇದವ್ಯಾಸಭಟ್, ಸದಾಶಿವ, ಅನಿಲ್ ಮುಂತಾದ ಲೀಡರ್‌ಗಳಿದ್ದಾರೆ.

ಇವರೆಲ್ಲಾ ಅನಂತ್‌ಕುಮಾರ್ ಬಣದವರು, ಮತ್ತು ಬಿಜೆಪಿಗಾಗಿ ವರ್ಷಾನುಗಟ್ಟಲೆ ಕೆಲಸ ಮಾಡಿರುವವರು. ಆದರೆ ಯಡ್ಡಿ ಗ್ಯಾಂಗ್ ಇವರನ್ನೆಲ್ಲಾ ಮೂಲೆಗೆ ತಳ್ಳಿ ಉದಯ್ ಗರುಡಾಚಾರ್‌ನನ್ನು ಮುಂದೆ ತರುತ್ತಿದೆ. ಪಕ್ಷದ ನಿಷ್ಠಾವಂತರಿಗಿಂತ ಈ ಭೂಗಳ್ಳ ಉದಯನೇ ಯಡ್ಡಿಗೆ ಯಾಕೆ ಬೇಕಾದ?

ಜಯನಗರ ವಿಧಾನಸಭಾ ಕ್ಷೇತ್ರದ್ದೂ ಇದೇ ಕತೆ. ಅಲ್ಲಿ ಸಿಟಿ ಬಿಜೆಪಿ ನಾಯಕ ವಿಜಯ್‌ಕುಮಾರ್ ಈ ಬಾರಿಯೂ ಬಿಜೆಪಿ ಟಿಕೆಟ್ ತರುತ್ತಾರೆಂಬ ನಂಬಿಕೆ ಎಲ್ಲರಿಗೂ ಇದೆ. ವಿಜಯಕುಮಾರ್‌ರವರು ಅನಂತ್ ಕುಮಾರರ ಕಟ್ಟಾ ಬೆಂಬಲಿಗ. ಆದರೆ ಇಲ್ಲೂ ಕಡ್ಡಿ ಆಡಿಸಲು ಹೊರಟಿರುವ ಯಡ್ಡಿ "ವಿಜಯಕುಮಾರ್ ಬೇಡ, ನಟರಾಜ್ ರೆಡ್ಡಿಗೆ ಟಿಕೆಟ್ ಕೊಡೋಣ" ಎಂದು ಕ್ಯಾತೆ ತೆಗೆದಿದ್ದಾರೆ.

ಇದು ಯಾಕೆಂದರೆ ಈ ನಟರಾಜ್ ರೆಡ್ಡಿ ಯಡ್ಡಿ ಬೆಂಬಲಿಗ.

ಇನ್ನು ಬಿಟಿಎಂ ಲೇಔಟ್‌ನಲ್ಲೂ ಪ್ರಸಾದ್ ರೆಡ್ಡಿಯೆಂಬ ಯಡ್ಡಿ ಬಣದವನಿಗೇ ಟಿಕೆಟ್ ಗ್ಯಾರಂಟಿಯಾಗಿದೆ. ಇದರಿಂದ ರೊಚ್ಚಿಗೆದ್ದಿರುವ ಲಕ್ಕಸಂದ್ರದ ಬಲಿಷ್ಠ ಬಿಜೆಪಿ ಲೀಡರ್ ಜಯದೇವ್ ತಿರುಗಿ ಬೀಳುವ ಸಾಧ್ಯತೆ ಕಾಣಿಸುತ್ತಿದೆ.

ಬೊಮ್ಮನಹಳ್ಳಿ ಕ್ಷೇತ್ರದಲ್ಲೂ ಅನಂತ್‌ಕುಮಾರ್ ಹಿಂಬಾಲಕರಾದ ಗುರುಮೂರ್ತಿ ರೆಡ್ಡಿ, ನಾರಾಯಣ ರಾಜು ಟಿಕೆಟ್‌ಗಾಗಿ ಪ್ರಯತ್ನಿಸುತ್ತಿದ್ದಾರೆ. ಆದರೆ ಅವರ ಪಾಲಿಗೆ ಯಡ್ಡಿಯೇ ಶನಿಮಹಾತ್ಮ. ಇವರ ಬದಲಿಗೆ ತನ್ನ ಭಂಟ ಸತೀಶ್ ರೆಡ್ಡಿಗೆ ಟಿಕೆಟ್ ನೀಡಲು ಯಡ್ಡಿ ಗ್ರೀನ್ ಸಿಗ್ನಲ್ ಕೊಟ್ಟುಬಿಟ್ಟಿದ್ದಾರೆ.

ಈ ಸುಳಿವು ಸಿಕ್ಕ ಮೇಲೆ ನಾರಾಯಣ ರಾಜು ಬಿಜೆಪಿ ತ್ಯಜಿಸಿ ಸ್ವತಂತ್ರ ಅಭ್ಯರ್ಥಿಯಾಗಿ ನಿಲ್ಲುವುದು ಬಹುತೇಕ ಖಚಿತವಾಗಿದೆ. ಬೊಮ್ಮನಹಳ್ಳಿ ಸಿಎಂಸಿಯ ಮಾಜಿ ಅಧ್ಯಕ್ಷ ರಾಜು ಕ್ಷತ್ರಿಯರಾಗಿದ್ದು ಅವರ ಜನಾಂಗದ್ದೇ 25 ಸಾವಿರ ಓಟುಗಳಿವೆ. ಇಲ್ಲಿ ನಾರಾಯಣ ರಾಜು ಬಿಜೆಪಿಗೆ ಏಟು ನೀಡುವುದು ಶತಸ್ಸಿದ್ಧ.

ಬೊಮ್ಮನಹಳ್ಳಿಯಿಂದ ಕಾಂಗ್ರೆಸ್ ಪಾರ್ಟಿ ಕುಪೇಂದ್ರ ರೆಡ್ಡಿಯನ್ನು ಕಣಕ್ಕಿಳಿಸುತ್ತಿದೆ. ಈತ ಎಲೆಕ್ಷನ್‌ಗಾಗಿ ರೆಡಿಯಾಗುತ್ತಿರುವ ಕುರಿತು, ಹರಿಸಲಿರುವ ದುಡ್ಡು ಇದೆಲ್ಲದರ ಬಗ್ಗೆ ನೂರಾರು ರಂಜಕ ಕತೆಗಳೇ ಕೇಳಿಬರುತ್ತಿವೆ.

ಇನ್ನು ಪದ್ಮನಾಭನಗರ ಕ್ಷೇತ್ರ.

ಇಲ್ಲಿ ಬಿಜೆಪಿಯಿಂದ ಮಾಜಿ ಮಂತ್ರಿ ಕಾಯಂ ಭೂಗಳ್ಳ ಅಶೋಕ್ ಸ್ಪರ್ಧೆಗಿಳಿಯುತ್ತಿದ್ದಾನೆ. ಒಂದು ಕಾಲದಲ್ಲಿ ಅನಂತ್‌ಕುಮಾರರ ಶಿಷ್ಯನಾಗಿ ಅವರ ಪ್ರಭಾವದಿಂದಲೇ ಮಂತ್ರಿಯಾದ ಅಶೋಕ್ ನಂತರ ರಾತ್ರೋರಾತ್ರಿ ನಿಷ್ಠೆ ಬದಲಾಯಿಸಿ ಯಡ್ಡಿ ಕ್ಯಾಂಪ್ ಸೇರಿದರು.

ಅಶೋಕ್ ಈಗ ಅನಂತ್‌ಕುಮಾರ್ ವಿರೋಧಿ ಬಣದ ಸಕ್ರಿಯ ನಾಯಕರಲ್ಲೊಬ್ಬ. ಆಶ್ಚರ್ಯದ ವಿಚಾರ ಏನೆಂದರೆ ಅಶೋಕ್‌ಗೆ ಪದ್ಮನಾಭನಗರದ ಬದಲಾಗಿ ಟಿ. ದಾಸರಹಳ್ಳಿ ಟಿಕೆಟ್ ಕೊಟ್ಟಿದ್ದರೆ ಬಹುಶಃ ಆರಾಮಾಗಿ ಗೆಲ್ಲುತ್ತಿದ್ದನೇನೊ. ಆದರೆ ಹಾಗೆ ಮಾಡಿದರೆ ಅನಂತ್ ಬಣದ ಎನ್.ಆರ್. ರಮೇಶ್ ಅಥವಾ ಮತ್ತಿನ್ಯಾರಿಗೋ ಬಿಜೆಪಿ ಟಿಕೆಟ್ ಸಿಗುವ ಛಾನ್ಸಿತ್ತು, ಅದನ್ನು ತಪ್ಪಿಸಬೇಕೆಂದೇ ಅಶೋಕ್‌ನನ್ನು ಪದ್ಮನಾಭನಗರಕ್ಕೆ ಕರೆತಂದಿದ್ದಾರೆ ಯಡ್ಡಿ. ಜೆಡಿಎಸ್‌ನ ಕಬಡ್ಡಿ ಬಾಬು ಅಶೋಕ್ ವಿರುದ್ಧ ತೊಡೆ ತಟ್ಟುತ್ತಿದ್ದಾರೆ.

ಈ ಕ್ಷೇತ್ರದಲ್ಲಿ ಮೂರು ನಗರಪಾಲಿಕೆ ವಾರ್ಡ್‌ಗಳಿವೆ. ಪದ್ಮನಾಭನಗರ ವಾರ್ಡಿನಲ್ಲಿ 1.30 ಲಕ್ಷ ಓಟರ್‌ಗಳಿದ್ದು ಬಿಜೆಪಿಯ ನಾಯಕ ಎಲ್. ಶ್ರೀನಿವಾಸ್ ತಲೆ ಕಂಡರೆ ಜನ ಉಗಿಯುವ ಸ್ಥಿತಿ ಇದೆ. ಇನ್ನು ಗಣೇಶ ಮಂದಿರದಲ್ಲಿ ಬಸವರಾಜು ಬಗ್ಗೆ ಒಳ್ಳೇ ಕೆಲಸಗಾರನೆಂಬ ಅಭಿಪ್ರಾಯವಿದೆಯಾದರೂ 25 ಸಾವಿರ ಮುಸ್ಲಿಮರೂ, 20 ಸಾವಿರ ದಲಿತರ ಓಟುಗಳೂ ಬಿಜೆಪಿ ವಿರುದ್ಧ ಬೀಳುತ್ತವೆ.

ಅಶೋಕ್‌ಗೆ ಹೊಡೆತ ಬೀಳುವ ವಾರ್ಡ್ ಇದು. ಇನ್ನು ಉಳಿಯುವ ಯಡಿಯೂರು ವಾರ್ಡ್‌ನಲ್ಲಿ 30 ಸಾವಿರ ಓಟುದಾರರಿದ್ದಾರೆ. ಬಿಜೆಪಿಗೆ ಇಲ್ಲಿ ಎನ್.ಆರ್. ರಮೇಶ್ ಒಬ್ಬರೇ ಆಧಾರ. ರಾಜ್ಯ ಬಿಜೆಪಿ ಯುವ ಮೋರ್ಛಾದ ನಾಯಕ ರಮೇಶ್‌ರ ವಿಶ್ವಾಸ ಗಿಟ್ಟಿಸಿದರೆ ಮಾತ್ರ ಅಶೋಕ್‌ಗೆ ಕೊಂಚ ಶಕ್ತಿ ಸಿಗಲಿದೆ.


ಒಟ್ಟಾರೆ ಅಶೋಕ್ ಸಂಸದ ಅನಂತ್‌ಕುಮಾರ್ ವಿರೋಧಿ ಗುಂಪಿನ ಅಭ್ಯರ್ಥಿ ಎಂಬುದೇ ಇಲ್ಲೂ ಮುಖ್ಯ ವಿಚಾರ.

ಬಸವನಗುಡಿ ಕ್ಷೇತ್ರದಲ್ಲೂ ಅನಂತ್ ಬಣದ ರವಿ ಸುಬ್ರಮಣ್ಯರನ್ನು ನಿರ್ಲಕ್ಷಿಸಿ ಯಡ್ಡಿ ಗುಂಪಿನ ಸತ್ಯನಾರಾಯಣಗೆ ಟಿಕೆಟ್ ಕೊಡಬೇಕೆಂಬ ಪ್ಲಾನ್ ನಡೆದಿದೆ. ಜೊತೆಗೆ ಈಶ್ವರಪ್ಪ ತನ್ನ ಬೆಂಬಲಿಗನೆಂದು ವೆಂಕಟೇಶ್‌ಮೂರ್ತಿ ಹೆಸರು ಮುಂದೆ ತರುತ್ತಿದ್ದಾರೆ. ಇಲ್ಲಿ ಚಿತ್ರನಟ ಭಾರತಿ ವಿಷ್ಣುವರ್ಧನ್‌ರ ಹೆಸರೂ ಕೇಳಿಬರುತ್ತಿದೆ.

ಇಲ್ಲಿ ಕಾಂಗ್ರೆಸ್‌ನಿಂದ ಚಂದ್ರಶೇಖರ್ ಹಾಗೂ ಜೆಡಿಎಸ್‌ನಿಂದ ಬಾಗೇಗೌಡ ಅಖಾಡಕ್ಕಿಳಿಯುತ್ತಿದ್ದಾರೆ.

ಮಾಜಿ ಕಾರ್ಪೊರೇಟರ್ ಸತ್ಯರನ್ನು ಕ್ಷೇತ್ರದ ಜನ ಮೊದಲಿನಿಂದಲೂ ಗಂಭೀರವಾಗಿ ಪರಿಗಣಿಸಿಲ್ಲ, ಆದರೂ ಯಡ್ಡಿಗೆ ಸತ್ಯನೇ ಬೇಕು. ಏಕೆಂದರೆ ಆತ ಅನಂತೂ ವಿರೋಧಿ ಅದಕ್ಕೆ. ಹೇಗಿದೆ ಬಿಜೆಪಿ ಒಳರಾಜಕೀಯ.

ಕೊನೆಯದಾಗಿ ಗೋವಿಂದರಾಜನಗರಕ್ಕೆ ಬಂದರೆ ಇಲ್ಲೊಂದು ಕಡೆ ಮಾತ್ರ ಅನಂತ್ ಗುಂಪಿನ ಅಶ್ವಥ್ ನಾರಾಯಣಗೆ ಬಿಜೆಪಿ ಟಿಕೆಟ್ ಸಿಗುವಂತೆ ಕಾಣುತ್ತಿದೆ. ಆದರೆ ಕಾಂಗ್ರೆಸ್‌ನ ವಿ. ಸೋಮಣ್ಣ ವಿರುದ್ಧ ಸೆಣೆಸುವಷ್ಟು



ಶಕ್ತಿ ಅಶ್ವಥ್‌ಗಿಲ್ಲ. ಎರಡು ಬಾರಿ ಅಸೆಂಬ್ಲಿ ಹಾಗೂ ಒಮ್ಮೆ ಕಾರ್ಪೊರೇಷನ್‌ಗೆ ಸ್ಪರ್ಧಿಸಿ ಸೋತಿರುವ ಅಶ್ವಥ್ ನಾರಾಯಣ್‌ಗೆ ಕೋದಂಡರಾಮಪುರ ಹಾಗೂ ಸುಧಾಮನಗರ ವಾರ್ಡ್‌ಗಳಲ್ಲಿ ಯುವಮೋರ್ಛಾದ ಎನ್.ಆರ್. ರಮೇಶ್ ಬೆಂಬಲಿಗರು ಅಶ್ವಥ್ ಪರ ಕೆಲಸ ಮಾಡಿದರೆ ಪೈಪೋಟಿ ಖಚಿತ. ಒಟ್ಟಾರೆ ಸಾರಾಂಶದಲ್ಲಿ ಹೇಳಬೇಕೆಂದರೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳಾಗಲಿರುವವರ ಪೈಕಿ ಗಾಂಧಿನಗರದ ಪಿ.ಸಿ. ಮೋಹನ್, ಜಯನಗರದ ವಿಜಯ್‌ಕುಮಾರ್ ಹಾಗೂ ಗೋವಿಂದರಾಜನಗರದ ಅಶ್ವಥ್‌ನಾರಾಯಣ ಮಾತ್ರ ಅನಂತ್ ಬೆಂಬಲಿಗರಾಗಿದ್ದಾರೆ.

ಉಳಿದಂತೆ ಚಿಕ್ಕಪೇಟೆಯ ಉದಯ ಗರುಡಾಚಾರ್, ಬಿಟಿಎಂ ಲೇಔಟ್‌ನ ಪ್ರಸಾದ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ಪದ್ಮನಾಭನಗರದ ಆರ್. ಅಶೋಕ್, ಬಸವನಗುಡಿಯ ಸತ್ಯನಾರಾಯಣ ಇವರೆಲ್ಲರೂ ಯಡ್ಡಿ ಬೆಂಬಲಿಗರು. ಅಷ್ಟೇ ಮುಖ್ಯವಾಗಿ ಕ್ಷೇತ್ರದ ಬಿಜೆಪಿ ಸಂಸದ ಅನಂತ್‌ಕುಮಾರರ ವಿರೋಧಿಗಳು.

ಇಷ್ಟು ಹೇಳಿದ ಮೇಲೆ ಇನ್ನೊಂದು ಕೊನೆ ಮಾತು ಹೇಳಿಯೇ ಬಿಡಬೇಕು.


ಯಡ್ಡಿ ಯಾಕೆ ಹೀಗೆ ಅನಂತ್ ವಿರುದ್ಧ ಹಠ ಸಾಧಿಸುತ್ತಿದ್ದಾರೆ ಗೊತ್ತೆ?

ಇನ್ನೇನು ಆರೆಂಟು ತಿಂಗಳಲ್ಲಿ ಪಾರ್ಲಿಮೆಂಟ್ ಚುನಾವಣೆ ಬರಲಿದೆ. ಆಗ ಬೆಂಗಳೂರು ದಕ್ಷಿಣದಿಂದ ಅನಂತ್‌ಕುಮಾರ್ ಮತ್ತೆ ಬಿಜೆಪಿ ಅಭ್ಯರ್ಥಿಯಾಗುತ್ತಾರೆ.


ಅವತ್ತು ಅನಂತೂಗೆ ಯಡ್ಡಿ ಬಣದಿಂದ ಗೆದ್ದು ಬಂದಿರುವ ಬಿಜೆಪಿ ಎಂಎಲ್‌ಎಗಳ ಸಹಕಾರ ಸಿಗಕೂಡದು, ಅರ್ಥಾತ್ ಅನಂತ್‌ಕುಮಾರ್ ಸೋಲಬೇಕು ಅಷ್ಟೆ.

ರಾಜಕೀಯ ಪಿತೂರಿ, ಒಳಸಂಚುಗಳಿಗೆ ಮೊದಲ್ಯಾವುದು, ಕೊನೆಯಾವುದು ಅಲ್ಲವಾ?


■ ವರದಿಗಾರ




ಕಬಡ್ಡಿ ಬಾಬು




ಉದಯ್ ಗರುಡಾಚಾರ್




ಪಿ.ಸಿ. ಮೋಹನ್



ಸತೀಶ್ ರೆಡ್ಡಿ



ಆರ್. ಅಶೋಕ್




ಕೆ. ಚಂದ್ರಶೇಖರ್


# ರೈ ಮುಖಕ್ಕೆ ರಮೇಶ್ ಮಸಿ

ಈ ಮುತ್ತಪ್ಪ ರೈ ಮುಗ್ಧನೋ ಇಲ್ಲಾ ಪೆದ್ದನೋ ಒಂದೂ ಗೊತ್ತಾಗುತ್ತಿಲ್ಲ. ತನ್ನ ಹಿಂದಿನ ಡಾನ್ ಉದ್ಯೋಗದಿಂದ ವಾಲಂಟರಿ ರಿಟೈರ್‌ಮೆಂಟ್ ತೆಗೆದುಕೊಂಡೆ ಎಂದು ಹೇಳಿಕೊಂಡ ನಂತರ ಈ ರೈಗೆ ಸಮಾಜಸೇವೆ ಮಾಡಬೇಕೆಂಬ ಬಯಕೆ ಉಂಟಾಗಿತ್ತು. ಅದಕ್ಕೆ ತಕ್ಕಂತೆ ಉಚಿತ ಸಾಮೂಹಿಕ ಮದುವೆ, ಬಡಬಗ್ಗರಿಗೆ ನೆರವು ಮುಂತಾದ ಕೆಲಸಗಳು ಶುರುವಾದವು. ಇದರಿಂದ ರೈಗೆ ಒಂದಿಷ್ಟು ಪ್ರಚಾರವೂ ಸಿಕ್ಕಿತು. ಇದರಿಂದ ಉತ್ತೇಜನಗೊಂಡ ರೈ ತಾನೇ ಗೌರವಾಧ್ಯಕ್ಷರಾಗಿರುವ 'ಜೈ ಕರ್ನಾಟಕ' ಸಂಘಟನೆಗೆ ಜನ್ಮ ನೀಡಿದ್ದಾರೆ. ಆದರೆ ಅದರ ಮರಣ ಶಾಸನವೂ ಜೊತೆಯಲ್ಲೇ ಅಂಟಿಕೊಂಡಿದೆ. ಏಕೆಂದರೆ ಈ 'ಜೈ ಕರ್ನಾಟಕ'ಕ್ಕೆ ಅಧ್ಯಕ್ಷನಾಗಿರುವ ವ್ಯಕ್ತಿ ಎಲ್. ರಮೇಶ್.

ಕ್ಷಮಿಸಿ, ಈಗವರ ಗೆಟಪ್ ಬದಲಾಗಿದೆ. ಹೆಸರನ್ನು ರಮೇಶ್ ಗೌಡರು ಅಂತಾ ಬದಲಾಯಿಸಿಕೊಂಡಿದ್ದಾರೆ.

ಜೈ ಕರ್ನಾಟಕದ ಈ ರಮೇಶ್ ಗೌಡ್ರು ಚನ್ನಪಟ್ಟಣದಲ್ಲಿ 'ರೇಷ್ಮೆ ಸೀಮೆ' ಪತ್ರಿಕೆ ಚಾಲೂ ಮಾಡಿದಾಗ, ರೈತ ಸಂಘದ ಹಣ ತಿಂದು ಒದ್ದೋಡಿಸಲ್ಪಟ್ಟಿದ್ದ. ಅನಂತರ ಕರ್ನಾಟಕ ರಕ್ಷಣಾ ವೇದಿಕೆಯ ನಾರಾಯಣಗೌಡನ ರೋಲ್‌ಕಾಲ್ ಡೀಲ್‌ಗಳಲ್ಲಿ ಕೈ ಜೋಡಿಸಿದ್ದ. ಆಗಿನ್ನೂ ಕೇವಲ ಎಲ್. ರಮೇಶನಾಗಿದ್ದ. ಜೊತೆಗೆ ಹದಿನೆಂಟು ಲಕ್ಷದಷ್ಟು ಸಾಲವೂ ಇತ್ತು. ಆದರೆ ಈಗ ರೈ ಜೊತೆ ಸೇರಿರುವಾಗ, ಜೈ ಕರ್ನಾಟಕ ಅಂತಾ ಬೋರ್ಡ್ ನೇತಾಕಿಕೊಂಡಿರುವಾಗ, ಓಡಾಡಲು ಕಾರುಗಳಿರುವಾಗ ಅಂದರೆ ಒಟ್ಟಾರೆ ಈತನ ಲೆವೆಲ್ಲೇ ಬದಲಾಗಿರುವಾಗ ಬರೀ ರಮೇಶ್ ಹೋಗಿ ರಮೇಶ್ ಗೌಡ್ರು ಎಂದಾಗಬೇಕಿರುವುದು ನ್ಯಾಯ ತಾನೆ?





## ವಸೂಲಿವೀರನ ಪುರಾಣವು

ಮೊನ್ನೆ ಹೊಗೇನಕಲ್‌ವರೆಗೂ ನೂರು ಕಾರುಗಳಲ್ಲಿ ಹೋಗಿ ಬಂದಿರುವ ಮುತ್ತಪ್ಪ ರೈಗೆ ಜನ ಸಂಘಟನೆ, ಹೋರಾಟಗಳ ಬಗ್ಗೆ ಪೆದ್ದು ಪೆದ್ದು ಕಲ್ಪನೆಗಳಿದ್ದಂತಿವೆ.

ಹತ್ತು ಗಾಡಿ (ಸ್ಕಾರ್ಪಿಯೋ ಕಾರ್) ಯಾವಾಗಲೂ ರೆಡಿ ಇರಬೇಕು. ಅದರ ತುಂಬಾ ಜನಾನೂ ಇರ್ಬೇಕು. ದಿನ ಬೆಳಗಾದರೆ ಒಂದಲ್ಲಾ ಒಂದು ಕಡೆ ಹೋಗಿ ಹೋರಾಟ (ಬಹುಶಃ ಗಲಾಟೆ ಅಂತಾ ಕಾಣುತ್ತೆ) ಮಾಡಬೇಕು.

ಇದು ಒಂದೆರಡು ವರ್ಷಗಳ ಹಿಂದೆ ನಾರಾಯಣಗೌಡ, ಪ್ರವೀಣ್ ಶೆಟ್ಟಿ, ಶಿವರಾಂ, ಎಲ್. ರಮೇಶ್ ಮುಂತಾದವರನ್ನು ಕೂರಿಸಿಕೊಂಡು ರೈ ನೀಡಿದ್ದ ಬೋಧನೆಗಳು.

ಇದೆಲ್ಲಾ ಏನಾದರೂ ಇರಲಿ, ಅವತ್ತು ನಾರಾಯಣಗೌಡನ ಹಿಂದೆ ವಿಧೇಯ ಶಿಷ್ಯನಂತೆ ಬಂದು ಕುಳಿತಿದ್ದ ರಮೇಶ ಈಗ ಏಕಾಏಕಿ ರೈನನ್ನೇ ಖೆಡ್ಡಾಕ್ಕೆ ಕೆಡವಿಕೊಂಡು ಜೈ ಕರ್ನಾಟಕ ಅಂತಾ ಘೋಷಣೆ ಹಾಕಿಕೊಂಡ ಹೊರಟಿರುವುದಂತೂ ಅತೀ ತಮಾಷೆಯಾಗಿದೆ.

ಏಕೆಂದರೆ ರೈಗೆ ಸಮಾಜಸೇವೆಯ ಹಂಬಲ ಹೊಸದಾಗಿ ಬಂದಿರಬಹುದೇನೋ. ಆದರೆ ರಮೇಶ ಸಮಾಜಸೇವಾ ನಿಪುಣ. ಈತನಿಂದ ಸೇವೆ ಪಡೆದ ಸಂಘಟನೆ, ಹೋರಾಟ, ಚಳವಳಿಗಳಲೆಲ್ಲಾ ರಮೇಶ್‌ನದೇ ಸ್ಪೆಷಲ್ ಚಾಪ್ಟರ್‌ಗಳಿವೆ.

ದುಡ್ಡು ವಸೂಲಿ ಹಾಗೂ ಗುಳುಂ ಚಟುವಟಿಕೆಗಳ ಪುರಾಣ ಅದು. ಚನ್ನಪಟ್ಟಣದ ಒಳಗೆರೆದೊಡ್ಡಿಯ ರಮೇಶ್ ಸೋನಾರಿಗೌಡರ ಹೋಟೆಲಲ್ಲಿ ಲೋಟ ತೊಳೆಯುತ್ತಲೇ ಓದುತ್ತಲೂ ಹೋದ. ಅವಾಗಲೇ ವಿದ್ಯಾರ್ಥಿ ಒಕ್ಕೂಟ ಅಂತ ಮಾಡಿ ರಾಜ್ಯಮಟ್ಟದ ಕ್ರೀಡಾ ಟೂರ್ನಿ ಮಾಡಲು ಹಣ ಎತ್ತಿದ್ದ. ಆಮೇಲೆ 'ರೇಷ್ಮೆ ಸೀಮೆ' ಪತ್ರಿಕೆ ಕಂಡುಹಿಡಿದ. ಅದಕ್ಕೆ ಗೆಳೆಯರಾದ ಶೇಖರ್, ಧರ್ಮ, ಚಿಕ್ಕಚೆನ್ನಯ್ಯ ಮಲ್ಲೇಶ್‌ರಂಥವರನ್ನೂ ಬಳಸಿಕೊಂಡ. ಆಮೇಲೆ ಚಿಕ್ಕಂತ ರೈತ ಸಂಘದವರ ನೀರಾ ಹೋರಾಟದೊಳಗೆ ಕಾಕಂಬಿಯಂತೆ ಸೇರಿಕೊಂಡ. ನುಸಿರೋಗ ಬಂದು ತೆಂಗು ಬೆಳೆಗಾರರೆಲ್ಲ ನಾಶದ ಅಂಚಿಗೆ ತಲುಪಿದ್ದಾಗ ರೈತ ನಾಯಕ ಎಂ.ಡಿ. ನಂಜುಂಡಸ್ವಾಮಿ ಈ ನೀರಾ ಚಳವಳಿಗೆ ಚಾಲನೆ ನೀಡಿದ್ದರು.

ನೀರಾ ಇಳಿಸಿ ಸಂಸ್ಕರಿಸಿ ಮಾರುವಂತಹ ಒಂದು ಬೃಹತ್ ಸಹಕಾರಿ ಚಳವಳಿಯನ್ನೇ ಕಟ್ಟಿ ಬೆಳೆಸುವ ಉದ್ದೇಶ ಎಂಡಿಎನ್‌ರದಾಗಿತ್ತು, ಆದರೆ ರಮೇಶ್‌ನಿಗೆ ಇಲ್ಲೂ ಎತ್ತುವಳಿ ಸಾಧ್ಯತೆ ಕಾಣಬೇಕೆ?

ಕೂಡಲೇ ಊರೂರು ಸುತ್ತುತ್ತಾ "ನೀರಾ ಸಹಕಾರ ಸಂಘ ಸ್ಥಾಪಿಸಲು ತಲಾ 2 ಸಾವಿರ ಕೊಡಿ" ಅಂತಾ ನೂರು ಜನರಿಂದ 2 ಲಕ್ಷದವರೆಗೂ ದುಡ್ಡೆತ್ತಿ ಬಿಟ್ಟ. ಆದರೆ ಸಂಘ ಅಸ್ತಿತ್ವಕ್ಕೆ ಬರಲೇ ಇಲ್ಲ, ಬದಲಾಗಿ ನೀರಾ ಚಳುವಳಿ ಜೋರಾಗಿ ಪೊಲೀಸ್ ಗೋಲಿಬಾರ್‌ನಲ್ಲಿ ಇಬ್ಬರು ರೈತರು ಸತ್ತರು. ಅದಕ್ಕೆ ಕಾಂಗ್ರೆಸ್ ಮಂತ್ರಿಯಾಗಿದ್ದ ಡಿ.ಕೆ. ಶಿವಕುಮಾರರ ಕುಮ್ಮಕ್ಕಿತ್ತು ಎಂದು ರೈತರು ರೊಚ್ಚಿಗೆದ್ದಿದ್ದರು. ದುರಂತ ಏನೆಂದರೆ ಇದೇ ರಮೇಶ್ ಆಮೇಲೆ ಕರ್ನಾಟಕ ರಕ್ಷಣಾ ವೇದಿಕೆಯ ಸಮಾವೇಶ ಚನ್ನಪಟ್ಟಣದಲ್ಲಿ ನಡೆದಾಗ ನಾರಾಯಣಗೌಡನ ಜೊತೆ ಡಿಕೆಶಿಯನ್ನು ಕರೆಸಿ ಸನ್ಮಾನಿಸಿ ಭಾಷಣ ಮಾಡಿಸಿಬಿಟ್ಟ.

ಪ್ರೊಫೆಸರ್ ನಂಜುಂಡಸ್ವಾಮಿಗೆ ರಮೇಶನ ಚೋರವಿದ್ಯೆ ಗೊತ್ತಾಯಿತು. ಅವರು ನಿಂತ ಹೆಜ್ಜೆಯಲ್ಲೇ ಅವನನ್ನು ರೈತ ಸಂಘದಿಂದ ಒದ್ದೋಡಿಸಿಬಿಟ್ಟರು.

ಆಮೇಲೆ ರಮೇಶ್ ಕರ್ನಾಟಕ ರಕ್ಷಣಾ ವೇದಿಕೆಯಲ್ಲಿ ಪ್ರತ್ಯಕ್ಷನಾದ. ನಾರಾಯಣಗೌಡನಿಗೆ ಆಗ ಈಗಿರುವಷ್ಟು ಪ್ರಭಾವ, ದುಡ್ಡು ತೋಳ್ಬಲ ಇರಲೇ ಇಲ್ಲ. ಕರವೇ ಚಟುವಟಿಕೆ ಚುರುಕಾದಂತೆ ನಾರಾಯಣಗೌಡನಿಗೆ ಅಲ್ಲಲ್ಲಿ ದುಡ್ಡು ಹುಟ್ಟತೊಡಗಿತು. ರಮೇಶನೂ ಇದನ್ನೆಲ್ಲಾ ಗಮನಿಸುತ್ತಿದ್ದ. ಬೆಂಗಳೂರಿನಲ್ಲಿ ಪ್ಲೇವಿನ್ ಲಾಟರಿ ಬಾಬತ್ತೊಂದರಲ್ಲೇ ನಾರಾಯಣಗೌಡನಿಗೆ ತಿಂಗಳಿಗೆ ಐವತ್ತು ಸಾವಿರ ಹಫ್ತಾ ಸಂದಾಯವಾಗುತ್ತಿತ್ತು. ಅದಕ್ಕೂ ಮೊದಲು ಹಣದ ತಾಪತ್ರಯವಾದಾಗ ನಾರಾಯಣಗೌಡ ಈ ರಮೇಶನ ಮೂಲಕವೇ ಚನ್ನಪಟ್ಟಣದಲ್ಲಿ ಏಜೆಂಟ್ ಸತ್ಯನಾರಾಯಣನಿಂದ ಎರಡು ಲಕ್ಷ ರೂಪಾಯಿ ಬಡ್ಡಿಗೆ ಸಾಲ ತಗೊಂಡಿದ್ದ. ಇತ್ತ ಕರವೇಗೆ ಹೆಸರು ಬರುತ್ತಿದ್ದಂತೆ ಅನುದಾನ ಹಂಚಿಕೆಯಾಗುತ್ತಿಲ್ಲವೆಂದು ಮುನಿಸಿಕೊಂಡ ರಮೇಶ್ ಚೆನ್ನಪಟ್ಟಣದ ಮುದಿಗೆರೆಯ ನರಸಿಂಹಸ್ವಾಮಿ ಬೆಟ್ಟದಲ್ಲೊಂದು ಅರ್ಜೆಂಟ್ ಮೀಟಿಂಗ್ ಕರೆದ. ಪ್ರವೀಣ್ ಶೆಟ್ಟಿ, ಶಿವರಾಮು, ಬಸವರಾಜು ಮುತ್ತಿಗೆ ಎಲ್ಲಾ ಅಲ್ಲಿಗೆ ಹೋದರು. ಅವತ್ತು ನಾರಾಯಣಗೌಡನ ವಸೂಲಿ ವಿದ್ಯೆಗಳ ಬಗ್ಗೆ ರಮೇಶ್ ತನಗೆ ಗೊತ್ತಿದ್ದನ್ನೆಲ್ಲಾ ಹೇಳಿ ಎಲ್ಲರಲ್ಲೂ ಸಿಟ್ಟು ಬರಿಸಿದ.

ಕರವೇ ಇಬ್ಭಾಗವಾಯಿತು.

ಇದಕ್ಕೂ ಮೊದಲು ಈ ಇಡೀ ಗುಂಪು ಮುತ್ತಪ್ಪ ರೈ ಹತ್ತಿರ ಹೋಗಿ ಸ್ವಲ್ಪ ಹಣ ಸಹಾಯ ನೀಡಿರೆಂದು ಕೇಳಿತ್ತಲ್ಲವೆ. ಆಗ ರೈ, "ನಿಮಗೊಂದ್ಹತ್ತು ಗಾಡಿ, ಒಂದು ಆಫೀಸ್ ಮಾಡಿಕೊಡ್ತೀನಿ, ನನ್ನನ್ನೇ ಗೌರವಾಧ್ಯಕ್ಷ ಮಾಡಿಕೊಳ್ಳಿ" ಅಂದಿದ್ದ.

ಅದ್ಯಾಕೋ ಆಗಿರಲಿಲ್ಲ, ನಂತರ ರೈ ತನ್ನ ಲ್ಯಾಂಡ್ ವ್ಯವಹಾರಗಳಲ್ಲಿ ಮುಳುಗಿದ.

ಅಷ್ಟರಲ್ಲಿ ರಮೇಶ್ ರೇಷ್ಮೆ ಸೀಮೆ, ರೈತ ಸಂಘ, ಕರವೇ ಎಲ್ಲಾ ಒಂದು ರೌಂಡ್ ಹಾಕಿಕೊಂಡು ಕೈಗೆ ಸಿಕ್ಕವರನ್ನೂ ಮುಳುಗಿಸಿ, ಮುಂಡಾಯಿಸಿ ತಿರುಗಾ ಚನ್ನಪಟ್ಟಣಕ್ಕೆ ಬಂದು ಸೇರಿಕೊಂಡಿದ್ದ. ಆ ನಡುವೆ ಒಮ್ಮೆ 'ರೇಷ್ಮೆ ಸೀಮೆ' ವಿಶೇಷಾಂಕ ತರ್ತೀನೆಂದು ಹೇಳಿಕೊಂಡು ಬೆಂಗಳೂರಲ್ಲೂ ಲಕ್ಷಾಂತರ ರೂಪಾಯಿ ಜಾಹಿರಾತು ಹಣ ವಸೂಲಿ ಮಾಡಿಕೊಂಡಿದ್ದ. ಆದರೆ ಆ ವಿಶೇಷಾಂಕ ಬರದೇ ಸಶೇಷಾಂಕ ಮಾತ್ರ ಉಳಿಯಿತು ಬಿಡಿ.

ಇಂತಾ ಶುದ್ಧ ಚರಿತ್ರೆಯ ಓರಾಟಗಾರ ಏನೇನು ಓಳು ಬಿಟ್ಟನೋ ಏನೋ.... ಈಗ ಮುತ್ತಪ್ಪ ರೈ ತನ್ನ ಜೈ ಕರ್ನಾಟಕ ಸಂಘಟನೆಗೆ ವಸೂಲಿ ವೀರ ರಮೇಶನನ್ನೇ ಅಧ್ಯಕ್ಷನನ್ನಾಗಿ ಪ್ರತಿಷ್ಠಾಪಿಸಿದ್ದಾನೆ. ತಾನೇ ಗೌರವಾಧ್ಯಕ್ಷನಾಗಿದ್ದಾನೆ.

ಆದರೆ ರೈ ಬಯಸುವ ಯಾವುದಾದರೂ ಸಾಮಾಜಿಕ ಅಥವಾ ಕನ್ನಡದ ಕೆಲಸ ಈ ರಮೇಶ್ ಗೌಡ್ರಿಂದ ಆಗುತ್ತೇ ಅಂತೀರಾ?

■ ಈಶ

# ಗೋಪಾಲಸ್ವಾಮಿ ನಾಮ ನೋಡಿ ಖರ್ಗೆ ಕಡೆಯವರು ಹೆದರಿದ್ದಾರಂತಲ್ಲಾ

ಮೇ 10, 16, 22. ಈ ದಿನಾಂಕಗಳು ಕರ್ನಾಟಕದ ರಾಜಕೀಯ ಪಕ್ಷಗಳ ಹಣೆಬರಹ ಬರೆಯುವಂತಹ ದಿನಾಂಕಗಳಾಗಿ ಪಾರ್ಟಿ ಲೀಡರುಗಳ ನಿದ್ದೆಯನ್ನೇ ಹಾಳು ಮಾಡಿವೆಯಂತಲ್ಲಾ, ಚುನಾವಣಾ ಆಯುಕ್ತರಾದ ಗೋಪಾಲಸ್ವಾಮಿ, ನಾಮಧಾರಿ ಅಧಿಕಾರಿಯಾಗಿದ್ದು ಕೊಡಲಿ ವಿಟಿನಂತಹ ಕೆಂಪುಗೆರೆಯ ಅಕ್ಕಪಕ್ಕದಲ್ಲಿ ಎರಡು ಬಿಳಿ ನಾಮಗಳನ್ನು ಬರೆದುಕೊಂಡರೆ ಒಂದೆರಡು ಪಾರ್ಟಿಯ ಹಣೆಬರಹವನ್ನೇ ತೋರಿದಂತಾಗುತ್ತದೆಯಂತಲ್ಲಾ, ಈ ಗೋಪಾಲಸ್ವಾಮಿಯ ಕೆಂಪು ನಾಮ ನೋಡಿದ ಖರ್ಗೆ ಕಡೆಯ ಹೈಕಳು "ಈತ ನಿಜಕ್ಕೂ ಬಿಜೆಪಿ ಒಲವಿನ ಅಧಿಕಾರಿ. ತನ್ನ ಬಿಡುವಿಲ್ಲದ ಕೆಲಸದ ನಡುವೆಯೂ ಈತ ಅಂಗೈಗೊಂದಿಷ್ಟು ಕುಂಕುಮ ಚೆಲ್ಲಿಕೊಂಡು, ಅದಕ್ಕೆ ನೀರು ಚಿಮುಕಿಸಿ, ಹದವಾಗಿ ತೀಡಿ, ಕಸಪೊರಕೆ ಕಡ್ಡಿಯಿಂದ ಹಣೆಗೆ ಬಳಿದುಕೊಂಡು ಹೊರಡುತ್ತಾನೆಂದರೆ ಇಂತಹ ಧರ್ಮ ಶ್ರದ್ಧೆ ಬಿಡ್ಡಿಗಳಿಗೆ ಮಾತ್ರ ಸಾಧ್ಯ" ಎಂದು ಹೆದರಿದ್ದಾರಂತಲ್ಲಾ ಥೂತ್ತೇರಿ!

* * * * * *

## ಥೂತ್ತೇರಿ

■ ಯಾಹೂ

"ಗೋಪಾಲಸ್ವಾಮಿ ಹಣೆ ಮೇಲಿನ ಒಂಟಿ ನಾಮ ಮತ್ತು ಮೇ ತಿಂಗಳ 10, 16, 22ನೇ ತಾರೀಕು. ಈ ಅಂಕಿಗಳಿಗೂ, ಜೆಡಿಎಸ್ ಪಡೆದುಕೊಳ್ಳುವ ಸೀಟಿಗೂ ಏನಾದರೂ ಸಂಬಂಧವಿದೆಯೇ ನೋಡಿ ಹೇಳಿ" ಎಂದು ದೇವೇಗೌಡರು ಸಂಖ್ಯಾ ಶಾಸ್ತ್ರದ ಶಿಖಾಮಣಿಗಳನ್ನು ಕೇಳಿದರಂತಲ್ಲಾ, ಅದಕ್ಕೆ ಸಂಖ್ಯಾಶಾಸ್ತ್ರ ಪಂಡಿತರು, ಗೋಪಾಲಸ್ವಾಮಿ ಹಣೆಯ ನಾಮದ ಜೊತೆಗೆ ಹತ್ತರಲ್ಲಿ ಒಂದು ತೆಗೆದು, ಮತ್ತೆ ಹದಿನಾರರಲ್ಲಿ ಒಂದು ತೆಗೆದು, ಒಟ್ಟು ಮೂರು ಮಾಡಿಕೊಂಡು ಅದನ್ನ 22ಕ್ಕೆ ಹಾಕಿ ಟೊಟ್ಲು ಮಾಡಿಕೊಂಡು "ಗೌಡರಿಗೆ 25 ಸೀಟು ಗ್ಯಾರಂಟಿ" ಎಂದು ಹೇಳಲಿದ್ದವರು ಈಗ ಉಲ್ಟಾ ಹೊಡೆದು "52 ಗ್ಯಾರಂಟಿ" ಎಂದು ಬಿಟ್ಟರಂತಲ್ಲಾ, ಕೂಡಲೇ ದಿಗ್ವಿಜಯದ ನಗೆಬೀರಿದ ಗೌಡರು, "ಈ ಸಂಖ್ಯೆಯ ಸೀಟುಗಳು ಗೆದ್ದು ಬರಲು ಇನ್ಯಾವುದಾದರೂ ಯಾಗವಿದ್ದರೆ ಹೇಳಿ. ಕುರಿ, ಕೋಣ, ಹಂದಿ ಬಲಿಯಾದರೂ ಸರಿ, ಈ ಸಂಖ್ಯೆ ಪಡೆಯಲೇಬೇಕು" ಎಂದು ಹೇಳಿ ಕಣ್ಮುಚ್ಚಿದರಂತಲ್ಲಾ, ಥೂತ್ತೇರಿ!!


* * * * * *

ವೈಚಾರಿಕ ಪ್ರತಿಭಟನೆ, ವಂಶಾಡಳಿತದ ವಿರುದ್ಧ ಪ್ರತಿಭಟನೆ, ಪಟ್ಟಭದ್ರರ ವಿರುದ್ಧ ಪ್ರತಿಭಟನೆಗೆ ಹೆಸರಾಗಿದ್ದ ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ದೇವೇಗೌಡರು ತಮ್ಮ ಬಲಕ್ಕೆ ಕುಮಾರಸ್ವಾಮಿ, ಎಡಕ್ಕೆ ರೇವಣ್ಣನನ್ನು ಕೂರಿಸಿಕೊಂಡಿದ್ದ ದೃಶ್ಯ ಜೆಡಿಎಸ್‌ನವರ ಕಣ್ಮನ ಸೆಳೆಯುವಂತಿತಂತಲ್ಲಾ, ಸ್ಟೇಜು ಮುಟ್ಟಿದ ಚಪ್ಪಾಳೆ, ಮುಗಿಲು ಮುಟ್ಟಿದ ಸೀಟಿಯೊಂದಿಗೆ ಸಂತೋಷ ಉಕ್ಕಿ ಹರಿಯುತ್ತಿರಬೇಕಾದರೆ, ಒಂದು ವ್ಯಕ್ತಿ ಮಾತ್ರ ಸತ್ತ ಮುಖದಲ್ಲಿ ಕುಳಿತು, ಶೋಕ ಸಂದೇಶದ ಕಳೆ ಬೀರುತ್ತಿತ್ತಂತಲ್ಲಾ, ಸದರಿ ವ್ಯಕ್ತಿ ಚನ್ನರಾಯಪಟ್ಟಣದ ಶಾಸಕ ಪುಟ್ಟೇಗೌಡರಾಗಿದ್ದು, ದೇವೇಗೌಡರ ಮನೆ ಆಳುಮಗನಂತೆ ಇದ್ದರೂ ಕೂಡಾ, ಗೌಡರು ಬಾಲಕೃಷ್ಣ ಎಂಬ ಸಂಬಂಧಿ ಕಡೆ ಒಲವು ತೋರಿದ್ದು ಪುಟ್ಟೇಗೌಡರ ಸತ್ತ ಮುಖದ ಕಳೆಗೆ ಕಾರಣವಾಗಿತಂತಲ್ಲಾ, ಪುಟ್ಟೇಗೌಡರಿಗೆ ಟಿಕೆಟ್ ಸಿಗದಂತೆ ಮಾಡಬೇಕಾದರೆ ಈ ಬಾರಿ ಪುಟ್ಟೇಗೌಡರ ಗೆಲುವು ಕಷ್ಟ ಎಂಬ ವದಂತಿಯನ್ನು ದೇವೇಗೌಡರ ಸಿಐಡಿಗಳೇ ಬಿತ್ತಿದ್ದಾರಂತಲ್ಲಾ, ಥೂತ್ತೇರಿ!!!

* * * * * *

ದೇವೇಗೌಡರ ಎಡಗೈ ಭಂಟ ದತ್ತನ ಜಾಗಕ್ಕೆ ಕೊಡಗಿನ ನಾಣಯ್ಯ ಭಡ್ತಿ ಪಡೆದಿದ್ದಾರಂತಲ್ಲಾ, ಈ ಸುದ್ದಿ ಕೇಳಿದ ಕೊಡಗಿನ ಜನ "ಕಡೆಗೂ ಕೊಡಗಿನ ಈ ಸಿಪಾಯಿಗೆ ದೇವೇಗೌಡರ ಗಾರ್ಡ್ ಕೆಲಸ ಸಿಕ್ಕಿತಲ್ಲಾ ಬಿಡಿ" ಎಂದು ಸಂತಾಪ ಸೂಚಕ ಮೆಚ್ಚುಗೆ ವ್ಯಕ್ತಮಾಡಿದರಂತಲ್ಲಾ, ಆದರೆ ನಾಣಯ್ಯನ ಆಣಿಮುತ್ತು ನೋಡಿದರೆ ಗೌಡರ ಬದಲು ಕುಮಾರಣ್ಣನಿಗೆ ಗುಮಾಸ್ತರಾಗುವ ಎಲ್ಲಾ ಸೂಚನೆಗಳನ್ನು ತೋರಿದ್ದಾರಂತಲ್ಲಾ, ಇದಕ್ಕೆ ಕಾರಣ ಕೇಳಲಾಗಿ "ದತ್ತ ನಿಭಾಯಿಸುತ್ತಿದ್ದ ಶ್ಯಾನುಭೋಗಿಕೆ ಕೆಲಸ ಬಲು ಕಷ್ಟದ ಕೆಲಸವಾಗಿದ್ದು, ಗೌಡರು ಕೇಳಿದ್ದನ್ನೆಲ್ಲಾ ಕೆರೆದುಕೊಡುವುದು, ಮಂತ್ರವಾದಿಗಳ ಸಂಪರ್ಕದಲ್ಲಿ ಸದಾ ಇರುವುದು ನಾಣಯ್ಯನಿಗೆ ಕಡುಕಷ್ಟವಾಗಿದೆ" ಎಂದರಂತಲ್ಲಾ, ಅದೇ ಕುಮಾರಣ್ಣನಾದರೆ, "ಅದೇನೋ ಮಾಡಿ ನಾಣಯ್ಯನೋರೆ" ಎಂದು ಉದಾರನೀತಿ ತಾಳಿದ್ದ ನಾಣಯ್ಯ ಕುಮಾರಣ್ಣನ ಸನಿಹಕ್ಕೆ ಹಾತೊರೆಯಲು ಕಾರಣವಾಗಿದೆಯಂತಲ್ಲಾ, ಇದೇನೇ ಆದರೂ ಬೆಳಗಾಗೆದ್ದು ಒಂಟಿ ಬ್ರಾಹ್ಮಣನನ್ನ ನೋಡುವ ಕರ್ಮದಿಂದ ಗೌಡರು ಪಾರಾದಂತೆ, ದತ್ತನೂ ತಪ್ಪಿಸಿಕೊಳ್ಳುವ ಪಜೀತಿಯಿಂದ ಮುಕ್ತಿ ಪಡೆದನಂತಲ್ಲಾ, ಥೂತ್ತೇರಿ!!





ನರ್ಸ್ ಜಯಲಕ್ಷ್ಮಿ ಪ್ರೇಮ ಪ್ರಕರಣದಿಂದ ಮನೆಮಾತಾಗಿ, ತನ್ನ ಹಲ್ಕಟ್‌ಗಿರಿಯಿಂದ ಇಂಗು ತಿಂದ ಮಂಗನಂತಾಗಿದ್ದ ರೇಣುಕಾಚಾರ್ಯ ಬರಲಿರುವ ಚುನಾವಣೆಯಲ್ಲಿ ಮಣ್ಣು ಮುಕ್ಕುವ ಭೀತಿಯಲ್ಲಿದ್ದಾನೆ. ಅದಕ್ಕೇ ಮೊನ್ನೆ ಕಾಂಗ್ರೆಸ್ ಪಕ್ಷದವರ ಮೇಲೆ ಕೆಸರೆರಚಲು ಹೋಗಿ ತನ್ನ ಮುಖಕ್ಕೇ ಮಸಿ ಬಳಿದುಕೊಂಡು ಮತ್ತಷ್ಟು ಅತಂತ್ರನಾಗಿದ್ದಾನೆ.

# ಮೂತಿಗಿಕ್ಕಿಸಿಕೊಂಡ ರೇಣುಕಾಚಾರ್ಯ

'ಮೂರೂ ಬಟ್ಟೋರು ಊರಿಗೆ ದೊಡ್ಡೋರು' ಎನ್ನುವ ಮಾತಿದೆ. ಆದರೆ ಹೊನ್ನಾಳಿಯಲ್ಲಿ ಮೂರೂ ಬಿಟ್ಟು ಹೋಗಿ ಮೂತಿಗಿಕ್ಕಿಸಿಕೊಂಡ ಚೆಡ್ಡಿಗಳು ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂಬಂತೆ ಇಲ್ಲಸಲ್ಲದ ನಾಟಕಗಳನ್ನು ಶುರುಹಚ್ಚಿಕೊಂಡಿದ್ದಾರೆ. ಪೊಲೀಸರು ಹಾಗೂ ಮಾಧ್ಯಮಗಳನ್ನು ಬಳಸಿಕೊಂಡು ತಾವು ಮಾಡಿದ ತಪ್ಪುಗಳಿಗೆ 'ಕಾಂಗ್ರೆಸ್-ಬಿ.ಜೆ.ಪಿ. ಮಾರಾಮಾರಿ' ಎಂದು ರಾಜಕೀಯ ಬಣ್ಣವನ್ನು ಲೇಪಿಸುವುದರ ಮೂಲಕ ಕುರುಬ ಸಮಾಜದ ಕೆಂಗಣ್ಣಿಗೆ ಗುರಿಯಾಗಿದ್ದಾರೆ. ಚೆಡ್ಡಿಗಳ ಈ ಕಂತ್ರಿ ಕೆಲಸಕ್ಕೆ ನಾಯಕತ್ವ ನೀಡಿರುವುದು ಮತ್ಯಾರೂ ಅಲ್ಲ -ಹೊನ್ನಾಳಿ ಕ್ಷೇತ್ರದ ಮಾಜಿ ಶಾಸಕ ರೇಣುಕಾಚಾರ್ಯ.

ಕಳೆದ ವರ್ಷ ನರ್ಸ್ ಜಯಲಕ್ಷ್ಮಿ ಪ್ರಕರಣದಿಂದ ರಾಜ್ಯಾದ್ಯಂತ ಮನೆಮಾತಾಗಿದ್ದ ಈ ನಾಲಾಯಕ್ ನಾಯಕ "ನನಗೆ ತುತ್ತು ಕೊಟ್ಟವಳೂ ಅವಳೇ, ಮುತ್ತು ಕೊಟ್ಟವಳೂ ಅವಳೇ. ಆಕೆ ನನಗೆ ಇಂತಹ ದ್ರೋಹ ಬಗೆಯುತ್ತಾಳೆ ಎಂದುಕೊಂಡಿರಲಿಲ್ಲ" ಎಂದೆಲ್ಲಾ ಗೋಗರೆದಿದ್ದ. ಆಮೇಲೆ ತನ್ನ ರಾಜಕೀಯ ಗುರು ಯಡಿಯೂರಪ್ಪನ ಮುಂದೆ "ನನ್ನದು ಏನೇನೂ ತಪ್ಪಿಲ್ಲ. ಆಕೆಯೇ ನನ್ನ ಮೈಮೇಲೆ ಬಿದ್ದು, ಎಳೆದಾಡಿ, ನಾವಿಬ್ಬರೂ ಮುತ್ತಿಡುತ್ತಿರುವ ಫೋಟೋ ತೆಗೆದಿದ್ದಳು. ನಾನು ಸುಮ್ಮನೆ ನಡೆದಾಡುತ್ತಿರುವುದನ್ನೇ 'ಡಾಂ ಕುಣಿಕ ಡಾಂ ಕುಣಿಕ' ಎಂದು ಕುಡಿದ ಮದದಲ್ಲಿ ಕುಣಿಯುತ್ತಿರುವಂತೆ ಫೋಟೊ ತೆಗೆದಿದ್ದಳು" ಎಂದೆಲ್ಲ ಈ ಚೆಡ್ಡಿಹರುಕ ಕಣ್ಣೀರಿಟ್ಟಿದ್ದ. ಅವನನ್ನು ನಂಬಿದ ಯಡಿಯೂರಪ್ಪ ಆತನನ್ನು ತನ್ನೊಂದಿಗೆ ಇಟ್ಟುಕೊಂಡರು. ಅವರ ಜೋಡಿಯನ್ನು ಕಂಡು "ಚೋರ ಗುರು, ಚಂಡಾಳ ಶಿಷ್ಯ" ಎಂದು ಜನ ನಗಾಡಿದರು.

ತನ್ನ ಈ ಎಲ್ಲಾ ಹಲ್ಕಟ್‌ಗಿರಿಯಿಂದ ಇಂಗು ತಿಂದ ಮಂಗನಂತಾಗಿದ್ದ ರೇಣುಕಾಚಾರ್ಯ ಬರಲಿರುವ ಚುನಾವಣೆಯಲ್ಲಿ ಮಣ್ಣು ಮುಕ್ಕುವ ಭೀತಿಯಲ್ಲಿದ್ದಾನೆ. ಅದಕ್ಕೇ ಮೊನ್ನೆ ಕಾಂಗ್ರೆಸ್ ಪಕ್ಷದವರ ಮೇಲೆ ಕೆಸರೆರಚಲು ಹೋಗಿ ತನ್ನ ಮುಖಕ್ಕೇ ಮಸಿ ಬಳಿದುಕೊಂಡು ಮತ್ತಷ್ಟು ಅತಂತ್ರನಾಗಿದ್ದಾನೆ.

ದಾವಣಗೆರೆ ಜಿಲ್ಲೆ ಹೊನ್ನಾಳಿಯಲ್ಲಿ ಕನಕ ಜಯಂತ್ಯೋತ್ಸವದ ಅಂಗವಾಗಿ ಮಾರ್ಚ್ ತಿಂಗಳ 29 ಮತ್ತು 30ರಂದು ಬೀರಲಿಂಗೇಶ್ವರ ದೇವರುಗಳ ಉತ್ಸವ ಹಾಗೂ ಸಾಮೂಹಿಕ ವಿವಾಹಗಳ ಕಾರ್ಯಕ್ರಮವನ್ನು ಕುರುಬ ಸಮಾಜದವರು ಹತ್ತು ಎಕರೆ ಜಮೀನಿನಲ್ಲಿ ನಡೆಸಲು ಮುಂದಾದರು. ಅದಕ್ಕೆಂದು ಹತ್ತು ಹದಿನೈದು ದಿನಗಳ ಮುಂಚಿನಿಂದಲೇ ಶಾಮಿಯಾನ ಹಾಕಲು ಪ್ರಾರಂಭಿಸಿದ್ದರು. ಆದರೆ ಈ ಕಾರ್ಯಕ್ರಮವನ್ನು ಹಾಳುಗೆಡವುವ ಉದ್ದೇಶದಿಂದಲೇ ಕುರುಬ ಸಮಾಜದ ಹೊಸದುರ್ಗ ಶಾಖಾ ಮಠದ ಈಶ್ವರಾನಂದ ಸ್ವಾಮಿಯವರಿಗೆ ರೇಣುಕಾಚಾರ್ಯ ಫೋನ್ ಮಾಡಿ "ನಿಮ್ಮ ಕಾರ್ಯಕ್ರಮದ ಪಕ್ಕದಲ್ಲೇ ನಾನೂ ಬಿಜೆಪಿ ಕಾರ್ಯಕರ್ತರ ಸಮಾವೇಶವನ್ನು ಮಾಡುತ್ತೇನೆ- ಶಾಮಿಯಾನ ಒಟ್ಟಿಗೆ ಹಾಕೋಣ, ಅರ್ಧ ದುಡ್ಡು ನಾನು ಕೊಡುತ್ತೇನೆ" ಎಂದು ಹೇಳಿದ್ದಾನೆ. ಈಶ್ವರಾನಂದ ಸ್ವಾಮಿಗಳು ಇದಕ್ಕೆ ಒಪ್ಪದೆ "ಇದು ಅಪ್ಪಟ ಧಾರ್ಮಿಕ ಕಾರ್ಯಕ್ರಮ, ನಿಮ್ಮ ರಾಜಕೀಯ ಕಾರ್ಯಕ್ರಮವನ್ನು ಬೇರೆ ಕಡೆ ಮಾಡಿಕೊಳ್ಳಿ" ಎಂದು ನಯವಾಗಿಯೇ ಹೇಳಿದ್ದಾರೆ. ಆದರೆ ರೇಣುಕಾಚಾರ್ಯನ ಒತ್ತಡ ಜಾಸ್ತಿಯಾದಾಗ "ಅವಕಾಶ ಕೊಡುವುದಿಲ್ಲ" ಎಂದು ಖಾರವಾಗಿಯೇ ತಿಳಿಸಿದ್ದಾರೆ.

ಇದೊಂದು ಧಾರ್ಮಿಕ ಕಾರ್ಯಕ್ರಮವೆಂದು ಗೊತ್ತಾದ ಮೇಲಾದರೂ ರೇಣುಕಾಚಾರ್ಯ ಬೇರೆ ಕಡೆ ತನ್ನ ರಾಜಕೀಯ ಸಮಾವೇಶವನ್ನು ನಡೆಸುವ ಯೋಚನೆ ಮಾಡಬಹುದಿತ್ತಲ್ಲವೇ? ಆದರೆ ಅಂತಹ ಒಳ್ಳೆ ಬುದ್ಧಿ ಅವನಿಗೆ ಎಲ್ಲಿಂದ ಬರಬೇಕು ಹೇಳಿ? ಕುರುಬ ಸಮಾಜದ ಕಾರ್ಯಕ್ರಮಕ್ಕೆ ಶಾಮಿಯಾನ ಹಾಕುತ್ತಿದ್ದ ಹುಬ್ಬಳ್ಳಿಯ ವೆಂಕಟೇಶ್ ಹತ್ತಿರ ಹೋದ ರೇಣುಕಾಚಾರ್ಯ ಪಕ್ಕದಲ್ಲೇ ತನಗೂ ಶಾಮಿಯಾನ ಹಾಕಿಕೊಡಲು ಕೇಳಿದ್ದಾನೆ. ಆದರೆ ಈಶ್ವರಾನಂದರ ನಿರ್ಧಾರವು ಈಗಾಗಲೇ ಗೊತ್ತಾಗಿದ್ದರಿಂದ ರೇಣುಕಾಚಾರ್ಯ ಎರಡು ಪಟ್ಟು ಹಣ ಕೊಡುತ್ತೇನೆಂದರೂ




ಈಶ್ವರಾನಂದ ಸ್ವಾಮಿ

ಅದನ್ನು ತಿರಸ್ಕರಿಸಿ 'ಶಾಮಿಯಾನ ಹಾಕುವುದಿಲ್ಲ' ಎಂದು ವೆಂಕಟೇಶ್ ಹೇಳಿದ್ದಾರೆ. ಈ ಎರಡೂ ಕುತಂತ್ರಗಳಲ್ಲಿ ರೇಣುಕಾಚಾರ್ಯ ಸೋತದ್ದರ ನಿರಾಸೆಯಿಂದಲೇ ತನ್ನ ಕಾರ್ಯಕ್ರಮವನ್ನೇ ಏಪ್ರಿಲ್ 1ಕ್ಕೆ ಮುಂದೂಡಿಕೊಂಡ.

## ಮೂತಿಗಿಕ್ಕಿಸಿಕೊಂಡಿದ್ದು ಹೀಗೆ

ಕುರುಬ ಸಮಾಜದ ಧಾರ್ಮಿಕ ಕಾರ್ಯಕ್ರಮಕ್ಕೆ ಬಿಜೆಪಿ ಪಕ್ಷದ ಮುಖಂಡರುಗಳನ್ನೊಳಗೊಂಡಂತೆ ಎಲ್ಲ ಪಕ್ಷದ ರಾಜಕಾರಣಿಗಳನ್ನೂ ಕರೆಸಿ ಅತ್ಯಂತ ಯಶಸ್ವಿಯಾಗಿ ಉತ್ಸವವನ್ನು ಈಶ್ವರಾನಂದರು ಮುಗಿಸಿದ್ದರು. ಆದರೆ ಇನ್ನೂ ಶಾಮಿಯಾನವನ್ನು ಕಿತ್ತಿರಲಿಲ್ಲ. ಅಷ್ಟರಲ್ಲಾಗಲೇ ಮಾರ್ಚ್ 31ರ ರಾತ್ರಿ 11 ಗಂಟೆಗೆ ರೇಣುಕಾಚಾರ್ಯ ಮತ್ತು ಬಿಜೆಪಿ ಕಾರ್ಯಕರ್ತರು ಯಾರ ಅನುಮತಿಯನ್ನೂ ಪಡೆಯದೆ ಮತ್ತು ಯಾವ ಮುನ್ಸೂಚನೆಯನ್ನೂ ನೀಡದೆ ಬಿಜೆಪಿ ಸಮಾವೇಶಕ್ಕೆ ಬರುವ ಕಾರ್ಯಕರ್ತರಿಗೆ ಅದೇ ಸ್ಥಳದಲ್ಲೇ ಅಡುಗೆ ಮಾಡುತ್ತೇವೆಂದು ಅಕ್ಕಿ ಮುಂತಾದ ದಿನಸಿ ಸಾಮಾನುಗಳನ್ನು ತಂದಿಳಿಸಲಾರಂಭಿಸಿದ್ದಾರೆ. ಧಾರ್ಮಿಕ ಕಾರ್ಯಕ್ರಮವನ್ನು ಮುಗಿಸಿದ್ದ ಕುರುಬ ಸಮಾಜದವರು ಸಾಗಿಸಬೇಕಾಗಿದ್ದ ಅನೇಕ ವಸ್ತುಗಳು ಇನ್ನೂ ಅಲ್ಲಿಯೇ ಇದ್ದುದರಿಂದ ಸಹಜವಾಗಿ ಕುರುಬ ಸಮಾಜದ ಯುವಕರು ರೇಣುಕಾಚಾರ್ಯನ ಈ ಕಂತ್ರಿ ಕೆಲಸದ ವಿರುದ್ಧ ಆಕ್ಷೇಪಣೆ ಎತ್ತಿದ್ದಾರೆ.




ವಿಚಿತ್ರವೆಂದರೆ ಕುರುಬ ಸಮಾಜದವರು ಧಾರ್ಮಿಕ ಸಮಾವೇಶ ನಡೆಸಿದ ಸ್ಥಳಕ್ಕೂ, ಬಿಜೆಪಿ ಕಾರ್ಯಕರ್ತರ ಸಮಾವೇಶವನ್ನು ನಡೆಸಲು ರೇಣುಕಾಚಾರ್ಯ ನಿಗದಿಪಡಿಸಿದ್ದ ಸ್ಥಳಕ್ಕೂ ಒಂದು ಕಿ.ಮೀ.ಗಿಂತ ಜಾಸ್ತಿ ದೂರವಿದೆ. ಹೀಗಿದ್ದರೂ ಅಡುಗೆ ಮಾಡಿಸಲು ಕುರುಬ ಸಮಾಜದ ಧಾರ್ಮಿಕ ಸಮಾವೇಶ ನಡೆದ ಸ್ಥಳವನ್ನೇ ರೇಣುಕಾಚಾರ್ಯ ಆಯ್ಕೆ ಮಾಡಿಕೊಂಡಿರುವುದು ನೋಡಿದರೆ ಗಲಾಟೆ ಮಾಡುವ ಸ್ಪಷ್ಟ ಯೋಜನೆಯಿಂದಲೇ ಹೀಗೆ ಮಾಡಿದ್ದಾನೆನ್ನುವುದು ಯಾರಿಗಾದರೂ ಅರ್ಥವಾಗುತ್ತದಲ್ಲವೇ?

ಮೊದಲೇ ಕುರುಬರ ಸ್ವಾಭಿಮಾನದ ಸಂಕೇತವಾಗಿದ್ದ ಉಡುಪಿಯ ಕನಕ ಗೋಪುರವನ್ನು ಅಷ್ಟಮಠಗಳ ಸ್ವಾಮಿಗಳು ಕೆಡವಿದಾಗ ಅವರನ್ನು ತರಾಟೆಗೆ ತೆಗೆದುಕೊಳ್ಳುವ ಬದಲಾಗಿ ಬಿಜೆಪಿಗಳು ಅವರ ಬೆಂಗಾವಲಿಗೆ ನಿಂತಿದ್ದರು. ಆಗಲೇ ಕುರುಬ ಸಮುದಾಯದವರಿಗೆ ಚೆಡ್ಡಿಗಳ 'ನಾವೆಲ್ಲ ಹಿಂದೂ, ನಾವೆಲ್ಲ ಒಂದು' ಎಂಬ ಸ್ಲೋಗನ್ನಿನ ಟೊಳ್ಳುತನ ಅರ್ಥವಾಗಿತ್ತು. "ಅಕಸ್ಮಾತ್ ಬ್ರಾಹ್ಮಣರ ದೇವಸ್ಥಾನದಲ್ಲಿರುವ ಒಂದು ಕಂಬವನ್ನೇನಾದರೂ ನಾವು ಕೆಡವಿದ್ದರೆ ಬಿಜೆಪಿಗಳು ಸುಮ್ಮನಿರುತ್ತಿದ್ದರೆ" ಎಂದು ಪ್ರಶ್ನಿಸಿದ ಕುರುಬ ಸಮುದಾಯದವರು ಅವತ್ತಿನಿಂದ ಯಾವುದೇ ಕಾರಣಕ್ಕೂ ಈ ಚೆಡ್ಡಿಗಳನ್ನು ನಂಬಲಿಕ್ಕಾಗುವುದಿಲ್ಲ ಎಂದು ನಿರ್ಧರಿಸಿ ಕಾಂಗ್ರೆಸ್ ಪಕ್ಷದತ್ತ ವಾಲಿದ್ದಾರೆ. ಕನಕಗೋಪುರವನ್ನು ಕೆಡವಿದ್ದ ಗಾಯ ಇನ್ನೂ ಹಸಿಯಾಗಿರುವಾಗಲೇ ಅವರ ಧಾರ್ಮಿಕ ಕಾರ್ಯಕ್ರಮ ನಡೆದಿದ್ದ ಜಾಗದಲ್ಲೇ ರೇಣುಕಾಚಾರ್ಯನಂತಹ ಚೆಡ್ಡಿಯೊಬ್ಬ ಬಂದು ಆ ಸ್ಥಳದಲ್ಲೇ ತಾವು ಭೂರಿಭೋಜನ ನಡೆಸುತ್ತೇವೆ ಎಂದು ಹೇಳುವ ಮೂಲಕ ಆ ಗಾಯದ ಮೇಲೆ ಬಿಸಿ ಎಣ್ಣೆ ಹಾಕಲು ನೋಡಿದರೆ ಕುರುಬರು ಹೇಗೆ ಸುಮ್ಮನಿರುತ್ತಾರೆ?

ಕುರುಬ ಸಮಾಜದ ಯುವಕರು ರೇಣುಕಾಚಾರ್ಯನ ಈ ಕುತಂತ್ರದ ಬಗ್ಗೆ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದಾರೆ. ಅವರ ಭಾವನೆಯನ್ನು ಅರ್ಥಮಾಡಿಕೊಳ್ಳದ ರೇಣುಕಾಚಾರಿ ಅವರೊಂದಿಗೆ ಕೀಳುಮಟ್ಟದ ವಾಗ್ವಾದಕ್ಕಿಳಿದಿದ್ದಾನೆ. ಆದರೆ ಯಾವಾಗ ರೇಣುಕಾಚಾರ್ಯ ಕುರುಬ ಸಮಾಜದ ಗುರುಗಳಾದ ಈಶ್ವರಾನಂದ ಸ್ವಾಮಿಗಳ ಕುರಿತಂತೆಯೂ ಕೇವಲವಾಗಿ ಮಾತಾಡಿದನೋ ಕುರುಬ ಯುವಕರು ರೇಣುಕಾಚಾರ್ಯನನ್ನು ಒಳಗೊಂಡು ಬಿಜೆಪಿ ಕಾರ್ಯಕರ್ತರನ್ನು ತದುಕಲು ಪ್ರಾರಂಭಿಸಿದ್ದಾರೆ. ಪರಿಸ್ಥಿತಿ ಬಿಗಡಾಯಿಸಿದ್ದರಿಂದ ರೇಣುಕಾಚಾರ್ಯ ಮತ್ತು ಅವನ ಬೆಂಬಲಿಗರು ಅಲ್ಲಿಂದ ಓಡಿಹೋಗಿದ್ದಾರೆ. ಧಾರ್ಮಿಕ ಉತ್ಸವ ನಡೆದ ಸ್ಥಳದಿಂದ ಕೇವಲ ನೂರಿನ್ನೂರು ಅಡಿಗಳಷ್ಟೇ ದೂರವಿರುವ ರೇಣುಕಾಚಾರ್ಯನ ಮನೆಯವರೆಗೂ ಅಟ್ಟಿಸಿಕೊಂಡು ಹೋಗಿ ಆತನ ಮನೆಯ ಮುಂದೆ ನಿಂತಿದ್ದ ಕೆಲವು ವಾಹನಗಳನ್ನು ಯುವಕರು ಜಖಂಗೊಳಿಸಿದ್ದಾರೆ.

## ಘಟನೆಯನ್ನು ತಿರುಚಿದ ಚೆಡ್ಡಿಗಳು

ಘಟನೆ ನಡೆದು ಪರಿಸ್ಥಿತಿ ಶಾಂತವಾಗುವವರೆಗೂ ಸುರಕ್ಷಿತವಾಗಿದ್ದ ಬಿಜೆಪಿ ಬಸವರಾಜಪ್ಪನ ಕಾರು ನಂತರದಲ್ಲಿ ಸುಟ್ಟು ಭಸ್ಮವಾಗಿದೆ, ಘಟನೆ ನಡೆದ ಸ್ಥಳದಿಂದ ಒಂದು ಕಿ.ಮೀ. ದೂರವಿದ್ದ ಬಿಜೆಪಿ ಬ್ಯಾನರೊಂದು ಹರಿದು ಬಿದ್ದಿದೆ. ಈ ಎರಡು ಘಟನೆಗಳಿಗೂ ಅಲ್ಲಿ ನಡೆದ ಗಲಾಟೆಗಳಿಗೂ ಯಾವುದೇ ಸಂಬಂಧವಿಲ್ಲದಿದ್ದರೂ ಗಲಾಟೆಯ ನಂತರದಲ್ಲಿ ಮಾಜಿ ಜಿಲ್ಲಾ



ಶಾಂತಿಪುರದಲ್ಲಿ ದಲಿತ ಜಯರಾಮನನ್ನು ಹೊಡೆಯುತ್ತಿರುವ ಚೆಡ್ಡಿಗಳು

# ಶಾಂತಿಪುರದಲ್ಲಿ ಬೂಟಿನೇಟು ಚಿತ್ರದುರ್ಗದಲ್ಲಿ ದಲಿತರ ಓಲೈಕೆ

ಮಾರ್ಚ್ 4ರಂದು ಬಾಳೆಹೊನ್ನೂರು ತಾಲ್ಲೂಕಿನ ಶಾಂತಿಪುರ ಗ್ರಾಮದಲ್ಲಿ ದಲಿತ ಜಯರಾಂರವರನ್ನು ನಡುರಸ್ತೆಯಲ್ಲಿ ಬೆತ್ತಲೆ ಮಾಡಿ ಬೂಟುಗಳಿಂದ ಹಲ್ಲೆ ಮಾಡಿದ್ದರು ಬಿಜೆಪಿಯ ಚೆಡ್ಡಿಗಳು. ಅದಾದ ಮೂರು ವಾರಗಳ ನಂತರ ಅದೇ ಜಯರಾಂರಂಥವರನ್ನು ಕರೆತಂದು ಮಾರ್ಚ್ 31 ರಂದು ಚಿತ್ರದುರ್ಗದಲ್ಲಿ ಪರಿಶಿಷ್ಟ ಜಾತಿ-ಪರಿಶಿಷ್ಟ ಪಂಗಡದ ಸಮಾವೇಶವನ್ನು ನಡೆಸಿದರು ಮತ್ತದೇ ಚೆಡ್ಡಿಗಳು. ಒಂದೆಡೆ ಗೂಸಾ, ಇನ್ನೊಂದೆಡೆ ಅವರ ಮತಗಳಿಗಾಗಿ ಓಲೈಕೆ, ಇದು ಅಧಿಕಾರಕ್ಕಾಗಿ ಚೆಡ್ಡಿಗಳು ಮಾಡುತ್ತಿರುವ ತಂತ್ರ.

ಹರ್‍ಯಾಣಾದ ಜಜ್ಜರ, ಮಹಾರಾಷ್ಟ್ರದ ಕೈರ್ಲಾಂಜಿ, ಕರ್ನಾಟಕದ ಚೆಂಡಿಗೇರಿ, ತತ್ತೂರು, ಕಂಬಾಲಪಲ್ಲಿ ಘಟನೆಗಳ ಮುಂದುವರಿಕೆಯಾಗಿ ಶಾಂತಿಪುರದಲ್ಲಿ ನಡೆದಂತಹ ಅಮಾನವೀಯ ದೌರ್ಜನ್ಯಗಳಲ್ಲಿ ದಲಿತರು ಸುರಿಸಿದ ಕಣ್ಣೀರ ಕಡಲಿನ ಮೇಲೆ ಬಿಜೆಪಿಯ ಈ ಅವಕಾಶವಾದಿ ಸಮಾವೇಶ ನಡೆಯಿತು. ಆದರೆ ಈ ಸಮಾವೇಶವು ಯಾವುದೇ ಪ್ರತಿರೋಧಗಳಿಲ್ಲದೇ ನಿರ್ವಿಘ್ನವಾಗಿ ನಡೆಯುತ್ತದೆಂದುಕೊಂಡಿದ್ದ ಬಿಜೆಪಿಯ ಗೋಮುಖವ್ಯಾಘ್ರ ನೀತಿಗೆ ವಿರುದ್ಧವಾಗಿ ಮಾರ್ಚ್ 31 ರಂದೇ ದಾವಣ ಗೆರೆಯ ಪ್ರಗತಿಪರರಿಂದ ತೀವ್ರವಾದ ಪ್ರತಿಭಟನೆ ವ್ಯಕ್ತವಾಯಿತು.

ಬಹುತೇಕ ಮಾಧ್ಯಮಗಳು ಚೆಡ್ಡಿಗಳ ಸಮಾವೇಶದ ಕುರಿತು ದೊಡ್ಡ ಮಟ್ಟದಲ್ಲಿ ಪ್ರಚಾರ ನೀಡಿದವು. ಉದಯ ಟಿವಿಯವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಆ ಕಾರ್ಯಕ್ರಮದ ನೇರ ಪ್ರಸಾರವನ್ನೂ ಮಾಡಿದರು. ಅಂದು ಸಮಾವೇಶಕ್ಕೆ ಬಿಜೆಪಿಯವರು ಬಸ್ಸು-ಲಾರಿಗಳಲ್ಲಿ ಕರೆ ತಂದಿದ್ದ ಜನರನ್ನು ತಮ್ಮ ಮುಂದೆ ಕೂರಿಸಿಕೊಂಡು ತಾವು ಕರ್ನಾಟಕವನ್ನು ಉದ್ಧರಿಸುತ್ತೇವೆಂದು ಗಂಟಲು ಹರಿಯುವಂತೆ ಭಾಷಣ ಹೊಡೆದರೇ ಹೊರತು ಕಂಬಾಲಪಲ್ಲಿ, ಶಾಂತಿಪುರ ಮುಂತಾದ ನೂರಾರು ಕಡೆಗಳಲ್ಲಿ ನಡೆದ ದಲಿತರ ನರಮೇಧಗಳ ಕುರಿತಾಗಲೀ, ಅಮಾನವೀಯ ದೌರ್ಜನ್ಯಗಳ ಬಗ್ಗೆಯಾಗಲೀ ನಾಟಕೀಯಕ್ಕಾದರೂ ಅವರ ನಾಲಿಗೆಯಿಂದ ಒಂದು ಮಾತೂ ಹೊರಬೀಳಲಿಲ್ಲ.

'ಜಜ್ಜರ, ಕೈರ್ಲಾಂಜಿ, ಶಾಂತಿಪುರಗಳಲ್ಲಿ ದಲಿತರ ಮೇಲೆ ಅತ್ಯಾಚಾರ,


ಪಂಚಾಯತ್ ಅಧ್ಯಕ್ಷ ಎಚ್.ಬಿ.ಮಂಜಪ್ಪ ಸ್ಥಳಕ್ಕೆ ಬಂದವರೆಂಬ ಒಂದೇ ಕಾರಣದಿಂದ ಕಾಂಗ್ರೆಸ್ ಪಕ್ಷದವರೇ ಇದಕ್ಕೆ ಕಾರಣ ಎಂದು ಚೆಡ್ಡಿಗಳು ಹುಯಿಲೆಬ್ಬಿಸಿ ಮಂಜಪ್ಪ ಮತ್ತು ಅವರ ಇಬ್ಬರು ತಮ್ಮಂದಿರು ಸೇರಿದಂತೆ ಒಟ್ಟು 15 ಮಂದಿಯ ಮೇಲೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.



ನ್ಯಾಯಾಧೀಶರಾದ ಜಿನರಾಳ್ಕರ್ ಓಪನ್ ಕೋರ್ಟಿನಲ್ಲಿ ಪಾಟೀಲನಿಗೆ ಛೀಮಾರಿ ಹಾಕಿ ರೇಣುಕಾಚಾರ್ಯ ಮುಂತಾದವರನ್ನೂ ಕೋರ್ಟಿಗೆ ಹಾಜರುಪಡಿಸಲು ಹೇಳಿದ್ದಾರೆ. ಆದರೆ ಪಾಟೀಲ್ ಮಧ್ಯಾಹ್ನದ ನಂತರ ಕೋರ್ಟಿಗೆ ಬಂದು "ಅವರು ಸಿಕ್ಕಲಿಲ್ಲ" ಎಂದು ಹೇಳುವುದರ ಮೂಲಕ ತಾನು ತೊಡುತ್ತಿರುವುದು ಪೊಲೀಸ್ ಸಮವಸ್ತ್ರವನ್ನಲ್ಲ, ಬದಲಾಗಿ ಸಂಘಪರಿವಾರದ ಚೆಡ್ಡಿಯನ್ನು ಎಂದು ಸಾಬೀತುಪಡಿಸಿದ್ದಾನೆ.

### ಸಿಪಿಐ ಪಾಟೀಲ್ ಚೆಡ್ಡಿ ತೊಟ್ಟಾಗ

ಹೊನ್ನಾಳಿ ಪೊಲೀಸ್ ಠಾಣೆಯ ಸಿಪಿಐ ಬಿ.ಕೆ.ಪಾಟೀಲ್ ಮಾಜಿ ಜಿಲ್ಲಾ ಪಂಚಾಯತ್ ಅಧ್ಯಕ್ಷ ಮಂಜಪ್ಪ ಮುಂತಾದವರನ್ನು ಬಂಧಿಸಿ ಠಾಣೆಗೆ ಕರೆದುಕೊಂಡು ಬಂದಿದ್ದಾನೆ. ಆಗ ದಾವಣಗೆರೆ ಜಿಲ್ಲಾ ಎಸ್‌ಪಿ ಸೋನಿಯಾ ನಾರಂಗ್ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ "ಎರಡೂ ಕಡೆಯವರ ಮೇಲೆ ಕೇಸ್ ದಾಖಲಿಸಿ ಕೋರ್ಟಿಗೆ ಪ್ರೊಡ್ಯೂಸ್ ಮಾಡಿ" ಎಂದು ಹೇಳಿದ್ದಾರೆ. ನೆನಪಿದೆಯೇ, ಹಿಂದೊಮ್ಮೆ ಇದೇ ಸೋನಿಯಾ ನಾರಂಗ್ ಎಂಬ ದಿಟ್ಟ ಅಧಿಕಾ ರಿಣಿ ಆಗಿನ್ನೂ ಶಾಸಕನಾಗಿದ್ದ ರೇಣುಕಾಚಾರ್ಯ ಒಮ್ಮೆ ತನ್ನ ತಲೆ ಇಲ್ಲದ ತಕರಾರನ್ನೆತ್ತಿದ್ದಾಗ ಆತನಿಗೆ ಸಾರ್ವಜನಿಕ ವಾಗಿಯೇ ಎರಡು ಹೊನ್ನಾಳಿ ಹೊಡೆತ ಕೊಟ್ಟು ಸುಮ್ಮನಾಗಿಸಿದ್ದರು..



ಮಂಜಪ್ಪ

ಆದ್ದರಿಂದ ಬಿ.ಕೆ.ಪಾಟೀಲ್ ಎಸ್‌ಪಿಯವರ ಆದೇಶವನ್ನು ಪಾಲಿಸುತ್ತಾನೆಂದು ಪೊಲೀಸ್ ಠಾಣೆಯಲ್ಲಿದ್ದ ಮಂಜಪ್ಪ ಮುಂತಾದವರೆಲ್ಲರೂ ನಂಬಿದ್ದರು. ಆದರೆ ಲೋಕಸಭಾ ಸದಸ್ಯ ಸಿದ್ದೇಶ್ ಮತ್ತು ಮಾಜಿ ಮಂತ್ರಿ ರವೀಂದ್ರನಾಥ ಎಂಬ ಇನ್ನಿಬ್ಬರು ಚೆಡ್ಡಿ ನಾಯಕರು ಹೊನ್ನಾಳಿ ಪೊಲೀಸ್ ಠಾಣೆಗೆ ಭೇಟಿ ನೀಡಿ ಹೋದ ನಂತರ ಬಿ.ಕೆ.ಪಾಟೀಲ ಒಂದೋ ಇವರ ಮರ್ಜಿಗೆ ಒಳಗಾಗಿರಬೇಕು, ಇಲ್ಲವೇ ಇವರ ಧಮಕಿಗೆ ಹೆದರಿರಬೇಕು. ಯಾಕೆಂದರೆ ಸಿಪಿಐ ಪಾಟೀಲ್ ಇಡೀ ಗಲಾಟೆಗೆ ನೇರವಾಗಿ ಕಾರಣವಾಗಿದ್ದ ರೇಣುಕಾಚಾರ್ಯ ಮತ್ತಿತರರಿಗೆ ಠಾಣೆಯಲ್ಲೇ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾನೆ. ಅದೇ ಹೊತ್ತಿಗೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಮಂಜಪ್ಪ ಮತ್ತಿತರರನ್ನು ಕೋರ್ಟಿಗೆ ಒಪ್ಪಿಸಿ ಜೈಲುಪಾಲಾಗುವಂತೆ ನೋಡಿಕೊಂಡಿದ್ದಾನೆ. ಒಂದು ಪಕ್ಷದವರನ್ನು ಜಾಮೀನಿನ ಮೇಲೆ ಬಿಟ್ಟು, ಇನ್ನೊಂದು ಪಕ್ಷದವರನ್ನು ಕೋರ್ಟಿಗೆ ತಂದಿದ್ದಕ್ಕೆ

### ಬಿಜೆಪಿಗೆ ಕೇಡುಗಾಲ ಶುರು

ಹಿಂದುಳಿದ ಜಾತಿಗಳವರ ಧಾರ್ಮಿಕ ಉತ್ಸವವನ್ನೇ ತನ್ನ ಚೆಡ್ಡಿ ಕಾರ್ಯಕ್ರಮಕ್ಕೆ ಉಪಯೋಗಿಸಲು ಮುಂದಾಗಿದ್ದ ರೇಣುಕಾ ಚಾರ್ಯ ಅದು ಸಾಧ್ಯವಾಗದೇ ಮಣ್ಣು ತಿನ್ನುವಂತಾದಾಗ ಅದನ್ನೂ ತನ್ನ ರಾಜಕೀಯ ವಿರೋಧಿಗಳ ಮೇಲೆ ಕೆಸರೆರಚಲು ಬಳಸಿಕೊಳ್ಳಲು ಯತ್ನಿಸಿದ್ದು ಇಡೀ ಕುರುಬ ಸಮಾಜದಲ್ಲಿ ಆಕ್ರೋಶವನ್ನು ಹುಟ್ಟಿಸಿದೆ. ಮಾತ್ರವಲ್ಲ, ಇಷ್ಟು ದಿನ ರೇಣುಕಾಚಾರ್ಯನ ಮಾತಿಗೆ ಮರುಳಾಗಿ ದೊಂಬಿ, ಹೊಡೆದಾಟಗಳಲ್ಲಿ ಭಾಗವಹಿಸಿದ್ದ ಕೆಲ ಕುರುಬ ಸಮಾಜದ ಯುವಕರ ಕಣ್ಣನ್ನೂ ತೆರೆಸಿದೆ. ಯಾವ ಬಲೆಯನ್ನು ಹೆಣೆದು ಕಾಂಗ್ರೆಸ್ ಪಕ್ಷದವರನ್ನು ಹಣಿಯಬೇಕೆಂದು ರೇಣುಕಾಚಾರ್ಯ ಕನಸು ಕಂಡಿದ್ದನೋ, ಈಗ ತಾನೇ ಅದರ ಬಲೆಯಲ್ಲಿ ಸಿಕ್ಕಿಬಿದ್ದಿದ್ದಾನೆ. ಈ ಕೀಳು ಕುತಂತ್ರವೇ ಬರಲಿರುವ ಚುನಾವಣೆಯಲ್ಲಿ ರೇಣುಕಾಚಾರ್ಯನನ್ನು ಖಚಿತವಾಗಿ ಮಣ್ಣು ಮುಕ್ಕಿಸುತ್ತದೆ. ಏಪ್ರಿಲ್ 2ರಂದು ಹೊಸದುರ್ಗ ಶಾಖಾ ಮಠದ ಈಶ್ವರಾನಂದ ಸ್ವಾಮಿಗಳು ದಾವಣಗೆರೆಯಲ್ಲಿ ಪತ್ರಿಕಾಗೋಷ್ಠಿಯನ್ನು ಕರೆದು ಧಾರ್ಮಿಕ ಕಾರ್ಯಕ್ರಮಕ್ಕೆ ರಾಜಕೀಯ ಬಣ್ಣ ಲೇಪಿಸಲು ಯತ್ನಿಸಿದ ಬಿಜೆಪಿ ಪಕ್ಷವು ಬಹಿರಂಗವಾಗಿ ಕ್ಷಮೆ ಯಾಚಿಸಬೇಕೆಂದು ಹೇಳಿರುವುದೂ ಕೂಡಾ ಇಡೀ ಕುರುಬ ಸಮಾಜ ಬಿಜೆಪಿಯನ್ನು ತಿರಸ್ಕಾರದಿಂದ ನೋಡುವಂತೆ ಮಾಡಿದೆ.



*ಗಲಭೆಯಲ್ಲಿ ಸುಟ್ಟು ಕರಕಲಾದ ಕಾರು*

■ ಚಂದ್ರಶೇಖರ ತೋರಣಘಟ್ಟ

ಚಿತ್ರದುರ್ಗದಲ್ಲಿ ಮಾತ್ರ ದಲಿತರ ಒಲೈಕೆ. ಬಿಜೆಪಿಯ ದಲಿತ ವಿರೋಧಿ ನೀತಿಗೆ ಧಿಕ್ಕಾರ!' ಈ ಘೋಷಣೆಗಳನ್ನೊಳಗೊಂಡ ದೊಡ್ಡ ಬ್ಯಾನರ್‌ನೊಂದಿಗೆ ನೂರಾರು ಸಂಖ್ಯೆಯಲ್ಲಿ ಸಾಗಿದ ಪ್ರತಿಭಟನಾಕಾರರು ದಾವಣಗೆರೆಯ ಗಾಂಧಿ ಸರ್ಕಲ್‌ನಲ್ಲಿ ಯಡಿಯೂರಪ್ಪನ ಪ್ರತಿಕೃತಿ ದಹನವನ್ನು ಮಾಡಿದರು. ಜಿಲ್ಲಾಧಿಕಾರಿಯ ಕಚೇರಿಯ ಮುಂದೆ ಸುಮಾರು ಒಂದೂವರೆ ಗಂಟೆ ಬಹಿರಂಗ ಸಭೆ ನಡೆಸಿ ಬಿಜೆಪಿಯು ಚಿತ್ರದುರ್ಗದಲ್ಲಿ ನಡೆಸುತ್ತಿರುವ ಎಸ್ಸಿ-ಎಸ್ಟಿ ಸಮಾವೇಶವು ದಲಿತ ಹಾಗೂ ಹಿಂದುಳಿದ ವರ್ಗಗಳವರನ್ನು ಮೋಸ ಮಾಡುವ ಹುನ್ನಾರವೆಂದು ತೀವ್ರವಾಗಿ ಖಂಡಿಸಲಾಯಿತು.




*ದಲಿತರ ದಮನ ವಿರೋಧಿಸಿ ಪ್ರಗತಿಪರ ಸಂಘಟನೆಗಳ ಧರಣಿ*

ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘ, ಕರ್ನಾಟಕ ಜನಪರ ವೇದಿಕೆ, ಕೊಳೆಗೇರಿಗಳ ಜಂಟಿ ಕ್ರಿಯಾ ಸಮಿತಿ, ಮಾನವ ಹಕ್ಕುಗಳ ವೇದಿಕೆ ಮುಂತಾದ ಸಂಘಟನೆಗಳ ನಾಯಕರು, ಸಮಾಜವಾದಿ ಪಕ್ಷ ಮತ್ತು ಜನತಾ ದಳ ಪಕ್ಷದ ಸ್ಥಳೀಯ ನಾಯಕರುಗಳು ಮಾತನಾಡಿ ಬಿಜೆಪಿಯ ಬಣ್ಣವನ್ನು ಬಯಲು ಮಾಡಿದರು.

ಶಾಂತಿಪುರದಲ್ಲಿ ದಲಿತ ಜಯರಾಂ ಹಾಗೂ ಕುಂಜು ಬೊಯಿದು ಮತ್ತು ಮಹಮುದ್ ಬ್ಯಾರಿಯವರ ಮೇಲೆ ನಡೆದ ದೌರ್ಜನ್ಯದ ಕುರಿತು 'ಲಂಕೇಶ್' ವಾರಪತ್ರಿಕೆಯಲ್ಲಿ ಪ್ರಕಟವಾದ ವರದಿಯೇ ಈ ಪ್ರತಿಭಟನೆಗೆ ಪ್ರೇರಣೆ ನೀಡಿತ್ತು. ಕರಪತ್ರಗಳನ್ನು ಮುದ್ರಿಸಲು ಸಮಯ ಸಾಲದ ಕಾರಣ ಪತ್ರಿಕೆಯಲ್ಲಿ ಪ್ರಕಟವಾದ ವರದಿಯನ್ನೇ ಸಾವಿರಗಟ್ಟಲೆ ಝೆರಾಕ್ಸ್ ಮಾಡಿಸಿ ಸಂಘಪರಿವಾರದ ವಿರುದ್ಧ ವ್ಯಾಪಕವಾಗಿ ಪ್ರಚಾರ ಮಾಡಲಾಯಿತು. 'ಲಂಕೇಶ್' ಜನರ ದನಿಯಾಗುತ್ತಿದೆ ಎನ್ನುವುದಕ್ಕೆ ಇದಕ್ಕಿಂತ ಇನ್ನೇನು ಬೇಕು? ■

# ದ.ಕ.: ಟಿಕೆಟ್ ತೀಟೆಯ ಪೈಪೋಟಿ


ಬೆಂಕಿಯಂತೆ ಸುಡುತ್ತಿರುವ ಬಿರು ಬೇಸಗೆಯೊಂದಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಟಿಕೆಟ್ ಆಕಾಂಕ್ಷಿಗಳ ಅರ್ಜಿ ಗುಜರಾಯಿಸುವಿಕೆ, ಲಾಬಿ, ಪೈಪೋಟಿಗಳ ನಡುವೆ ಚುನಾವಣಾ ಕಾವೂ ಏರತೊಡಗಿದೆ. ಕ್ಷೇತ್ರ ಪುನರ್ ವಿಂಗಡಣೆಯ ಪರಿಣಾಮ ಈ ಹಿಂದೆ ಇದ್ದ ಒಂಬತ್ತು ಕ್ಷೇತ್ರಗಳ ಪೈಕಿ ವಿಟ್ಲಾ ವಿಧಾನಸಭಾ ಕ್ಷೇತ್ರವು ಪುತ್ತೂರು-ಬಂಟ್ವಾಳಗಳ ನಡುವೆ ವಿಲೀನವಾಗಿ ಎಂಟು ಕ್ಷೇತ್ರಗಳಷ್ಟೇ ಉಳಿದಿದೆ. ಬಿಜೆಪಿ ಬಹುತೇಕ ಎಲ್ಲ ಕಡೆ ಮಾಜಿ ಶಾಸಕರುಗಳನ್ನೇ ಮತ್ತೆ ಅಖಾಡಕ್ಕೆ ಇಳಿಸುವ ನಿರ್ಧಾರಕ್ಕೆ ಬಂದಂತಿದ್ದು ಕಾಂಗ್ರೆಸ್-ಬಿಜೆಪಿ ನೇರ ಹಣಾಹಣಿ ನಡೆಯಲಿದೆ. ಆದರೂ ಕರಾವಳಿಯಲ್ಲಿ ಟಿಕೆಟ್ ತೀಟೆಯ ಪೈಪೋಟಿಯೇನಿದ್ದರೂ ಕಾಂಗ್ರೆಸ್ಸಿನಲ್ಲಷ್ಟೇ ಕಾಣಬಹುದಾಗಿದೆ.



*ವಸಂತ್ ಬಂಗೇರಾ*

ಕ್ಷೇತ್ರ ಪುನರ್ ವಿಂಗಡಣೆಯ ಧ್ರುವೀಕರಣದಲ್ಲಿ ಉಳ್ಳಾಲ ಕ್ಷೇತ್ರವು ಮಂಗಳೂರು ಆಗಿ ಹೆಸರು ಬದಲಾಯಿಸಿಕೊಂಡಿದ್ದು ಇಲ್ಲಿ ಕಾಂಗ್ರೆಸ್‌ನಿಂದ ಯು.ಟಿ. ಖಾದರ್‌ನ ಅಭ್ಯರ್ಥಿತನಕ್ಕೆ ಯಾವುದೇ ತೊಡಕಿಲ್ಲ, ಬಿಜೆಪಿಯಿಂದ ಅವರ ಎದುರಾಳಿಯಾಗಿ ವಿಟ್ಲಾದ ಮಾಜಿ ಶಾಸಕ ಪದ್ಮನಾಭ ಕೊಠಾರಿ ಕಣಕ್ಕಿಳಿಯುವುದು ಬಹುತೇಕ ಖಚಿತವಾದಂತಿದೆ. ರಾಜ್ಯದಲ್ಲೇ ಕ್ರಿಶ್ಚಿಯನ್ ಸಂಖ್ಯಾ ಬಾಹುಳ್ಯದ ಮಂಗಳೂರು ಈಗ ಮಂಗಳೂರು ದಕ್ಷಿಣ ಎಂದಾಗಿದ್ದು, ಬಿಜೆಪಿಯ ಯೋಗೀಶ್ ಭಟ್ಟರನ್ನು ಎದುರಿಸಲು ಕಾಂಗ್ರೆಸ್‌ನಿಂದ ಐ.ಎನ್. ಡಿಸೋಜಾ ಸಜ್ಜಾದಂತಿದೆ. ಆದಾಗ್ಯೂ ಮಂಗಳೂರು-ಬೆಂಗಳೂರು ರೈಲು ಹೋರಾಟದ ಮೂಲಕ ಗಮನ ಸೆಳೆದ ಯುವ ನಾಯಕ ಪಿ.ವಿ. ಮೋಹನ್, ಕಾರ್ಪೊರೇಟರ್ ನವೀನ್ ಡಿಸೋಜಾ. ಲಯನ್ಸ್ ಕ್ಲಬ್‌ನ ಕೃಪಾ ಅಮರ್ ಆಳ್ವ ಕೂಡಾ ಸೀಟಿಗಾಗಿ ಕಾತರಿಸುತ್ತಿದ್ದಾರೆ.

ವಿಟ್ಲಾ ಮುಸ್ಲಿಮರಿಗೆ ಪ್ರಾತಿನಿಧ್ಯವಿರುವ ಕ್ಷೇತ್ರವಾಗಿದ್ದು, ಈ ಕ್ಷೇತ್ರ ಮಾಯವಾಗಿ ತಮಗಾದ ವಂಚನೆಗೆ ಸುರತ್ಕಲ್‌ನಲ್ಲಿ ಅವಕಾಶ ನೀಡಬೇಕೆಂಬುದು ಮುಸ್ಲಿಮ್ ಕಾಂಗ್ರೆಸ್ಸಿಗರ ಬೇಡಿಕೆ. ಇದು ಎಲ್ಲಿ ತನ್ನ ಬುಡಕ್ಕೆ ನೀರು ತರುತ್ತದೋ ಎಂಬ ಭೀತಿಯಿಂದ ಸುರತ್ಕಲ್‌ನ ಮೇಲೆ ಆಸೆಯಿಟ್ಟು ಕೂತಿದ್ದ ವಿಜಯಕುಮಾರ್ ಶೆಟ್ಟಿ ಮಂಗಳೂರು ದಕ್ಷಿಣ ಕ್ಷೇತ್ರದಲ್ಲಿ ಅರ್ಜಿ ಹಾಕುವುದರ ಮೂಲಕ ಎರಡು ದೋಣಿಯಲ್ಲಿ ಕಾಲು ಊರಿದ್ದಾರೆ. ಅದೇ ಹೊತ್ತಿಗೆ ಬಂಟ್ವಾಳದಲ್ಲೂ ಬಿಗ್‌ಬುಲ್ ರಮಾನಾಥ್ ರೈಗೆ ಪ್ರತಿಸ್ಪರ್ಧಿಗಳು ಹುಟ್ಟಿಕೊಂಡಿದ್ದಾರೆ. ರಮಾನಾಥ್ ರೈ ವಿರುದ್ಧ ಭಿನ್ನಮತೀಯರಾಗಿರುವ ವಿಟ್ಲಾ ಮೂಲದ ಸದಾನಂದಪೂಂಜಾ ಮತ್ತು ಕೆ.ಎಂ. ಇಬ್ರಾಹಿಂ ಟಿಕೆಟ್ ಆಕಾಂಕ್ಷಿಗಳಾಗಿ ಅರ್ಜಿ ಹಾಕಿದ್ದಾರೆ.



*ರಮಾನಾಥ ರೈ*

ಮೂಡಬಿದರೆಯಲ್ಲಿ ಕಾಂಗ್ರೆಸ್‌ನ ಅಭಯಚಂದ್ರರೇ ಕಾಯಂ ಆಗಲಿದ್ದು ಜೆಡಿಎಸ್‌ನ ಅಮರ ನಾಡಕಟ್ಟ ಮತ್ತು ಬಿಜೆಪಿಯ ಜಗದೀಶ್ ಅಧಿಕಾರಿ ಅಭ್ಯರ್ಥಿಗಳಾದರೆ ತ್ರಿಕೋನ ಸ್ಪರ್ಧೆ ಏರ್ಪಡಲಿದೆ. ರಾಜಕೀಯವೆನ್ನುವುದೇ ನಿಂತ ನೀರಾಗಿರುವ ಮೀಸಲು ಕ್ಷೇತ್ರ ಸುಳ್ಯದಲ್ಲಿ ಅಂಗಾರರೇ ಮತ್ತೆ ಬಿಜೆಪಿ ಅಭ್ಯರ್ಥಿಯಾದರೆ ಕಾಂಗ್ರೆಸ್‌ನಿಂದ ಕಳೆದ ಬಾರಿ ಸ್ಪರ್ಧಿಸಿ ಸೋತ ಡಾ. ಟಿ. ರಘು ಕೂಡಾ ಕಣದಲ್ಲಿದ್ದಾರೆ.

ಕಾಂಗ್ರೆಸ್‌ನಿಂದ ಅಭ್ಯರ್ಥಿಯೋರ್ವರ ಆಯ್ಕೆಗೆ ದೊಡ್ಡ ತಲೆ ನೋವಾಗುವುದು ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ. ಭಿನ್ನಮತ ಮತ್ತು ಗುಂಪುಗಾರಿಕೆಯಿಂದ ಕಾಂಗ್ರೆಸ್ ಪಕ್ಷವು ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತಾ ಬಂದಿರುವ ಪುತ್ತೂರಲ್ಲಿ ಈಗಾಗಲೇ 21 ಮಂದಿ ಆಕಾಂಕ್ಷಿಗಳು ಕಾಂಗ್ರೆಸ್ ಟಿಕೆಟ್‌ಗಾಗಿ ಅರ್ಜಿ ಹಾಕಿದ್ದಾರೆ. ಇವರೊಳಗೆ ಒಬ್ಬನ ಆಯ್ಕೆಗೆ ಪಕ್ಷದ ಒಳಗೇ ಒಂದು ಚುನಾವಣೆ ನಡೆಸಬೇಕಾದ ಸಾಧ್ಯತೆಯಿದೆ. ಯುವ ಕಾಂಗ್ರೆಸ್ ಅಧ್ಯಕ್ಷ ಬೊಂಡಾಲ ಜಗನ್ನಾಥ ಶೆಟ್ಟಿ, ಇಂಟಕ್‌ನ ರಾಕೇಶ್ ಮಲ್ಲಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾವು ಹೇಮನಾಥ ಶೆಟ್ಟಿ, ಸಹಕಾರೀ ಧುರೀಣ ಜೀವನ್ ಭಂಡಾರಿ, ಸುಳ್ಯದ ಭಾರತ್ ಮುಂಡೋಡಿ ಮತ್ತು ಸಳನಿ ಲೋಕಪ್ಪಗೌಡರ ಹೆಸರುಗಳು ಮುಂಚೂಣಿಯಲ್ಲಿವೆ. ಜಾತಿವಾರು ಪ್ರಾತಿನಿಧ್ಯದಲ್ಲಿ ಗೌಡರ ಭರತ್ ಮುಂಚೂಣಿಯಲ್ಲಿವೆ. ಮಹಿಳೆ ಕಂ ಗೌಡ ಎನ್ನುವ ಕಾರಣಕ್ಕೆ ಸಳನಿ ಲೋಕಪ್ಪಗೌಡರ ಹೆಸರು ಮುಂಚೂಣಿಯಲ್ಲಿವೆ. ಪುತ್ತೂರು ಬಿಜೆಪಿಯಲ್ಲಿ ಶಕುಂತಲಾ ಶೆಟ್ಟಿಯನ್ನು ಡ್ರಾಪ್ ಮಾಡಲು ಡಿ.ವಿ. ಕೃಪಾಪೋಷಿತ ಸಂಘ ಪರಿವಾರದ ಗ್ಯಾಂಗ್ ಲಾಬಿಯಲ್ಲಿ ತೊಡಗಿದೆ. ಇಂತಹ ಕಾಲೆಳೆದಾಟವೇ ಶಕುಂತಲಾ ಶೆಟ್ಟಿಗೆ ಪ್ರಚಾರದ ಅಸ್ತ್ರವಾಗಿ ಸಿಂಪಥಿಗಿಟ್ಟಿಸತೊಡಗಿದೆ. ಪುತ್ತೂರಲ್ಲೀಗ ಶಕುಂತಲಾ ಶೆಟ್ಟಿಗೆ ಸೀಟು ತಪ್ಪಿದರೆ ಕಾಂಗ್ರೆಸ್‌ಗೆ ಗೆಲುವು ಕಟ್ಟಿಟ್ಟ ಬುತ್ತಿ ಎಂಬಂಥ ಪರಿಸ್ಥಿತಿ ಇದೆ.

### ಬಂಗೇರಾಗೆ ಗಂಗಾಧರ ಗೌಡರೇ ಬಗನೀ ಗೂಟ!

ಇಡೀ ಜಿಲ್ಲೆಯಲ್ಲಿ ಟ್ವೆಂಟಿ-ಟ್ವೆಂಟಿ ಕ್ರಿಕೆಟ್ ಮ್ಯಾಚಿನಷ್ಟೇ ಕದನ ಕುತೂಹಲವನ್ನು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆಯ ಪೈಪೋಟಿ ಸೃಷ್ಟಿಸಿದೆ. ಗಂಗಾಧರ ಗೌಡ ಮತ್ತು ವಸಂತ ಬಂಗೇರಾ ನಡುವಿನ ಗೂಳಿಕಾಳಗದಲ್ಲಿ ಬೆವರು ಇಳಿಸದೇ ಬಿಜೆಪಿಯ ಪ್ರಭಾಕರ ಗೆಲ್ಲುತ್ತಾ ಬಂದದ್ದು ರಾಜಕೀಯ ವಿಪರ್ಯಾಸ.

ಮೂಲತಃ ಆರ್‌ಎಸ್‌ಎಸ್‌ನವನಾಗಿದ್ದ ಬಂಗೇರಾ ಬಿಜೆಪಿಯಿಂದ ಶಾಸಕನಾಗಿದ್ದ. ಆದರೆ ಆನಂತರ ಅಂಗಿ ಕಳಚಿದಂತೆಯೇ ಬಿಜೆಪಿ ತೊರೆದು ಜನತಾದಳದೊಂದಿಗೆ ಗುರುತಿಸಿಕೊಂಡಿದ್ದ. ಜನತಾದಳದಲ್ಲಿ ದೇವೇಗೌಡರಿಗೆ ಆಪ್ತರಾಗಿ ಚಂಡಿಕಾಯಾಗ ನಡೆಸುವ ಮೂಲಕ ಗೌಡರನ್ನು ಸಂಪ್ರೀತಗೊಳಿಸಲು ಹೋಗಿ ಎಲ್ಲರಿಂದಲೂ ಉಗಿಸಿಕೊಂಡಿದ್ದ. ಕೊನೆಕೊನೆಗೆ "ಯಾಗದಿಂದ ನಾನು ಕೆಟ್ಟೆ" ಎಂಬ ವರಾತ ತೆಗೆದು ಕಾಂಗ್ರೆಸ್ ಸೇರಿದ. ಎಣ್ಣೆ-ಸೀಗೇಕಾಯಿಯಂತಹ ಸಂಬಂಧ ಹೊಂದಿರುವ ಗಂಗಾಧರ ಗೌಡ ಮತ್ತು ವಸಂತ ಬಂಗೇರಾ ಎಂಬ ಎರಡು ವಿರುದ್ಧ ಧ್ರುವಗಳು ಒಂದೇ ಪಕ್ಷದಲ್ಲಿ ಇರೋದು ಸಾಧ್ಯವೇ ಅನ್ನೋದೀಗ ಕುತೂಹಲದ ಪ್ರಶ್ನೆಯಾಗಿದೆ.

ತನ್ನ ಹೊಲಸು ಬೈಗುಳದ ಮೂಲಕ ಸಹೋದರ ಪ್ರಭಾಕರ ಬಂಗೇರಾರನ್ನು ಬೈಯುತ್ತಲೇ ಬೆಳ್ತಂಗಡಿಯಲ್ಲಿ ಬಿಜೆಪಿಯನ್ನು ಎರಡು ಸಲ ಗೆಲ್ಲಿಸಿದ ವಸಂತ ಬಂಗೇರಾ. ಆದರೆ ಆ ಪ್ರಕ್ರಿಯೆಯಲ್ಲಿ ತಾನು ಮಾತ್ರ ಮೂರನೇ ಸ್ಥಾನಕ್ಕೆ ಅದುಮಲ್ಪಟ್ಟಿದ್ದ. ಕೆಪಿಸಿಸಿ ಅಧ್ಯಕ್ಷರಾಗಿದ್ದ ಜನಾರ್ದನ ಪೂಜಾರಿಯೇ ಗಂಗಾಧರ ಗೌಡರನ್ನು ಪಕ್ಷದಿಂದ ಉಚ್ಚಾಟಿಸಲು ಹೊರಟಾಗ "ನಾನೇನು ಜನಾರ್ದನ್ ಪೂಜಾರಿ ಮನೆಕೆಲಸದ ಆಳಲ್ಲ" ಎಂದು ಬಹಿರಂಗವಾಗಿ ಸವಾಲೆಸೆದ ಗಂಗಾಧರ ಗೌಡ ಜಿಲ್ಲೆಯಲ್ಲಿ ರೈ ಮತ್ತು ಪೂಜಾರಿಗೆ ಮಗ್ಗುಲ ಮುಳ್ಳಾಗಿರುವ ವ್ಯಕ್ತಿ. ಇದೀಗ ಮುಳ್ಳನ್ನು ಮುಳ್ಳಿಂದಲೇ ತೆಗೆಯುವ ತಂತ್ರಕ್ಕೆ ಕೈ ಹಾಕಿರುವ ರೈ-ಪೂಜಾರಿ ಗ್ಯಾಂಗ್ ವಸಂತ ಬಂಗೇರಾಗೆ ಬೆಳ್ತಂಗಡಿಯಲ್ಲಿ ಟಿಕೆಟ್ ಕೊಟ್ಟು ಗಂಗಾಧರ ಗೌಡರನ್ನು ಮಟ್ಟ ಹಾಕಲು ಹೊರಟಿದೆ.


ಮೊದ್ಮಣಿ ಪ್ರಭಾಕರ ಬಂಗೇರಾ, ಗೋಸುಂಬೆಯಂತೆ ಬಣ್ಣ ಬದಲಾಯಿಸುವ ವಸಂತ ಬಂಗೇರಾ ಈ ಅಣ್ಣ-ತಮ್ಮಂದಿರಿಗೆ ಹೋಲಿಸಿದರೆ ಗಂಗಾಧರ ಗೌಡರೇ ಬೆಳ್ತಂಗಡಿಗೆ ಸೂಕ್ತ ಎನಿಸುತ್ತಿದೆ. ಒಂದು ವೇಳೆ ಗೌಡರನ್ನು ಮೂಲೆಗುಂಪು ಮಾಡಿ ಬಂಗೇರಾಗೆ ಮಣೆ ಹಾಕಿದ್ದೇ ಆದರೆ ಅದರ ಅಡ್ಡ ಪರಿಣಾಮವನ್ನು ಕಾಂಗ್ರೆಸ್ ಪಕ್ಷ ಜಿಲ್ಲೆಯಲ್ಲೇ ಅನುಭವಿಸಬೇಕಾಗುತ್ತದೆ ಎನ್ನುವುದು ಅತಿಶಯೋಕ್ತಿಯಲ್ಲ.

■ ಪ್ರಕಾಶ್ ಪಿಂಟೋ

# ತೆಲುಗರ ಕಪಿಮುಷ್ಟಿಯಲ್ಲಿ ಬಿಜೆಪಿ

**ಪ್ರಸಾದ್ ರೆಡ್ಡಿ, ನಂದೀಶ್ ರೆಡ್ಡಿ, ಕಟ್ಟಾ ನಾಯ್ಡು, ಸತೀಶ್ ರೆಡ್ಡಿ, ಗೋಪಾಲ್ ರೆಡ್ಡಿ, ಜಗದೀಶ್ ರೆಡ್ಡಿ, ವಿಶ್ವನಾಥ್ ರೆಡ್ಡಿ, ನಟರಾಜ್ ರೆಡ್ಡಿ ಇಂಥವರೇ ಬೆಂಗಳೂರಿನ ಬಿಜೆಪಿ ಎಮ್ಮೆಲ್ಲೆಗಳಾಗಿ ಬಿಟ್ಟರೆ ಗತಿಯೇನು? ಯಡ್ಡಿಯ ಬದಲು ಗಣಿ ರೆಡ್ಡಿಯೇ ಮುಖ್ಯಮಂತ್ರಿಯಾಗಬಹುದು. ವಿಧಾನಸೌಧದ ಮುಂದೆ ವೆಂಕಯ್ಯನಾಯ್ಡುವಿನ ಪ್ರತಿಮೆಯೂ ಬರಬಹುದು. ಕೆಂಪೇಗೌಡರ ಬೆಂಗಳೂರು ಇವತ್ತಲ್ಲಾ ನಾಳೆ 'ತೆಲುಗು ಕಾಲೋನಿ'ಯಾದರೆ ಅದಕ್ಕೆ ಬಿಜೆಪಿಯ ಕೊಡುಗೆಯೇ ಹೆಚ್ಚು.**



ಹೊಗೇನಕಲ್‌ನಲ್ಲಿ ದೋಣಿಯೇರಿ ಕನ್ನಡ ಪ್ರೇಮ ಮೆರೆಯುವ ಯಡ್ಡಿ, ರೈಲ್ವೇಯಲ್ಲಿ ಕನ್ನಡಿಗರಿಗೆ ಅನ್ಯಾಯವಾಯ್ತೆಂದು ಸೋಗಿನ ಸೊಲ್ಲೆತ್ತುವ ಅನಂತಿ; ಇತ್ಯಾದಿ ಬಿಜೆಪಿ ದೊಣ್ಣೆನಾಯಕರ 'ಅಸಲೀ ಕನ್ನಡ ಕಾಳಜಿ' ಚುನಾವಣೆಗೆ ಮೊದಲೇ ಬಣ್ಣ ಕಳೆದುಕೊಳ್ಳುತ್ತಿದೆ.

ಇಡೀ ಬೆಂಗಳೂರಿನ 28 ಕ್ಷೇತ್ರಗಳ ಪೈಕಿ ರಾಜಾಜಿನಗರದ ಸುರೇಶ್‌ಕುಮಾರ್, ಜಯನಗರದ ವಿಜಯಕುಮಾರ್ ಮತ್ತು ವಿಜಯನಗರದ ಅಶ್ವತ್ಥನಾರಾಯಣರನ್ನು ಬಿಟ್ಟರೆ ಉಳಿಕೆ ಇಪ್ಪತ್ತೈದೂ ಕ್ಷೇತ್ರಗಳಿಗೆ ಒಬ್ಬನೇ ಒಬ್ಬ ಕನ್ನಡಿಗನಿಲ್ಲ, ಹಾಗೆಂದ ಮಾತ್ರಕ್ಕೆ ಬಿಜೆಪಿಯಲ್ಲಿ ಕನ್ನಡಿಗರಿಲ್ಲವೆಂದಾಗಲಿ, ಆಯಾ ಕ್ಷೇತ್ರಗಳಲ್ಲಿ ಕನ್ನಡಿಗರೇ ನಾಮಾವಶೇಷಗೊಂಡಿದ್ದಾರೆಂದಾಗಲಿ ಅಲ್ಲ, ಬೆಂಗಳೂರು ನಗರದ ಇಡೀ ಬಿಜೆಪಿಯನ್ನು ಸದ್ಯ ಆಂಧ್ರ ಮೂಲದ ನಾಯ್ಡು ರೆಡ್ಡಿಗಳು ಹೈಜಾಕ್ ಮಾಡಿಬಿಟ್ಟಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಯೊಳಕ್ಕೇ ಒಂದು ತೆಲುಗು ರಾಜ್ಯ ಸ್ಥಾಪಿಸಿ ಮುಂದೊಮ್ಮೆ ಬೆಂಗಳೂರನ್ನು 'ತೆಲುಗು ಕಾಲೋನಿ'ಯನ್ನಾಗಿ ಮಾಡುವ ನೆಲಗಳ್ಳರ ಹುನ್ನಾರವೊಂದಕ್ಕೆ ಸದ್ಯ ಬಿಜೆಪಿಯೇ ಆಯುಧವಾಗಿ ಬಿಟ್ಟಿದೆ.

ನಿನ್ನೆಮೊನ್ನೆಯ ತನಕ ಶಿವಾಜಿನಗರವನ್ನು ಪ್ರತಿನಿಧಿಸುತ್ತಿದ್ದ ಕಟ್ಟಾನಾಯ್ಡು ಪಕ್ಕದ ಹೆಬ್ಬಾಳಕ್ಕೆ ವಲಸೆ ಬರಲು ನಿರ್ದಿಷ್ಟ ಕಾರಣವೇ ಇಲ್ಲ, ಹಾಗೊಮ್ಮೆ ಕಟ್ಟಾ ಬರದೇ ಹೋದರೆ ಅಲ್ಲಿಗೆ ಮಾಜಿ ಕೌನ್ಸಿಲರ್ ಮುನಿಕೃಷ್ಣ ಎಂಬ ಕನ್ನಡಿಗನಿಗಿಂತ ಬೇರೆ ಅಭ್ಯರ್ಥಿಯಿಲ್ಲ, ಆದರೆ ಕಟ್ಟಾ ದುರಾಶೆಗೆ ಕನ್ನಡಿಗ ಮುನಿಕೃಷ್ಣ ತಲೆದಂಡ ತೆರಬೇಕಿದೆ. ಆಯ್ತು ಪಕ್ಕದ ಮಹಾದೇವಪುರಕ್ಕಾದರೂ ಮುನಿಕೃಷ್ಣರನ್ನು ನಿಲ್ಲಿಸಬೇಕಿತ್ತು ತಾನೆ? ಉಹ್ಞೂ ಅಲ್ಲಿಗೆ ದೂರದ ಬಾಗಲಕೋಟೆಯಿಂದ ಅರವಿಂದ ಲಿಂಬಾವಳಿ ವಲಸೆ ಬಂದಿದ್ದಾರೆ, ಲಿಂಬಾವಳಿಯದ್ದೂ ಆಂಧ್ರಾ ಮೂಲ!

ಆಯ್ತು ಕಟ್ಟಾ ವಲಸೆಯಿಂದ ತೆರವಾದ ಶಿವಾಜಿನಗರಕ್ಕಾದರೂ ಕನ್ನಡಿಗನೊಬ್ಬನನ್ನು ತರಬೇಕಿತ್ತಲ್ಲ; ಬಿಜೆಪಿಗೆ ಅದೂ ಬೇಕಿಲ್ಲ, ಅಲ್ಲಿಗೆ ಕಟ್ಟಾನಾಯ್ಡು ಕೇಡಿ ಪುತ್ರ ಕಟ್ಟಾ ಜಗ್ಗನನ್ನೇ ಬಿಜೆಪಿಯ ಅಭ್ಯರ್ಥಿಯನ್ನಾಗಿಸುತ್ತೇನೆಂದು ವೆಂಕಯ್ಯನಾಯ್ಡು ಹಠಕ್ಕೆ ಬಿದ್ದಿದ್ದಾನೆ. ಇದು ಶಿವಾಜಿನಗರ ಅಥವಾ ಹೆಬ್ಬಾಳಕಷ್ಟೇ ಮುಗಿಯುವ ಕತೆಯಲ್ಲ, ಅನಂತ್‌ಕುಮಾರ್ ಮೂಲತಃ ಆಂಧ್ರಾ ಮೂಲದ ತೆಲುಗು ಮನೆ ಭಾಷೆಯ ಮುಲುಕನಾಡು ಬ್ರಾಹ್ಮಣ. ಅರವಿಂದ ಲಿಂಬಾವಳಿ ಜಾತಿಯಲ್ಲಿ ಬೋವಿ ದಲಿತರಾದರೂ ಆಂಧ್ರಾ ಮೂಲದಿಂದ ವಲಸೆ ಬಂ
ತೆಲುಗು ಮಾತೃಭಾಷೆಯವರೆ. ಇಂಥವರಿಗೆ ಲಾಯಕ್ಕಾ
'ಆಂಧ್ರದ ದೊಂಗ' ವೆಂಕಯ್ಯ ನಾಯ್ಡು ಆ ಕಾಲದಿಂದಲ
ಇಡೀ ರಾಜ್ಯ ಬಿಜೆಪಿಯನ್ನು ಆಳುತ್ತ ಬಂದಿದ್ದಾನೆ.

ಇದು ರಾಜ್ಯ ಬಿಜೆಪಿ ಕತೆಯಾದರೆ, ಬೆಂಗಳೂರ
ನಗರದ ಮಟ್ಟಿಗಂತೂ ಇನ್ನೂ ಅಧ್ವಾನ. ಪ್ರಾರಂಭದ
ಸುರೇಶ್ ಕುಮಾರ್, ರಾಮಚಂದ್ರಗೌಡ, ವಿಮಲಾಗೌಡ
ಹಿಡಿತದಲ್ಲಿ ಬೆಂಗಳೂರು ಬಿಜೆಪಿಗೆ ಧೂಮಕೇತುವಿನಂ
ಅಪ್ಪಳಿಸಿದ್ದು ಮುಲುಕನಾಡು ಅನಂತ್‌ಕುಮಾರ್. ಕ್ರಮೇಣ
ಕನ್ನಡಿಗರ ಕೈ ತಪ್ಪಿದ ಸಿಟಿ ಬಿಜೆಪಿಯಲ್ಲಿ ಮೂಲತ
ತೆಲುಗು ಮನೆಭಾಷೆಯ ಹೊಸದೇವರ ಒಕ್ಕಲಿಗ ಜಾತಿಯ
ಆರ್. ಅಶೋಕ್ ದರ್ಬಾರ್ ಶುರುವಾಯಿತು. ತೆಲುಗಿನ
ಮಧ್ಯೆ ಕನ್ನಡ ನುಸುಳಿಸಿ ಮಿಕ್ಸಾಗಿ ಮಾತನಾಡುವ
ಅಶೋಕ್‌ಗೆ ಯಾವ ಕಾರಣಕ್ಕೋ ಗೊತ್ತಿಲ್ಲ, ಹಿಂದಿ
ನಿಂದಲೂ ತೆಲುಗು ವ್ಯಾಮೋಹ. ಪಟ್ಟಣಗೆರೆ ಬಾಲಕೃಷ್ಣ
ಪದ್ಮನಾಭನಗರದ ಎಲ್. ಶ್ರೀನಿವಾಸ್, ಜೆ.ಪಿ.ನಗರದ
ಎಸ್.ಕೆ. ನಟರಾಜ್ ರೆಡ್ಡಿಯಂಥ ಆಂಧ್ರಾ ಮೂಲದವರನ್ನೇ
ಬೆಳೆಸುತ್ತ ಬಂದ. ಅಶೋಕ್‌ಗಿಂತಲೂ ವಿಪರೀತ ಆಂಧ್ರಾ
ದರ್ಬಾರ್ ಶುರು ಹಚ್ಚಿಕೊಂಡವನು ಕಟ್ಟಾ ನಾಯ್ಡು.

ತಲಾ ಓಟೊಂದರ ಹಾಲಿ ಮಾರ್ಕೆಟ್ ರೇಟು ಎಷ್ಟಿರಬಹುದು?

ನೂರು, ಇನ್ನೂರು, ಮುನ್ನೂರು, ಐನೂರು?

ಊಹ್ಞೂ, ಸದ್ಯ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಸರ್ಜಾಪುರ ರೋಡು, ಹೊಸೂರು ರೋಡು, ಬಿಳೇಕಳ್ಳಿ, ಅರಕೆರೆ, ಹುಳಿಮಾವು, ರೂಪೇನ ಅಗ್ರಹಾರ ಇತ್ಯಾದಿ ಏರಿಯಾಗಳಲ್ಲಿ ಒಂದು ಓಟೆಂದರೆ ಅದು ಬರೋಬ್ಬರಿ ಸಾವಿರ ರೂಪಾಯಿ ನೋಟು!

ಪ್ರಾಕ್ಸಿ ಗುದ್ದಾದರೂ ಸಾವಿರ ಓಟು ಹಾಕಿಸಬಲ್ಲ ಯಾರೇ ಛೋಟಾ ಪುಢಾರಿಯೊಬ್ಬನಿಗೆ ತಲಾ ಒಂದು ಸ್ಕಾರ್ಪಿಯೋ ಗಾಡಿಯ ಫ್ರೀ ಗಿಫ್ಟು. ಪ್ರತಿ ಮನೆಯೊಂದಕ್ಕೆ ಒಂದು ಕಲರ್ ಟೀವಿ ಫ್ರೀ. ಕನಿಷ್ಠ ಐನೂರು ಓಟು ಹಾಕಿಸುತ್ತಾನೆಂದರೆ ಆತನಿಗೊಂದು ಪಲ್ಸರ್ ಮೋಟಾರ್ ಬೈಕು!

ಬಹುಶಃ ಕರ್ನಾಟಕದ ಚುನಾವಣಾ ಭ್ರಷ್ಟಾಚಾರದ ಇತಿಹಾಸದಲ್ಲಿ ಅಭ್ಯರ್ಥಿಯೊಬ್ಬ ಇಷ್ಟೊಂದು ಆಕರ್ಷಕ ಆಫರ್ ಕೊಟ್ಟ ಮತ್ತೊಂದು ಉದಾಹರಣೆ ಸಿಗಲಿಕ್ಕಿಲ್ಲ, ಈಪಾಟಿ ದುಡ್ಡು ಸುರಿದು ಯಾರೇ ಎಮ್ಮೆಲ್ಲೇ ಯಾಗಬೇಕೆಂದರೂ ಒಂದೋ ಆತ ಮಾಜಿ ಮಂತ್ರಿಯೋ ಮುಖ್ಯಮಂತ್ರಿಯೋ ಆಗಿರಬೇಕು. ಅಥವಾ ಖೋಟಾ ನೋಟು ಪ್ರಿಂಟ್ ಮಾಡುತ್ತಿರಬೇಕು. ಈ ಎರಡೂ ಸಾಧ್ಯತೆಗಳಲ್ಲಿದೇ ಹೋದರೆ ಈತ ದಕಾಯಿತನಾಗಿರಬೇಕು. ಕುಪೇಂದ್ರ ರೆಡ್ಡಿ ಇಂಥ ಯಾವುದೇ ರಿಸ್ಕಿಲ್ಲದೇ ಕೆಐಎಡಿಬಿಯೊಂದನ್ನೇ ಆಯುಧವಾಗಿಟ್ಟುಕೊಂಡು ಬಡರೈತರ ಭೂಮಿ ಕಿತ್ತು ಕುಬೇರನಾದ ಭೂಭಕ್ಷಕ. ಕುಪೇಂದ್ರ ರೆಡ್ಡಿಯೇ ಸದ್ಯ ಬೊಮ್ಮನಹಳ್ಳಿಗೆ ಕಾಂಗ್ರೆಸ್ ಅಭ್ಯರ್ಥಿ. ಮುಖ್ಯಮಂತ್ರಿಯಾಗೋ ದಕಾಯಿತಿ ಮಾಡೋ ಗಳಿಸುವ ಆಸ್ತಿಯ ನೂರುಪಟ್ಟನ್ನು ಒಂದೇ ಒಂದು ಲ್ಯಾಂಡ್ ಗ್ರಾಬಿಂಗ್‌ನಿಂದ ಗಳಿಸಬಹುದೆಂಬುದನ್ನು ಕರ್ನಾಟಕಕ್ಕೆ ತೋರಿಸಿಕೊಟ್ಟ ದಯಾನಂದ ಪೈ, ರೆಡ್ಡಿ ವೀರಣ್ಣ, ಉದಯ್ ಗರುಡಾಚಾರ್ ಇತ್ಯಾದಿಗಳ ಸಾಲಿಗೆ ಮೊದಲು ನಿಲ್ಲುವವನೇ ಈ ಕುಪೇಂದ್ರ ರೆಡ್ಡಿ.

## ಇನ್ನೂರು ಸ್ಕಾರ್ಪಿಯೋ

ಇಂಥ ಹಗಲು ದಕಾಯಿತನಿಗೀಗ ಅಧಿಕಾರ ಬೇಕು. ತನ್ನ ಬ್ಲಾಕ್ ಮನಿ, ಕೊಳ್ಳೆ ಹೊಡೆದ ಭೂಮಿ, ಲೂಟಿದ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾದರೂ ಆತ ಎಮ್ಮೆಲ್ಲೆ ಯಾಗಬೇಕು. ಕಾಂಗ್ರೆಸ್ ಟಿಕೆಟ್ ಆತನಿಗೆ ಕಷ್ಟವೇನಲ್ಲ, ಮನಸ್ಸು ಮಾಡಿದರೆ ಬಿಜೆಪಿ, ಜೆಡಿಎಸ್‌ಗಳ ಟಿಕೆಟ್ಟೂ ಅಸಾಧ್ಯವಲ್ಲ, ತಾನೊಬ್ಬನೇ ಬೆಂಗಳೂರಿನ ಹತ್ತು ಮಂದಿ ಕಾಂಗ್ರೆಸ್ ಅಭ್ಯರ್ಥಿಗಳ ಚುನಾವಣಾ ವೆಚ್ಚವನ್ನು ಭರಿಸುತ್ತೇನೆಂದು ಕಾಂಗ್ರೆಸ್ ವರಿಷ್ಠ ಜಗದೀಶ್ ಟೈಟ್ಲರ್‌ಗೆ ಮಾತು ಕೊಟ್ಟೇ ಬೊಮ್ಮನಹಳ್ಳಿಗೆ ಅಭ್ಯರ್ಥಿಯಾದ ಈತನಿಗೆ ರೊಕ್ಕ ಸುರಿದೇ ಎಮ್ಮೆಲ್ಲೆಯಾಗುವ ದುರ್ಬುದ್ಧಿ.

ಅದಕ್ಕೊಂದು ಈತನ ಜೋಡಿದಾರರಾದ ಕುಖ್ಯಾತ ಎಂಬೆಸ್ಸಿ ಬಿಲ್ಡರ್ಸ್‌ನ ಧಣಿ ಜೀತು ವೀರ್‍ವಾನಿ ಮತ್ತು ಆತನ ನೆಲಹಿಡುಕ ಪಾರ್ಟ್‌ನರ್ ರೆಡ್ಡಿ ವೀರಣ್ಣ ಸೇರಿಕೊಂಡು ಇನ್ನೂರು ಸ್ಕಾರ್ಪಿಯೋ ಗಾಡಿಗಳನ್ನು ಬುಕ್ ಮಾಡಿದ್ದಾರೆ. ಈ ಪೈಕಿ ಐವತ್ತು ಸ್ಕಾರ್ಪಿಯೋಗಳನ್ನು ಕಾಂಗ್ರೆಸ್ ದೈತ್ಯ ಆರ್.ವಿ. ದೇಶಪಾಂಡೆಯ ಮಗ ಪ್ರಸಾದ್ ದೇಶಪಾಂಡೆ ನಡೆಸುವ ಮೇಕ್ರಿ ವೃತ್ತದ ದ್ರುವದೇಶ್ ಹೋಂಡಾ ಏಜೆನ್ಸಿಯಿಂದ ಖರೀದಿಸಲಾಗಿದೆ. ಮಿಕ್ಕಂತೆ ಹೊಸೂರು ರಸ್ತೆಯ ಕುಪೇಂದ್ರ ರೆಡ್ಡಿಯದೇ ಒಡೆತನದ ಸಿರೀಶ್ ಆಟೋ ಮೊಬೈಲ್ಸ್ ಒಂದೇ ನೂರೈವತ್ತು ಸ್ಕಾರ್ಪಿಯೋಗಳನ್ನು ತಂದಿಟ್ಟುಕೊಂಡಿದೆ. ಏಕಾಏಕಿ ಇನ್ನೂರು ಸ್ಕಾರ್ಪಿಯೋಗಳು ಬೆಂಗಳೂರಿನ ರಸ್ತೆಗಿಳಿದರೆ ಏನಾಗಬಹುದೆಂಬುದು ಒತ್ತಟ್ಟಿಗಿರಲಿ, ಒಂದು ಸ್ಕಾರ್ಪಿಯೋ ಗಾಡಿಯ ಬೆಲೆ ಎಷ್ಟು ಗೊತ್ತೆ?

## ಬರೋಬರಿ ಹತ್ತು ಲಕ್ಷ ರೂಪಾಯಿ!

ಇಂಥ ಇನ್ನೂರು ಸ್ಕಾರ್ಪಿಯೋಗಳ ಒಟ್ಟು ಮೌಲ್ಯ ಇಪ್ಪತ್ತು ಕೋಟಿ. ಕ್ಷೇತ್ರ ಪುನರ್ ವಿಂಗಡಣೆಯಲ್ಲಿ ಇತ್ತೀಚೆಗಷ್ಟೇ ಹುಟ್ಟಿಕೊಂಡಿರುವ ಬೊಮ್ಮನಹಳ್ಳಿಯಲ್ಲಿ ಈ ಪಾಟಿ ದುಡ್ಡು ಸುರಿದು ಎಮ್ಮೆಲ್ಲೆ ಎನ್ನಿಸಿಕೊಳ್ಳುವ ಹರಕತ್ತಾಗಲಿ ತಾಕತ್ತಾಗಲಿ ಜೆಡಿಎಸ್, ಬಿಜೆಪಿಗಳ ಯಾವ ಅಭ್ಯರ್ಥಿಗೆ ತಾನೇ ಸಾಧ್ಯ? ಇಷ್ಟೆಲ್ಲ ದುಡ್ಡು ಸುರಿದು ಎಮ್ಮೆಲ್ಲೇಯಾದರೂ ಐದು ವರ್ಷಗಳಲ್ಲಿ ಇದರ ಅರ್ಧದಷ್ಟೂ ಗಿಟ್ಟುವುದಿಲ್ಲ. ಹಾಗಿರುವಾಗ ಕಾಂಗ್ರೆಸ್‌ನ ಕುಪೇಂದ್ರರೆಡ್ಡಿಯ ಮುಂದೆ ಜೆಡಿಎಸ್‌ನಿಂದಾಗಲಿ ಬಿಜೆಪಿಯಿಂದಾಗಲಿ ಯಾವ ಪೈಪೋಟಿ ತಾನೇ ಸಾಧ್ಯ?

## ರೌಡಿಗಳಿಗೆ ಮೊದಲ ಕಾಣಿಕೆ

ಇದು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಸದ್ಯದ ಟ್ರೆಂಡು. ಹಾಗೊಮ್ಮೆ ಪ್ರತಿ ಮನೆಗೆ ಕಲರ್‌ಟೀವಿ ಬೇಡವೆಂದರೆ ನಗದು ದುಡ್ಡಾಗಿ ಹತ್ತು ಸಾವಿರ ರೂಪಾಯಿಗಳನ್ನು ಕೊಡುತ್ತಾನೆ ಕುಪೇಂದ್ರರೆಡ್ಡಿ. ಯಾರಿಗೆ ಸ್ಕಾರ್ಪಿಯೋ ಗಾಡಿಯನ್ನು ನಿಭಾಯಿಸುವ ತಾಕತ್ತಿಲ್ಲವೋ ಅಂಥವನು ಬೇಕಿದ್ದರೆ ಹತ್ತು ಲಕ್ಷದ





**ಒಂದು ಓಟಿಗೆ ಸಾವಿರ ರೂಪಾಯಿ!**

**ಸಾವಿರ ಓಟಿಗೆ ಒಂದು ಸ್ಕಾರ್ಪಿಯೋ ಫ್ರೀ!!!**

ಕಂತೆ ಎಣಿಸಿಕೊಳ್ಳಬಹುದು. ಒಂದು ಮೂಲದ
ಪ್ರಕಾರ ಈಗಾಗಲೇ ರೂಪೇನ ಅಗ್ರಹಾರದ
ಖತರ್‌ನಾಕ್ ಹಂತಕ ಮುರುಗೇಶ, ದೊರೆಸಾನಿ
ಪಾಳ್ಯದ ಹಳೇ ರೌಡಿ ಅಂತೋಣಿ, ಚಿಕ್ಕಬೇಗೂರಿನ
ಪುಢಾರಿ ರವಿ, ಮಂಗಮ್ಮನಪಾಳ್ಯದ ರೌಡಿಗಳಾದ
ವಜೀರ್ ಮತ್ತು ಸುಬಾನ್ ಮುಂತಾದವರಿಗೆ
ತಲಾ ಒಂದೊಂದು ಸ್ಕಾರ್ಪಿಯೋ ಗಾಡಿಗಳನ್ನು
ಕುಪೇಂದ್ರರೆಡ್ಡಿ ಕೊಡಿಸಿದ್ದಾಗಿದೆ. ಕೊಡಿಸಿದ
ಸ್ಕಾರ್ಪಿಯೋದ ಋಣ ತೀರಿಸಲಿಕ್ಕೆಂದೇ
ನಿನ್ನವೊನ್ನೆಯ ತನಕ ಜೆಡಿಎಸ್‌ನಲ್ಲಿದ್ದ
ಆಡುಗೋಡಿಯ ಮತ್ತೊಬ್ಬ ಪಾತಕಿ ಪಮ್ಮಿ
ರೆಡ್ಡಿಯನ್ನು ಗೆಲ್ಲಿಸುವುದಕ್ಕೆಂದೇ ಕಾಂಗ್ರೆಸ್ಸಿಗೆ
ಕಾಲಿಟ್ಟಿದ್ದಾನೆ. ಇದು ಇಡೀ ಬೊಮ್ಮನಹಳ್ಳಿಯನ್ನು
ಆವರಿಸಿರುವ ಸ್ಕಾರ್ಪಿಯೋ ಮೇನಿಯಾದ
ಮುನ್ಸೂಚನೆ ಮಾತ್ರ.

ಅಷ್ಟಕ್ಕೂ ಈ ಕುಪೇಂದ್ರ ರೆಡ್ಡಿ ರಾಜಕಾರಣಿ
ಯಲ್ಲ, ಸಮಾಜಸೇವೆ, ಸಿದ್ಧಾಂತ, ಜಾತಿಪ್ರೇಮ,
ದೇಶಪ್ರೇಮ, ನೀತಿ, ವಿನಾಯಿತಿ ಯಾವುದೂ
ಇಲ್ಲದ ಹುಟ್ಟಾ ಭೂಕಂಟಕ. ಜೆಡಿಎಸ್-ಬಿಜೆಪಿ
ಸಮ್ಮಿಶ್ರ ಸರ್ಕಾರ ನಡೆದಷ್ಟೂ ದಿನ ಮಣ್ಣಿನ
ಮೊಮ್ಮಗ ಕುಮಾರಸ್ವಾಮಿಗೆ ಭಟ್ಟಂಗಿಯಾಗಿದ್ದ
ಸರ್ಜಾಪುರ ರಿಂಗ್‌ರಸ್ತೆಯ ಈತನ ಪ್ರೈಮಲ್
ಪ್ರಾಜೆಕ್ಟ್ ಎಂಬ ಐಷಾರಾಮಿ ಕಾಂಪ್ಲೆಕ್ಸ್‌ನಲ್ಲಿ
ದೇವೇಗೌಡರ ಮಗ ಬಾಲಕೃಷ್ಣೇಗೌಡ ತನ್ನ ಪತ್ನಿ
ಕವಿತಾ ಹೆಸರಿಗೆ ಐಭೋಗದ ಬಿಲ್ಡಿಂಗ್ ಒಂದನ್ನು
ಖರೀದಿಸಿ ಸ್ಟಾಂಪ್ ಡ್ಯೂಟಿ ವಂಚಿಸಿ ಸಿಕ್ಕಿಬಿದ್ದಿದ್ದು
ನೆಪಕ್ಕದು ಖರೀದಿಯಾದರೂ ವಾಸ್ತವವಾಗಿ
ಅಂಥಾದ್ದೊಂದು ಕಾಂಪ್ಲೆಕ್ಸನ್ನು ದೇವೇಗೌಡರ
ಫ್ಯಾಮಿಲಿಗೆ ಗಿಫ್ಟಾಗಿ ಕುಪೇಂದ್ರರೆಡ್ಡಿಯೇ ಕೊಟ್ಟಿದ್ದ
ಯಾವತ್ತು ಗೊಟ್ಟಿಗೆರೆ ಮಂಜ, ಭಾಗೇಗೌಡ ಮತ್ತು
ಕುಪೇಂದ್ರರೆಡ್ಡಿಯಂಥ ಕುಮಾರಸ್ವಾಮಿಯ
ಪರಮಾಪ್ತ ಲ್ಯಾಂಡ್ ಡೀಲರುಗಳ ಮನೆ ಮೇಲೆ
ಇನ್‌ಕಂಟ್ಯಾಕ್ಸ್ ರೇಡಾಯಿತೋ; ಹುಷಾರಾದ
ಕುಪೇಂದ್ರ ರೆಡ್ಡಿ ತಾನು ಹುಟ್ಟಾ ಕಾಂಗ್ರೆಸ್ಸಿಗನೆಂದೇ
ಪೋಜು ಕೊಟ್ಟು ಕಾಂಗ್ರೆಸ್ ನಾಯಕ ರಾಮಲಿಂಗಾ
ರೆಡ್ಡಿಯ ಸುತ್ತ ಠಳಾಯಿಸಿಕೊಂಡಿದ್ದ.

ಇಂಥವನನ್ನು ಕರೆತಂದು ಕಾಂಗ್ರೆಸ್ ಟಿಕೆಟ್
ಕೊಡಿಸಿ ಬೊಮ್ಮನಹಳ್ಳಿಯಿಂದ ನಿಲ್ಲಿಸಿ ಗೆಲ್ಲಿಸಿ
ಎಮ್ಮೆಲ್ಲೇ ಮಾಡುವ ದರ್ದು ಕಾಂಗ್ರೆಸ್ ನಾಯಕ
ರಾಮಲಿಂಗಾರೆಡ್ಡಿಗಿಂತಲೂ ವಿಪರೀತವಾಗಿರುವುದು
ಆರ್.ವಿ. ದೇಶಪಾಂಡೆಗೆ. ಏಕೆಂದರೆ ದೇಶಪಾಂಡೆ

ಊಲತಃ ಆಂಧ್ರದ ಚಿತ್ತೂರಿನ ಕಟ್ಟಾ ನಾಯ್ಡು ಅರಕ್ಕೂ ಕನ್ನಡ ಕಲಿತವನಲ್ಲ. ಆಂಧ್ರದ ತೆಲುಗು ಮಂತ್ರಿಯೊಬ್ಬರ ಮಗನಿಗೆ ತನ್ನ ಮಗಳನ್ನು ಕೊಟ್ಟು ಸೆ ಮಾಡಿಕೊಂಡಿದ್ದು ಒಂದೆಡೆಯಾದರೆ, ಮತ್ತೊಂದೆಡೆ 'ದೊಂಗ' ವೆಂಕಯ್ಯ ನಾಯ್ಡುವೇ ಈತನ ಳಿಕೆಗೆ ಅಧಿಕೃತ ಪಾರ್ಟ್ನರ್. ಸುರೇಶ್‌ಕುಮಾರ್, ಚಂದ್ರಗೌಡ, ವಿಮಲಾಗೌಡರಂಥವರು ಮೂಲೆ ಗಿ, ಅಶೋಕ್-ಕಟ್ಟಾ ಥರದವರು ಪ್ರಾಬಲ್ಯಕ್ಕೆ ದಕ್ಕೂ ತೀರ ಇತ್ತೀಚೆಗೆ 'ಗಣಿ ಖದೀಮ' ನ ರೆಡ್ಡಿ ಬೆಂಗಳೂರು ಬಿಜೆಪಿಯನ್ನು ಮಾಡುವುದಕ್ಕೂ ಒಂದೇ ಆಗಿಬಿಟ್ಟಿದೆ. ನ್ನೆದೊನ್ನೆಯ ತನಕ ಬಳ್ಳಾರಿಗಷ್ಟೇ ತವಾಗಿದ್ದ ಗಣಿ ರೆಡ್ಡಿಗೆ ಇಡೀ ೂರನ್ನು ವಶಪಡಿಸಿಕೊಳ್ಳುವ ದುರಾಶೆ. ಂದು ಜಿ. ಪ್ರಸಾದ್ ರೆಡ್ಡಿ ಎಂಬ ಪತಿ ಕಂ ರಿಯಲ್ ಎಸ್ಟೇಟಿಯರ್‌ರನ್ನು ಗಷ್ಟೇ ಬಿಜೆಪಿಗೆ ಕರೆತಂದು ಆತನನ್ನು ಂಗಾರೆಡ್ಡಿಯ ವಿರುದ್ಧ ಬಿಟಿಎಂ ಲೇಔಟಿಗೆ ಟ್ಟಿದ್ದಾನೆ. ಆಸ್ತಿಯಲ್ಲಿ ಪ್ರಸಾದ್ ರೆಡ್ಡಿ ಹತ್ತು ಕೋಟಿಯ ಒಡೆಯ. ಕುಪೇಂದ್ರ ರೆಡ್ಡಿಗೆ ಸನಾಗಿ ತೂಗುವ ರೊಕ್ಕಸ್ಥ. ಇಡೀ ೂರಿನ ಅಷ್ಟೂ ಬಿಜೆಪಿ ಅಭ್ಯರ್ಥಿಗಳ ಖರ್ಚನ್ನೆಲ್ಲ ತಾನೇ ನಿಭಾಯಿಸುತ್ತೇನೆನ್ನುವ ಸ್ತಿಗಾರ. ಈತನ ಬೆನ್ನಲ್ಲೇ ನಂದೀಶ್ ರೆಡ್ಡಿ ಕೆ.ಆರ್. ಪುರದ ಟಿಕೆಟ್ ಬೇಕೆಂದು ಬಿದ್ದಿದ್ದಾನೆ. ಗಣಿರೆಡ್ಡಿ, ಪ್ರಸಾದ್ ರೆಡ್ಡಿಗೆ ಹೋಲಿಸಿದರೆ ಶ್ ರೆಡ್ಡಿ ಸಭ್ಯ ಮತ್ತು ದುಷ್ಟನಲ್ಲ.

ಾಗಂತ ಗಣಿ ರೆಡ್ಡಿಯ ಅಟ್ಟಹಾಸ ನಿಲ್ಲುತ್ತಾ? ಕ್ಕದ ಬೊಮ್ಮನಹಳ್ಳಿಗೆ ಸತೀಶ್ ರೆಡ್ಡಿ ಅಥವಾ ಮೂರ್ತಿ ರೆಡ್ಡಿ, ಶಾಂತಿನಗರಕ್ಕೆ ಗೋಪಾಲ ರೆಡ್ಡಿ, ಹಂಕಕ್ಕೆ ವಿಶ್ವನಾಥ್ ರೆಡ್ಡಿ, ಬ್ಯಾಟರಾಯನಪುರಕ್ಕೆ ಶ್ ರೆಡ್ಡಿ; ಹೀಗೆ ಬೆಳೆಯುವ ಬೆಂಗಳೂರು ನಗರ ಅಭ್ಯರ್ಥಿಗಳ ಪಟ್ಟಿಯಲ್ಲಿ ರೆಡ್ಡಿ, ನಾಯ್ಡು ಸುರಾನಾಗಳನ್ನು ಬಿಟ್ಟರೆ ಕನ್ನಡಿಗರನ್ನು ದುರ್ಬೀನು ಹಾಕಿ ಹುಡುಕಬೇಕಷ್ಟೇ. ಚಿಕ್ಕಪೇಟೆಗೆ ಅಭ್ಯರ್ಥಿಯಾದ ಉದಯ್ ಗರುಡಾಚಾರ್ ತಮಿಳ, ಗಾಂಧಿನಗರಕ್ಕೆ ಬಂದ ಪಿ.ಸಿ. ಮೋಹನ್ ಕೂಡ ತೆಲುಗು ಮೂಲದ ನಾಯ್ಡು, ಮಹಾಲಕ್ಷ್ಮಿ ಲೇಔಟಿನಿಂದ ಸ್ಪರ್ಧಿಸಿದ ನಾಯಿ ಹರೀಶನೂ ಆಂಧ್ರಾ ಮೂಲದ ನಾಯ್ಡು ರೌಡಿಯೆ.



ಉಳಿದಂತೆ ಬಿಜೆಪಿಯಲ್ಲಿ ಕನ್ನಡಿಗರೇ ಅಲ್ಪಸಂಖ್ಯಾತರು ಮತ್ತು ನಿರ್ಗತಿಕರು. ಈ ಪೈಕಿ ಬಸವನಗುಡಿಯ ರವಿಸುಬ್ರಹ್ಮಣ್ಯ, ವಿಜಯನಗರದ ಅಶ್ವತ್ಥನಾರಾಯಣ, ರಾಜಾಜಿನಗರದ ಸುರೇಶ್‌ಕುಮಾರ್ ಮತ್ತು ಜಯನಗರದ ವಿಜಯ್‌ಕುಮಾರ್ ಇತ್ಯಾದಿಗಳ್ಯಾರೂ ಕಳೆದ ಬಾರಿ ಗೆದ್ದಿಲ್ಲ. ಈ ಸಾರಿಯೂ ಗೆದ್ದೇ ತೀರುತ್ತಾರೆಂಬ ಗ್ಯಾರಂಟಿಯಿಲ್ಲ. ಹಾಗೊಮ್ಮೆ ಪ್ರಸಾದ್ ರೆಡ್ಡಿ, ನಂದೀಶ್ ರೆಡ್ಡಿ, ಕಟ್ಟಾ ನಾಯ್ಡು, ಸತೀಶ್ ರೆಡ್ಡಿ, ಗೋಪಾಲ್ ರೆಡ್ಡಿ, ಜಗದೀಶ್ ರೆಡ್ಡಿ, ವಿಶ್ವನಾಥ್ ರೆಡ್ಡಿ, ನಟರಾಜ್ ರೆಡ್ಡಿ ಇಂಥವರೇ ಬೆಂಗಳೂರಿನ ಬಿಜೆಪಿ ಎಮ್ಮೆಲ್ಲೆಗಳಾಗಿ ಬಿಟ್ಟರೆ ಗತಿಯೇನು? ಯಡ್ಡಿಯ ಬದಲು ಗಣಿ ರೆಡ್ಡಿಯೇ ಮುಖ್ಯಮಂತ್ರಿಯಾಗಬಹುದು. ವಿಧಾನಸೌಧದ ಮುಂದೆ ವೆಂಕಯ್ಯನಾಯ್ಡುವಿನ ಪ್ರತಿಮೆಯೂ ಬರಬಹುದು. ಕೆಂಪೇಗೌಡರ ಬೆಂಗಳೂರು ಇವತ್ತಲ್ಲಾ ನಾಳೆ 'ತೆಲುಗು ಕಾಲೋನಿ'ಯಾದರೆ ಅದಕ್ಕೆ ಬಿಜೆಪಿಯ ಕೊಡುಗೆಯೇ ಹೆಚ್ಚು.

■ ರಾ. ಸೋಮನಾಥ್



ಕುಪೇಂದ್ರ ರೆಡ್ಡಿ



ರೆಡ್ಡಿ ವೀರಣ್ಣ



ಜೇತು ವೀರ್ವಾನಿ

ಎಲ್ಲಾ ಭೂಕೊಳ್ಳೆಯ ಪಾಲುದಾರ. ಇವತ್ತು ತನ್ನ ಆಸ್ತಿಯ ಮೊತ್ತವೆಂದು ಇನ್‌ಕಂಟ್ಯಾಕ್ಸ್ ಇಲಾಖೆಗೆ ಕೊಟ್ಟ ಲೆಕ್ಕವೇ ಏಳು ಸಾವಿರ ಕೋಟಿ! 996ರ ಸುಮಾರಿಗೆ ದೇವೇಗೌಡ ಪ್ರಧಾನಿಯಾಗಿದ್ದೇ ರಸ್ವಾಮಿಯ ತಲೆ ಕೆಡಿಸಿದ ಖದೀಮ ರೆಡ್ಡಿ ಮಣ್ಣಿನ ದುಡಿಮೆಯ ಒಂದು ಪಾಲನ್ನು ತನ್ನ ರಿಯಲ್ ದಂಧೆಯಲ್ಲಿ ತೊಡಗಿಸುವಲ್ಲಿ ಸಫಲನಾದ. ಗೌಡರ ಗಿರಿ ಹೋಗಿ ಕೃಷ್ಣರ ಸರ್ಕಾರ ನ್ನೇ ಲಾಸ್ ತೋರಿಸಿ ಕೈ ಹಾಗಂತ ಕುಮಾರಣ್ಣ ಬಿಡ ರೆಡ್ಡಿಯನ್ನು ಎತ್ತಾಕಿಕೊಂಡು ಸಮಾ ರುಬ್ಬಿ ಅಸಲು ಮಾಡಿಕೊಂಡರು. ಮಧ್ಯೆ ರೆಡ್ಡಿಯನ್ನು ಯ್ಯ ಆಗ ಕೈಗಾರಿಕಾ ಮಂತ್ರಿ ದ್ದ ಆರ್.ವಿ. ದೇಶಪಾಂಡೆಗೆ ಯಿಸಿಕೊಟ್ಟವನು ಮಹಾ ರೆಡ್ಡಿ ವೀರಣ್ಣ. ಇಬ್ಬರದೂ ಜಾತಿ ಒಂದೇ ರಾಶಿ. ರಸ್ಥರನ್ನು ತನ್ನ ರಿಚಮಂಡ್ ಕ್ಲಾಕ್ ಕೋರ್ಟ್ ಅಡ್ಡೆಗೆ ಕರೆಸಿ ಪೂಸುವುದು(!) ಕೊಟ್ಟು ಸರ್ಕಾರಿ ಭೂಮಿ ಕಬಳಿಸುತ್ತಿದ್ದ ರೆಡ್ಡಿ ಮತ್ತು ಕುಪೇಂದ್ರರೆಡ್ಡಿ ಸೇರಿಕೊಂಡು ಇದೇ ಹಳ್ಳಿಯೊಳಗೊಂದು 'ಗಾಯತ್ರಿ ಫ್ಯಾಷನ್ಸ್' ಹೆಸರಿನ ಫ್ಯಾಕ್ಟರಿ ಶುರು ಹಚ್ಚಿಕೊಂಡರು. ಕೋಟಿಕೋಟಿ ಭೂಕೊಳ್ಳೆಯ ಮುಂದೆ ಗಾರ್ಮೆಂಟ್ ಫ್ಯಾಕ್ಟರಿಯ ಲೆಕ್ಕ?



ದೇಶಪಾಂಡೆ

## ಇದೆಂಥ ಪ್ರಜಾಪ್ರಭುತ್ವ?

ಇಂಥವರಿಗೆ ಸಾವಿರ ಓಟಗೊಂದು ಸ್ಕಾರ್ಪಿಯೋ, ಮನೆಗೊಂದು ಕಲರ್ ಟೀವಿ, ತಲಾ ಓಟಿಗೆ ಸಾವಿರ ರೂಪಾಯಿ ಯಾವ ಲೆಕ್ಕ? ನಾಡನ್ನೇ ದೋಚಲು ನಿಂತವರಿಗೆ ಹತ್ತು ಮಂದಿಯ ಚುನಾವಣಾ ವೆಚ್ಚ ಭರಿಸುವುದು ಯಾವ ಮಹಾ?


ಪ್ರಶ್ನೆ ಅದಲ್ಲ. ಇವತ್ತು ಯಾರೋ ಕುಬೇರನೊಬ್ಬ ರೊಕ್ಕಸ್ಥ ಭೂಕಂಟಕನೊಬ್ಬ ದುಡ್ಡು ಕೊಡುತ್ತಾನೆಂದರೆ, ಪಕ್ಷಗಳು ಜೊಲ್ಲು ಸುರಿಸಿಕೊಂಡು ಆತನಿಗೆ ಟಿಕೆಟ್ ಕೊಡುತ್ತವೆಯೆಂದರೆ; ಆಯಾ ಪಕ್ಷಗಳ ಕಾರ್ಯಕರ್ತರ ಗತಿಯೇನು? ತಾವೂ ಕೂಡ ಲೂಟಿ, ದಹಾಯಿತಿ ಮಾಡಿಕೊಂಡಿದ್ದು ಬೇಕಾದಾಗ ಬಂದು ಪಾರ್ಟಿ ಟಿಕೆಟ್ ಖರೀದಿಸಬಹುದೆಂಬ ಸಂದೇಶವೊಂದನ್ನು ಪಕ್ಷಗಳು ತಮ್ಮ ಕಾರ್ಯಕರ್ತರಿಗೆ ನೀಡುತ್ತಿವೆಯೇ? ಹಾಗಾದರೆ ಪಕ್ಷನಿಷ್ಠೆ ಎಂಬುದಕ್ಕೆ ಅರ್ಥವೇ ಇಲ್ಲವೆ? ದುಡ್ಡೇ ದೊಡ್ಡಪ್ಪ ಎನ್ನುವುದಾದರೆ ಯಾವ ಭವರಸೆ ಹೊತ್ತು ಕಾರ್ಯಕರ್ತರಿನ್ನು ಪಕ್ಷಗಳಿಗಾಗಿ ದುಡಿಯಬೇಕು?

ಒಬ್ಬ ಭ್ರಷ್ಟ ಅಧಿಕಾರಿ, ಮತ್ತೊಬ್ಬ ನೆಲಗಳ್ಳ, ಮಗದೊಬ್ಬ ರೌಡಿ, ಇನ್ನೊಬ್ಬ ಕುಬೇರ; ಯಾವುದೇ ಅರ್ಹತೆಯಿಲ್ಲದೇ ಯಾವುದೇ ಪಕ್ಷದ ಟಿಕೆಟ್ ಖರೀದಿಸಬಹುದಾದರೆ, ಪಕ್ಷಗಳಾದರೂ ಏತಕೆಬೇಕು?

ಎಲ್ಲರೂ ಒಂದೇ ದೋಣಿಯ ಕಳ್ಳರೆ? ಇದೆಂಥಾ ಪ್ರಜಾಪ್ರಭುತ್ವ?

■ ರಾ. ಸೋಮನಾಥ್

# ಕಾರಂತರ ಆಸ್ತಿ ರಂಗಭೂಮಿ ರಗಳೆ



ಪ್ರಖ್ಯಾತ ರಂಗಕರ್ಮಿಗಳಾದ ಬಿ.ವಿ. ಕಾರಂತ ಹಾಗೂ ಅವರ ಪತ್ನಿ ಪ್ರೇಮಾ ಕಾರಂತರು ಬಿಟ್ಟುಹೋಗಿರುವ ವೈಯಕ್ತಿಕ ಹಾಗೂ ಥಿಯೇಟರ್ ಆಸ್ತಿಗಳ ಸುತ್ತ ಒಂದು ರಗಳೆ ಶುರುವಾಗಿದೆ.

ಕಾರಂತ ದಂಪತಿಗಳಿಗೆ ಬೆಂಗಳೂರಿನ ಗಿರಿನಗರದಲ್ಲಿ ಒಂದು ದೊಡ್ಡದಾದ ಸ್ವಂತ ಮನೆಯಿತ್ತು. ಅದೇ ಮನೆಯಲ್ಲಿ ಅತೀ ಅಮೂಲ್ಯವಾದ ಅಪರೂಪದ ಸಹಸ್ರಾರು ರಂಗಪರಿಕರಗಳ ಸಂಗ್ರಹವೂ ಇವೆ. ದಶಕಗಳ ಕಾಲ ಭಾರತದ ಉದ್ದಗಲಕ್ಕೂ ಓಡಾಡಿದ ಕಾರಂತ ದಂಪತಿಗಳು ಸಂಗ್ರಹಿಸಿದ ವಸ್ತುಗಳಿವು. ಜೊತೆಯಲ್ಲೇ ಸರಿಸುಮಾರು ಹದಿನೈದೂವರೆ ಸಾವಿರದಷ್ಟು ಪುಸ್ತಕಗಳಿವೆ. ಇದಲ್ಲದೇ ಪ್ರೇಮಾ ಕಾರಂತರು ತೀರಿಕೊಳ್ಳುವಾಗ ಅವರ ಹೆಸರಿನಲ್ಲೇ ಒಟ್ಟು ಸುಮಾರು ಇಪ್ಪತ್ತೊಂದು ಲಕ್ಷ ರೂಪಾಯಿ ಬ್ಯಾಂಕ್ ಡಿಪಾಸಿಟ್ ಸಹ ಇತ್ತು.

ತಮ್ಮ ನಿರ್ಗಮನಕ್ಕೂ ಮೊದಲೇ ಇದೆಲ್ಲದರ ನಿರ್ವಹಣೆ ಹಾಗೂ ವಾರಸುದಾರಿಕೆ ಬಗ್ಗೆ ಯೋಚಿಸಿದ್ದ ಪ್ರೇಮಾ ಕಾರಂತರು ಒಂದು ವಿಲ್ ಬರೆದಿಟ್ಟಿದ್ದರು. ಆ ಪ್ರಕಾರ ರಘುವೀರ ಹೊಳ್ಳ ಎಂಬುವವರು ಕಾರಂತ ದಂಪತಿಗಳ ಮನೆ ಹಾಗೂ ನಗದಿನ ಹಕ್ಕುದಾರರಾಗಿದ್ದಾರೆ.

ಅದೇರೀತಿ ಲೈಬ್ರರಿ, ರಂಗ ಪರಿಕರಗಳ ನಿರ್ವಹಣೆಗೆ 'ಬಾಬುಕೋಡಿ ಕಾರಂತ ಪ್ರತಿಷ್ಠಾನ'ವನ್ನು ರಚಿಸಲಾಗಿತ್ತು.

ನಿರ್ದೇಶಕ ನಾಗಾಭರಣ ಸೇರಿದಂತೆ ಒಂಬತ್ತು ಮಂದಿ ಈ ಟ್ರಸ್ಟಿನ ಸದಸ್ಯರಾಗಿದ್ದರು. ಆದರೆ ಈಗ ನಾಗಾಭರಣ ಟ್ರಸ್ಟಿನ ಮೆಂಬರ್‌ಗಳಲ್ಲದ ಕಪ್ಪಣ್ಣ, ಚಿತ್ರಕಲಾ ಪರಿಷತ್ತಿನ ಚೌತರನ್ನು ಕಾರಂತ ಪ್ರತಿಷ್ಠಾನದ ವ್ಯವಹಾರಕ್ಕೆ ಕರೆತರುವ ಮೂಲಕ ರಗಳೆ ಸೃಷ್ಟಿಸುತ್ತಿರುವಂತೆ ಭಾಸವಾಗುತ್ತಿದೆ.

ತಮ್ಮ ಜೀವನದ ಬಹುಭಾಗವನ್ನು ಕಷ್ಟದಲ್ಲೇ ಕಳೆದ ಕಾರಂತ ದಂಪತಿಗಳು ಉತ್ತರ ಭಾರತದ ವಾರಣಾಸಿ, ದೆಹಲಿ, ಭೂಪಾಲ್‌ಗಳಲ್ಲಿ ಬಹಳ ಕಾಲ ಕಳೆದಿದ್ದರು. ಆದರೆ ಯಾವುದೇ ಬಡತನ, ಕಷ್ಟಗಳೂ ರಂಗ ಭೂಮಿಯ ಮೇಲಿದ್ದ ಇವರ ಕಮಿಟ್‌ಮೆಂಟನ್ನು ಕದಲಿಸಲಿಲ್ಲ. ಈ ಸಂಕಷ್ಟದಲ್ಲೇ ಕಾರಂತರು ಗಿರಿನಗರದಲ್ಲೊಂದು ಅಚ್ಚುಕಟ್ಟಾದ ಮನೆ ಕಟ್ಟಿಸಿದ್ದರು. ಅವರು ಭೂಪಾಲ್‌ನಲ್ಲಿದ್ದಾಗಿನಿಂದಲೂ ಈ ದಂಪತಿಗಳ ಕಷ್ಟಗಳಿಗೆ ಹೆಗಲು ನೀಡಿ ನಿರ್ವಂಚನೆಯಿಂದ ನೆರವಾಗಿದ್ದವರೇ ಈ ರಘುವೀರ ಹೊಳ್ಳ. ಬೈಂದೂರಿನವರಾದ ಹೊಳ್ಳರ ಬಗ್ಗೆ ಕಾರಂತ ದಂಪತಿಗಳಿಗೆ ಅಪರಿಮಿತ ನಂಬಿಕೆ, ಪ್ರೀತಿ, ವಿಶ್ವಾಸವಿತ್ತು. ಮಕ್ಕಳಿರದಿದ್ದ ಕಾರಂತ ದಂಪತಿಗಳ ಪಾಲಿಗೆ ಹೊಳ್ಳರೇ ಮಾನಸಪುತ್ರ.





ಕಾರಂತ ದಂಪತಿಗಳು ಬದುಕಿದ್ದಾಗಲೇ ಬಾಬುಕೋಡಿ ಕಾರಂತ ಪ್ರತಿಷ್ಠಾನ ಅಸ್ತಿತ್ವಕ್ಕೆ ಬಂದಿತ್ತು. ಕಾರಂತರ ರಂಗ ಸಂಗ್ರಹವನ್ನೆಲ್ಲಾ ಸೇರಿಸಿ ಕಾರಂತರ ಹೆಸರಲ್ಲಿ ಮ್ಯೂಸಿಯಂ ಮಾಡಬೇಕೆಂಬ ಆಸೆ ಪ್ರೇಮಾರಿಗಿತ್ತು. ಅದಕ್ಕೆ ಕಳೆದ ವರ್ಷ ಕನ್ನಡ ಸಂಸ್ಕೃತಿ ಸಚಿವರಾಗಿದ್ದ ಮಹದೇವ ಪ್ರಸಾದರವರೂ ಸಮ್ಮತಿ ತೋರಿಸಿ ಎರಡೂವರೆ ಕೋಟಿ ರೂ. ಬಜೆಟ್ ಮಾಡಿಸಿ, ಪ್ಲಾನ್ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಆದೇಶಿಸಿದ್ದರು. ಕಾರಂತರ ರಂಗ ಪರಿಕರಗಳಿಗೆ ಗೌರವ ಸಂಭಾವನೆ ಎಂದು 10 ಲಕ್ಷ ನೀಡಿ ಅವನ್ನೆಲ್ಲಾ ಮೈಸೂರಿನ ರಂಗಾಯಣದಲ್ಲೊಂದು ಮ್ಯೂಸಿಯಂ ನಿರ್ಮಿಸಿ ಪ್ರದರ್ಶಿಸಲು ಯೋಚಿಸಲಾಗಿತ್ತು.

ಅದರಂತೆ ಕಳೆದ 2007ರ ಅಕ್ಟೋಬರ್‌ನಲ್ಲಿ ಹತ್ತು ಲಕ್ಷ ರೂ. ಬಿಡುಗಡೆಯೂ ಆಗಿದೆಯೆಂದು ಕಾರಂತ ಪ್ರತಿಷ್ಠಾನದ ಮ್ಯಾನೇಜಿಂಗ್ ಟ್ರಸ್ಟಿ ಮೈಸೂರಿನ ಜಯರಾಮ ಪಾಟೀಲರಿಗೆ ಒಂದು ಪತ್ರವೂ ಹೋಯಿತು. ಆದರೆ ಇಲ್ಲೂ ಸರ್ಕಾರಿ ಅಧಿಕಾರಿಗಳ ಉಢಾಪೆ ಎದ್ದು ಕಾಣುತ್ತಿತ್ತು.

ಹಣ ಬಿಡುಗಡೆ ಮಾಡಿದ ಇಲಾಖೆ "ಆ ಮೊತ್ತ ಯಾವ ಬಾಬತ್ತಿನದು, ಕಾರಂತರ ರಂಗಪರಿಕರಗಳು ಹಾಗೂ ಪುಸ್ತಕಗಳನ್ನು ಎಲ್ಲಿಗೆ ಸಾಗಿಸುತ್ತಾರೆ. ಮ್ಯೂಸಿಯಂ ಎಲ್ಲಿ ತಲೆಯೆತ್ತಲಿದೆ"ಎಂಬ ಬಗ್ಗೆ ಒಂದೂ ಮಾತಾಡಿರಲಿಲ್ಲ. ಅಷ್ಟೇ ಅಲ್ಲ ಟ್ರಸ್ಟಿನವರ ಜತೆ ಅಧಿಕೃತ ಪತ್ರವ್ಯವಹಾರವನ್ನೂ ನಡೆಸಿರಲಿಲ್ಲ. ಅವರ ಸಮ್ಮತಿಗಾಗಿ ಕೇಳಿರಲೂ ಇಲ್ಲ. ಇದರಿಂದ ಶಾಕ್ ಆದ ಟ್ರಸ್ಟ್ ಮೆಂಬರ್‌ಗಳು ತುರ್ತು ಸಭೆ ನಡೆಸಿ ಇವೆಲ್ಲಾ ಸ್ಪಷ್ಟಗೊಂಡ ನಂತರ ಮಾತ್ರ ಹಣ ಸ್ವೀಕರಿಸಬೇಕು ಇಲ್ಲದಿದ್ದರೆ ಬೇಡ ಎಂದು ನಿರ್ಧರಿಸಿ ಅದರಂತೆ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಈ ನಡುವೆ ಟ್ರಸ್ಟ್ ಸದಸ್ಯರೊಬ್ಬರು ಟ್ರಸ್ಟ್‌ನ ಬೇರೆ ಯಾರನ್ನು ಕೇಳದೆ ತಾವೊಬ್ಬರೇ ಏಕಪಕ್ಷೀಯವಾಗಿ ಸಂಸ್ಕೃತಿ ಇಲಾಖೆಯೊಂದಿಗೆ ವ್ಯವಹರಿಸಲು ಶುರು ಮಾಡಿದ್ದಾರೆ. ಟ್ರಸ್ಟ್‌ನ ಒಪ್ಪಿಗೆ ಇರದಿದ್ದಾಗಲೂ ಕಪ್ಪಣ್ಣ ಹಾಗೂ ಚೌತರನ್ನು ಸೇರಿಸಿಕೊಂಡು ಪ್ರತ್ಯೇಕ ಕಾರಂತ ಸಮಿತಿ ಮಾಡಿಕೊಂಡು ರಗಳೆ ಶುರುಮಾಡಿದ್ದಾರೆ.



ಪ್ರೇಮಾ ಕಾರಂತರು ನಿಧನರಾದ ಒಂದು ವಾರದ ಬಳಿಕ ಅವರ ವಿಲ್ ತೆರೆದು ನೋಡಲಾಯಿತು. ಅದರಲ್ಲಿ ಮನೆ ಹಾಗೂ ನಗದು ಹೊಳ್ಳರಿಗೆ ಸೇರಲಿ ಎಂದಿರುವುದನ್ನು ಕೇಳಿ ಸಿಡಿಮಿಡಿಗೊಂಡ ನಾಗಾಭರಣ 'Who is this Holla?' ಅಂತ ಕೇಳಿದ್ದರಂತೆ. ಹಾಗೆಯೇ ಉಳಿದೆಲ್ಲವೂ ಟ್ರಸ್ಟ್‌ಗೆ ಸೇರಬೇಕೆಂದು ವಿಲ್ ಹೇಳಿತು. ಹೀಗಿದ್ದಾಗಲೂ ನಾಗಾಭರಣ ಹೊಳ್ಳರಿಗೆ "ಕಾರಂತೋತ್ಸವ ಮಾಡಲು ನಿಮಗೆ ಬಂದಿರುವ ಹಣದಲ್ಲಿ 10 ಲಕ್ಷ ಕೊಡಿ. ಕಾರಂತರ ಮನೆ ಮೇಲಿನ ಮಹಡಿಯಲ್ಲಿ ಒಂದು ರಿಹರ್ಸಲ್ ಕೇಂದ್ರ ಮಾಡೋಣ" ಎಂದೆಲ್ಲಾ ಒತ್ತಡ ತರುತ್ತಿದ್ದಾರಂತೆ.

ಈ ಟ್ರಸ್ಟ್‌ನಲ್ಲಿ ಟಿ.ಎಸ್. ರಂಗಾ, ಜಂಬೆ, ಕೆ.ಜಿ. ಸಂಪತ್‌ಕುಮಾರ್, ಜಯರಾಮ ಪಾಟೀಲ್, ಹೊಳ್ಳ ಹಾಗೂ ನಾಗಾಭರಣ ಇದ್ದಾರೆ. ಬಿ.ವಿ.ಕಾರಂತ, ಪ್ರೇಮಾ ಹಾಗೂ ಹೈಕೋರ್ಟ್ ವಕೀಲ ರಮೇಶ್ ನಿಧನರಾಗಿದ್ದಾರೆ.

ನಾಗಾಭರಣ ಒಬ್ಬರನ್ನು ಬಿಟ್ಟು ಉಳಿದವರಿಗೆಲ್ಲ ಕಾರಂತರ ಹೆಸರಿನಲ್ಲಿ ಒಂದು ಮ್ಯೂಸಿಯಂ ಆಗಲಿ. ಅಮೂಲ್ಯ ವಸ್ತುಗಳು ಅಲ್ಲಿ ಸುರಕ್ಷಿತವಾಗಿರಲಿ ಎಂಬ ಒಂದೇ ಆಸೆ ಇದೆ.

ಯಾವುದೇ ಸ್ವಾರ್ಥ ಲೆಕ್ಕಾಚಾರಗಳಿರದ ರಂಗಕಾಳಜಿ ಇದು. ಆದರೆ ಕಾರಂತರ ಆಪ್ತರಾಗಿದ್ದ ನಾಗಾಭರಣರಿಗೆ ಏನಾಗಿದೆ? ಟ್ರಸ್ಟ್‌ನ ನಿಯಮಗಳನ್ನು ಮೀರಿ, ಮಿತ್ರರ ಕಾಳಜಿಗಳನ್ನು ಲೆಕ್ಕಿಸದೇ ಅವರೊಬ್ಬರೆ ಯಾಕೆ ಸರ್ಕಾರದೊಂದಿಗೆ ವ್ಯವಹರಿಸುತ್ತಿದ್ದಾರೆ? ನಾಳೆ ಈ ವಿವಾದ ಬೀದಿಗೆ ಬಂದರೆ ಭರಣರ ಗೌರವ ಉಳಿಯುತ್ತಾ?

ಟ್ರಸ್ಟ್‌ನವರು ಈಗಾಗಲೇ ನಾಗಾಭರಣರ ಈ ಕಾನೂನು ಬಾಹಿರ ಕೆಲಸದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ಸರ್ಕಾರಕ್ಕೆ ಪತ್ರ ಬರೆದೂ ಆಗಿದೆ. ನಾಗಾಭರಣ ಕ್ಷಣ ನಿಂತು ಯೋಚಿಸಲಿ.

■ ಶಶಿಕಾಂತ ಯಡಹಳ್ಳಿ



# ಕೃಷ್ಣ ನಿಲ್ತಾರಾ?

ಕರ್ನಾಟಕ ವಿಧಾನಸಭಾ ಚುನಾವಣಾ ಅಗ್ನಿಕುಂಡಕ್ಕೆ ಸಜ್ಜಾಗುತ್ತಿದ್ದಂತೆಯೇ, ಮಂಡ್ಯ ಜಿಲ್ಲೆಯಲ್ಲಿ ಮದ್ದಾನೆಗಳ ಒಡ್ಡೋಲಗವೇ ನೆರೆದು ನಿಂತಿದೆ. ಎಲ್ಲಾ ಪಕ್ಷದ ಮುಖಂಡರು ನಾಮುಂದು-ತಾಮುಂದು ಎಂಬಂತೆ ಟಿಕೆಟ್ ಗಿಟ್ಟಿಸಿಕೊಳ್ಳಲು ದುಮು-ದುಮು ಅಂತ ದಾಂಗುಡಿಯಿಡುತ್ತಿದ್ದಾರೆ. ಕಾಂಗ್ರೆಸ್, ಜೆಡಿಎಸ್, ಬಿಜೆಪಿಯಿಂದ ಹಿಂದು-ಹಿಂದು ಆಕಾಂಕ್ಷಿಗಳು ಬಕಪಕ್ಷಿಗಳಂತೆ ಕಾದು ಕುಂತಿದ್ದಾರೆ. ಪ್ರತೀ ಪಕ್ಷದಲ್ಲೂ ತಲಾ ಮೂರ್‍ನಾಲ್ಕು ಗುಂಪುಗಳಾಗಿವೆ. ಬಿಸಿನೆಸ್ಸು, ಲಿಕ್ಕರು, ಭೂವ್ಯಾಪಾರ, ಕ್ವಾರಿ ದಂಧೆ, ಕೊನೆಗೆ ಮೈಮಾರಾಟದ ದಂಧೆಯವರೂ ಸಹ ಎಮ್ಮೆಲ್ಲೆಯಾಗುವ ಇರಾದೆಯಿಂದ ಫೀಲ್ಡಿಗಿಳಿದಿದ್ದಾರೆ. ಕ್ಷೇತ್ರ ಕಳೆದುಕೊಂಡವರು ಕನಲಿ ಕಿರುಚತೊಡಗಿದ್ದರೆ, ಕಳೆದ ಬಾರಿ ಗೆದ್ದವರು ಮಾನ ಹಾಗೂ ಅಧಿಕಾರ ಉಳಿಸಿಕೊಳ್ಳುವ ಯತ್ನದಲ್ಲಿ ಕೋಟಿ-ಕೋಟಿ ಸುರಿಯಲು ತಿಜೋರಿ ತೆರೆದು ನಿಂತಿದ್ದಾರೆ. ಕಳೆದ ಚುನಾವಣೆಯಲ್ಲಿದ್ದ 9 ಕ್ಷೇತ್ರಗಳಲ್ಲಿ ಜೆಡಿಎಸ್ ಆರು, ಕಾಂಗ್ರೆಸ್ ಬರೀ ಎರಡು ಹಾಗೂ ಜೆಡಿಯು ಒಂದನ್ನು ಕಬಳಿಸಿಕೊಂಡಿದ್ದವು. ಬಿಜೆಪಿಯಂತೂ ಅಲೆ-ನೆಲೆಯಿಲ್ಲದೇ ಬಕ್ಕಬಾರಲು ಬಿದ್ದಿತ್ತು. ಇದೀಗ ಗೆದ್ದವರಿಗೆ ಪುನಃ ಗೆಲ್ಲುವ ಉಮೇದಿ, ಸೋತವರಿಗೆ ಹೇಗಾದರೂ ಗೆಲ್ಲುವ ಹಪಾಹಪಿ ಶುರುವಾಗಿದ್ದರೆ, ಟಿಕೆಟು ದಕ್ಕಿಸಿಕೊಳ್ಳುವ ಧಾವಂತವೂ ಆರಂಭವಾಗಿದೆ. ಒಟ್ನಾರೆ ರಣಹದ್ದುಗಳ ಕಾಳಗಕ್ಕೆ ರಣಾಂಗಣ ಸಿದ್ಧವಾಗಿದೆ.

ಕ್ಷೇತ್ರ ಮರುವಿಂಗಡಣೆಯ ದೆಸೆಯಿಂದಾಗಿ ಕಿರುಗಾವಲು, ಕೆರಗೋಡು, ಪಾಂಡವಪುರ ಕ್ಷೇತ್ರಗಳು ಹರಿದು ಹಂಚಿಹೋಗಿ ಮಂಡ್ಯ, ಮದ್ದೂರು, ನಾಗಮಂಗಲ, ಮಳವಳ್ಳಿ, ಕೆ.ಆರ್. ಪೇಟೆ, ಶ್ರೀರಂಗಪಟ್ಟಣ ಮಾತ್ರವೇ ಉಳಿದು ಮೇಲುಕೋಟೆ ಹೊಸದಾಗಿ ಸೃಷ್ಟಿಯಾಗಿದೆ. ಅಸಲಿಗೆ ಈ ಎಲ್ಲಾ ಕ್ಷೇತ್ರಗಳಲ್ಲೂ ಜೆಡಿಎಸ್ ಹಾಗೂ ಕಾಂಗ್ರೆಸ್ ನಡುವೆ ನೇರ ಹಣಾಹಣಿ ಎಂಬುದಂತೂ ಕಟುಸತ್ಯವಾದರೂ ಬಿಜೆಪಿ ಸ್ವಲ್ಪಮಟ್ಟಿಗೆ ಚಿಗುರುತ್ತದೆಯೇ ಹೊರತು ಕೊನರುವುದಿಲ್ಲ, ಹಾಗಾಗಿ ಕಾಂಗ್ರೆ-ಜೆಡಿಎಸ್ ಪಕ್ಷಗಳಲ್ಲಿ ಟಿಕೆಟ್ ಆಕಾಂಕ್ಷಿಗಳ ಪ್ರಬಲ ದಂಡೇ ನೆರೆದು ಕುಂತಿದೆ.

ಜಿಲ್ಲೆಯ ಪ್ರತಿಷ್ಠಿತ ಕಣಗಳ ಪೈಕಿ ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಾಗಿ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಅರ್ಧ ಡಜನ್‌ಗಿಂತಲೂ ಹೆಚ್ಚು ಹಾರಾಟದಲ್ಲಿಲ್ಲದಿದ್ದರೂ ಕೊನೆಗೆ ಆತ್ಮಾನಂದರಿಗೆ ಟಿಕೆಟ್ ದಕ್ಕುವುದಂತೂ ಖರೆ. ಇತ್ತೀಚೆಗೆ ರೌಡಿ ಜಡೇಜಾ ರವಿ ಹತ್ಯೆಗೆ ಪ್ರತೀಕಾರವಾಗಿ ಕೊಲೆಗೀಡಾದ ಅಬಕಾರಿ ನಾಗಣ್ಣನ ಪತ್ನಿ ವಿದ್ಯಾ ನಾಗೇಂದ್ರ ಸಿಂಪಥಿಯ ಲಿಸ್ಟಿನಲ್ಲಿದ್ದಾರೆ. ಹೇಗಿದ್ದರೂ ನಾಗಣ್ಣ ಬದುಕಿದ್ದರೆ ಟಿಕೆಟ್ ಅವರಿಗೇ ಎಂಬುದು ಖಾತ್ರಿಯಾಗಿತ್ತು, ಹಾಗಾದಲ್ಲಿ ಗಂಡನ ಸಾವಿನ ಅನುಕಂಪ ಓಟುಗಳಾಗಿ ಪರಿವರ್ತನೆಯಾಗಬಹುದೆನ್ನುವ ಅಂದಾಜಿದೆಯಾದರೂ ಕಾಂಗ್ರೆಸ್ ಟಿಕೆಟ್‌ಗಾಗಿ ಶ್ರೀಕಾಂತ್, ರಮೇಶ್ ಬಾಬು, ಅಬಕಾರಿ ಮಹೇಶ್, ರವಿಶಂಕರೇಗೌಡ, ಟಿಕೆಟ್ ಗಿಟ್ಟಿಸುವ ಹವಣಿಕೆಯಲ್ಲಿದ್ದಾರೆ. ಆದರೂ ಇವರೇನು ಗೆಲ್ಲುವ ಐಟಮ್ಮುಗಳೇನಲ್ಲ, ಮಾಜಿ ಕೌನ್ಸಿಲರ್ ರವಿಶಂಕರೇಗೌಡನೆಂಬ ಬಡ್ಡಿ ಗಿರಾಕಿ ಸಹ ಎಮ್ಮೆಲ್ಲೆಗೆ ಸ್ಪರ್ಧಿಸುವ ಉಸಾಬರಿಯಲ್ಲಿದ್ದಾನೆ. ಅಂಬರೀಷ್ ಶಿಷ್ಯ ಅನ್ನೋದು ಬಿಟ್ಟರೆ ಮತ್ಯಾವ ಪೋಷಾಕುಗಳಿಲ್ಲದ ಗೌಡನಿಗೆ ಅವಕಾಶ ಸಿಗೋದು ಕಷ್ಟ-ಕಷ್ಟ. ಹಾಗಾಗಿ ಆತ್ಮಾನಂದ ಅಧಿಕೃತ ಅಭ್ಯರ್ಥಿಯಾದರೆ, ಒಳಜಗಳ ತಾರಕಕ್ಕೇರುವುದೂ ಕೂಡ ಸ್ಪಷ್ಟ. ಕಳೆದ ಸಲ ಸೋತಿದ್ದರೂ, ಈ ಸಲ ಗೆಲುವಿನ ಭಾಷ್ಯ ಬರೆಯೋದು ಅಷ್ಟು ಸುಲಭವಲ್ಲ.

ಒಂದು ವೇಳೆ ಎಸ್.ಎಂ. ಕೃಷ್ಣರೇನಾದರೂ ಕಾಂಗ್ರೆಸ್‌ನಿಂದ ನಿಂತರೆ ಮದ್ದೂರಿನಲ್ಲಿ ದಳ ಜಯ ಗಳಿಸುವುದು ಕಷ್ಟವೇ. ಈಗಾಗಲೇ ಟಿಕೆಟ್ ನಂದೇ ಎಂದು ಭಾಜ-ಭಜಂತ್ರಿ ಬಾರಿಸುತ್ತಿರುವ ಮಧು ಮಾದೇಗೌಡ, ನಮಗೇ ಬೇಕಂತ ಎಸ್ಸೆಂ ಶಂಕರ್, ಗುರುಚರಣ್, ನಟ ಅಂಬರೀಷ್ ಪೈಪೋಟಿಯಲ್ಲಿದ್ದರೂ, ಕೊನೆಗೆ ಕೃಷ್ಣ ಬರದಿದ್ದಲ್ಲಿ ಡಿ.ಸಿ. ತಮ್ಮಣ್ಣನಿಗೇ ಟಿಕೆಟ್ ಗ್ಯಾರಂಟಿ.

ಹಾಗಾದಲ್ಲಿ ಜೆಡಿಎಸ್‌ನಿಂದ ಮತ್ತೆ ಶಾಸಕನಾಗ ಹೊರಟಿರುವ ಎಂ. ಶ್ರೀನಿವಾಸ್ ಗೆಲ್ಲುವ ಛಾನ್ಸ್ ಇದೆಯಾದರೂ, ಅಲ್ಲೂ ಪ್ರಭಾವತಿ ಜಯರಾಂ, ಸಿದ್ಧರಾಮೇಗೌಡರ ಗುಂಪುಗಳಿವೆ. ಮಾಜಿ ಸಚಿವ ಎಸ್.ಡಿ. ಜಯರಾಂ ಪತ್ನಿ ಪ್ರಭಾವತಿಗೆ ಚಲುವರಾಯಸ್ವಾಮಿ ಹಿಕ್ಮತ್ತಿದೆಯಾದರೂ, ಟಿಕೆಟ್ ಸಿಗುವ ಸಾಧ್ಯತೆ ಕಡಿಮೆಯೇ. ಮೈ ಶುಗರ್ ಅನ್ನು ಹುರಿದು ಮುಕ್ಕಿದ ಸಿದ್ಧರಾಮೇಗೌಡನೂ ಸಹ ಆಕಾಂಕ್ಷಿಯೇ. ಇಬ್ಬರಿಗೂ ಒಂದಷ್ಟು ಪ್ರಭಾವವಿರುವ ತಗ್ಗಳ್ಳಿ ಹಾಗೂ ಮಂಗಳ ಜಿಲ್ಲಾ ಪಂಚಾಯಿತಿಗಳು ಶ್ರೀರಂಗಪಟ್ಟಣಕ್ಕೆ ಸೇರಿರುವು ದರಿಂದ ಟಿಕೆಟ್ ದಕ್ಕಿದರೂ ಅವರ ಹೋರಾಟ ಕಷ್ಟವಾಗಿ ಕಾಂಗ್ರೆಸ್‌ಗೆ ವರದಾನವಾಗುತ್ತದೆ. ಒಟ್ನಾರೆ ಮಂಡ್ಯ ಕ್ಷೇತ್ರದಲ್ಲಿ ಕಾಂಗ್ರೆಸ್-ಜೆಡಿಎಸ್ ಜಿದ್ದಾಜಿದ್ದಿಯೇ ಪ್ರಧಾನವಾಗಿದೆ.

ಹಾಗಂತ ಬಿಜೆಪಿ ಹಿಂದೆ ಬೀಳದಿದ್ದರೂ ಒಂದಷ್ಟು ಮುಂದೆ ಬರುವುದು ಖಚಿತ. ಸಾಕಷ್ಟು ವೃದ್ಧಿಯಾಗಿರುವ ಬಿಜೆಪಿ ವತಿಯಿಂದ ನಿಲ್ಲುವ ಹಪಾಹಪಿಯಲ್ಲಿರುವ ಅಬ್ಬಾಸ್ ಅಲಿ ಬೋಹ್ರಾ ವಿರುದ್ಧ ಮುಸ್ಲಿಮರದ್ದೇ ಪ್ರಬಲ ಗುಂಪಿನ ವಿರೋಧವಿದೆ. ಕ್ವಾರಿ ದಂಧೆಗಳಿಂದ ಸಾಕಷ್ಟು ಗೆಬರಿ, ತಿಜೋರಿ ತುಂಬಿಕೊಂಡಿರುವ ಡಾ. ರವಿ ಶಂಕರೇಗೌಡ ಈಗಾಗಲೇ ತನ್ನ ಕಳ್ಳಹಣವನ್ನು ಸಾಕಷ್ಟು ಸುರಿದಿದ್ದಾನೆ. ಅದೆಲ್ಲಕ್ಕಿಂತ ಕೆಬ್ಬಳ್ಳಿ ರಾಜುಗೆ ಟಿಕೆಟ್ ಗ್ಯಾರಂಟಿಯೆಂಬ ಮಾತಿದೆ. ಅವನೋ ಹೆಣ್ಣುಮಕ್ಕಳ ಮಾನ ಹರಾಜಿಗಿಟ್ಟೇ ದುಂಡಗಾದ ಹೈಟೆಕ್ ವೇಶ್ಯಾವಾಟಿಕೆ ದಂಧೆಯ ಅಧಿನಾಯಕ. ಈತನ ಮೇಲೆ ರೇಪ್‌ಕೇಸ್ ಹೆಗಲೇರಿ ಜೈಲಲ್ಲಿದ್ದು ಬಂದಿರುವ ನಟೋರಿಯಸ್ ಸ್ಕಿನ್ ವ್ಯಾಪಾರಿ. ಕೊನೆಗೆ ಯಾರಿಗೇ ಟಿಕೆಟ್ ದಕ್ಕಿದರೂ ದುಡ್ಡಿನ ಸುರಿಮಳೆಯೇ. ಆದರೆ ಬಿಜೆಪಿ ಗೆಲ್ಲುವುದು ಕಷ್ಟವೇ ಸರಿ.

## ಕೃಷ್ಣ ನಿಲ್ತಾರಾ!

ಈಗಾಗಲೇ ಮದ್ದೂರಿನಲ್ಲಿ ಜೆಡಿಎಸ್‌ನಿಂದ ಸಿದ್ಧರಾಜು ಕಣಕ್ಕಿಳಿಯುವುದು ಗ್ಯಾರಂಟಿಯಾಗಿದ್ದರೂ ಅದರಲ್ಲೇ ನಾಲ್ಕು ಹುತ್ತಗಳಾಗಿವೆ. ಕೌಟಲ್ಯ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷನಾಗಿ ಗಡುತ್ತಾಗಿ ಉಂಡೆದ್ದಿರುವ ಕೋಟಿಶೂರ ಹೊನ್ನಲಗೆರೆ ರಾಮಕೃಷ್ಣ ಮಾಜಿ ಸಚಿವ ಚಲುವರಾಯಿ ಸ್ನೇಹಿತ ವಿ.ಕೆ. ಜಗದೀಶ್, ತಾಲ್ಲೂಕು ಅಧ್ಯಕ್ಷರಾದ ವಿಜಯೇಂದ್ರ, ಮಾಜಿ ಶಾಸಕ ಮಹೇಶ್ ಚಂದ್ ಹಾಗೂ ಜಿಲ್ಲಾ ಪಂಚಾಯ್ತಿ ಸದಸ್ಯ ಸ್ವರೂಪ್ ಚಂದ್ ಇವರೆಲ್ಲರೂ ಟಿಕೆಟ್ ಆಕಾಂಕ್ಷಿಗಳೇ. ಸಿದ್ಧರಾಜು ಮೇಲೆ ಜನರಿಗೆ ಸಿಂಪಥಿಯೇನೋ ಇದೆ. ಜತೆಗೆ ಕಿರುಗಾವಲು ಕ್ಷೇತ್ರದಿಂದ ಭಾರತೀನಗರ ಸೇರಿಕೊಂಡಿರುವುದರಿಂದ ಅವರ ಗೆಲುವು ಕಷ್ಟವಾಗಲಿಕ್ಕಿಲ್ಲ, ಆದರೆ ಗುಂಪುಗಳು ಜತೆಗೂಡಬೇಕಷ್ಟೇ. ಒಂದು ವೇಳೆ ಎಸ್.ಎಂ. ಕೃಷ್ಣರೇನಾದರೂ, ಕಾಂಗ್ರೆಸ್‌ನಿಂದ ನಿಂತರೆ ಮದ್ದೂರಿನಲ್ಲಿ ದ[…] ಜಯ ಗಳಿಸುವುದು ಕಷ್ಟ[…] ಈಗಾಗಲೇ ಟಿಕೆಟ್ ನಂ[…] ಎಂದು ಭಾಜ-ಭಜಂತ್ರಿ ಬಾರಿಸುತ್ತಿರುವ ಮಧು ಮಾದೇಗೌಡ, ನಮಗೇ[…] ಬೇಕಂತ ಎಸ್ಸೆಂ ಶಂಕರ್, ಗುರುಚರಣ್, ನಟ ಅಂಬರೀಷ್ ಪೈಪೋಟಿಯಲ್ಲಿದ್ದರೂ, ಕೊನೆಗೆ ಕೃಷ್ಣ ಬರದಿದ್ದಲ್ಲಿ ಡಿ.ಸಿ. ತಮ್ಮಣ್ಣನಿಗೇ ಟಿಕೆ[…] ಗ್ಯಾರಂಟಿ. ಹಾಗಾದಲ್ಲಿ ಸಿದ್ಧರಾಜು ಗೆಲುವು ಮರೀಚಿಕೆಯೇನಲ್ಲ, ಯಾಕೆಂದರೆ ಯಾವಾಗಲ[…] ಕಾಂಗ್ರೆಸ್ ಬೆಲ್ಟ್ ಆಗಿದ್ದ ಹೋಬಳಿ ಹರಿದು ನಾಗಮಂಗಲ ತೆಕ್ಕೆಗೆ ಹೋಗಿದೆ.

ಬಿಜೆಪಿ ಇಲ್ಲಿ ಅಷ್ಟಕಷ್ಟೆಯಾಗಿದ್ದರೂ, ವನಜಾಕ್ಷಿ ರಾಮಯ್ಯ, ಶಾಂತಲಾ ಸಿಲ್ಕ್‌ರ ಮಾಲಿ[…] ಉಮೇಶ್ ಪಾಟೀಲ್ ಹುಚ್ಚಪ್ಪ, ಎಸ್.ಎಂ. ಕೃಷ್ಣ[…] ಅಕ್ಕನ ಮಗ ಅಭಿಲಾಷ್ ಟಿಕೆಟ್ ಕಸರತ್ತು ಆರಂಭಿಸಿದ್ದರೂ ಗೆಲ್ಲುವ ಕ್ಯಾಂಡಿಡೇಟುಗಳೇನಲ್ಲ[…]

## ಕಾಂಗ್ರೆಸ್ ಗ್ಯಾರಂಟಿ

ಮೀಸಲು ಕ್ಷೇತ್ರ ಮಳವಳ್ಳಿ ಈ ಸಲ ಕಾ[…] ಪಾಲಾಗುವುದಂತೂ ಗ್ಯಾರಂಟಿ. ಕಳೆದ ಬಾರಿ ಜೆಡಿಎಸ್[…] ಆರಿಸಿ ಬಂದಿದ್ದ ಅನ್ನದಾನಿ ಸಾಕಷ್ಟು ಹೆಸರು ಕೆಡಿಸಿಕೆ[…] ಬುಡಕ್ಕೇ ನೀರು ತಂದುಕೊಂಡಿದ್ದಾರೆ. ಗೆದ್ದ ಕೂ[…] ಅಧಿಕಾರಿಗಳನ್ನು ಬಿಡದೆ ಕಾಡಿ, ಹುರಿದು ವ[…] ಅನ್ನದಾನಿ, ಮರಳು ಲಾರಿಗಳ ಕಾಸಿನಾಸೆಗೆ ಇದೀ[…] ಪರೇಡು ಮಾಡುತ್ತಲೇ ಕುಖ್ಯಾತಿ-ಅಪಖ್ಯಾತಿ[…] ಮಡಿಲಿಗೆ ಹಾಕಿಕೊಂಡವ. ಹಾಗಾಗಿ ತಿರುಗಿಬ[…] ಜನತೆಯಿಂದ ಅಧಿಕಾರದ ಅನ್ನ ಸಿಗೋದು ಅನ್ನ[…] ಬಹಳಾನೇ ಕಷ್ಟ. ಈ ನಡುವೆ ಕಾಂಗ್ರೆಸ್‌ನಿಂ[…] ಮೂರ್ತಿ-ನರೇಂದ್ರಸ್ವಾಮಿ ಟಿಕೆಟ್ ಗಿಟ್ಟಿಸುವ ಕಾ[…] ನಿಂತಿದ್ದಾರೆ. ಕೆ. ಮೂರ್ತಿ ಖರ್ಗೆ ಶಿಷ್ಯನಾದರೆ, ನ[…] ಸ್ವಾಮಿ ಡಿಕೇಶಿ ಆಪ್ತ, ಯಾರೇ ಕಣಕ್ಕಿಳಿದರೂ ಅ[…] ವಿರುದ್ಧದ ಅಲೆ ಕಾಂಗ್ರೆಸ್‌ಗೆ ವರದಾನ ಗ್ಯಾರಂಟಿ[…]

## ಸ್ಪೀಕರ್ ಔಟಾ?


ಕುರುಬರ ಮತಗಳೇ ನಿರ್ಣಾಯಕವಾಗಿರುವ ಕೆ[…] ಪೇಟೆಯಲ್ಲಿ ಜೆಡಿಎಸ್‌ನ ಮಾಜಿ ಸ್ಪೀಕರ್ ಕೃಷ್ಣರ […] ಪ್ರಬಲ ಅಲೆಯಿದೆ. ಪ್ರಮುಖ ಹುದ್ದೆಯಲ್ಲಿದ್ದರೂ ಕೆ[…] ಪೇಟೆ ಉದ್ಧಾರ ಮಾಡಲು ಉದಾಸೀನ ತೋ[…] ಪರಿಣಾಮ ಕೃಷ್ಣರಿಗೆ ಮುಳುಗುನೀರು ಕಟ್ಟಿಟ್ಟ[…] ಹಾಗಾಗಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೆ.ಬಿ. ಚಂದ್ರಶೆ[…] ಪರ ಪೂರಾ ಒಲವಿದ್ದಿದೆ. ಬಿಜೆಪಿಯ ಶ್ರೀನಿವಾಸ್ ಒ[…] ಮತ ಕಸಿದುಕೊಳ್ಳಬಹುದಾದರೂ, ಕೊನೆಗೆ ಜೆ[…] -ಕಾಂಗ್ರೆಸ್ ಕಾಳಗದಲ್ಲಿ ಜನತೆ 'ಕೈ' ಹಿಡಿಯು[…] ದಟ್ಟವಾಗಿದೆ.

## ರಕ್ತಸಿಕ್ತ ನಾಗಮಂಗಲ

ಇಡೀ ಜಿಲ್ಲೆಯಲ್ಲಿ ರಕ್ತಪಾತ, ಬೂತ್ ಕ್ಯಾಪ್[…] ಗಲಭೆಗಳು, ಮತದಾನದ ದಿನ ಪ್ರಕ್ಷುಬ್ಧ ವಾತಾ[…]

# ಪಾತಕ ಲೋಕದ ನಂಟೂ- ಪಾತಕಿಗಳ ದಂಡೂ

ವಿಹುಶಃ ಪಾತಕಿ ಜಡೇಜಾ ರವಿ ಹತನಾದಾಗದೇ ಹೋಗಿದ್ದರೆ, ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್‌ಗಾಗಿ ಬಡಿದಾಡುತ್ತಿದ್ದನೋ ಏನೋ ಆದಾಗದಂತೆ ಬಡಿದು ಬಾಯಿಗಿಟ್ಟುಕೊಂಡಿತ್ತು ಪಾತಕ ಲೋಕ. ಆದರೂ ಮಚ್ಚುಗಳು ಮಂಡ್ಯದಲ್ಲಿ ಮೆರೆಯುವಂತೆ ಮಾಡಿದ ಕುಖ್ಯಾತಿ ಪಾಖಂಡಿ ರಾಜಕಾರಣಿಗಳಿಗೆ ಸಲ್ಲಬೇಕು. ಕಾಂಗ್ರೆಸ್‌ನ ಆತ್ಮಾನಂದರೇ ಆಗಲಿ, ಜೆಡಿಎಸ್‌ನ ಎಂ.ಶ್ರೀನಿವಾಸ್ ಇರಲಿ, ಬಿಜೆಪಿಯ ಬೋಹ್ರಾನೇ ಆಗಲಿ ಎಲ್ಲರೂ ರಕ್ತ ಪಿಪಾಸುಗಳ ನಂಟನ್ನು ಹೊಂದಿದವರೇ. ಮೊದಲಿನಿಂದಲೂ ಮಾಜಿ ಸಚಿವ ಆತ್ಮಾನಂದ ತನ್ನ ರಾಜಕೀಯ ಹಿತಾಸಕ್ತಿಗೆ ಪುರಾತನ ಹಂಟರ್ ಎಸ್ಸೆ ರಾಮಣ್ಣನಿಂದಿಡಿದು ಮಾಜಿ ಕೌನ್ಸಿಲರ್ ಕಮ್ ರೌಡಿ ಕಿಟ್ಟಿ ಅಲಿಯಾಸ್ ಮಹದೇವ, ಜಡೇಜಾ ರವಿ ಮತ್ತವನ ಹುಡುಗರ ಹಕೀಕತ್ತನ್ನು ಬಳಸಿಕೊಂಡೇ ಬಂದವರು. ಇದೀಗ ಬಲಗೈ ಭಂಟನಂತಿದ್ದ ರವಿ ಹತನಾಗಿದ್ದಾನೆ. ಇನ್ನವನ ಅನಾಮತ್ತು ಎಪ್ಪತ್ತು ಜನರ ದಂಡು ಸಕ್ರಿಯವಾಗಿಯೇ ಇದೆ. ಈ ಮಧ್ಯೆ ಕಾಂಗ್ರೆಸ್‌ನಿಂದ ಆತ್ಮಾನಂದನಿಗೆ ಟಿಕೆಟ್ ಸಿಗೋದು ಅನುಮಾನ, ಹಾಗಾಗಿ ಅಬಕಾರಿ ನಾಗಣ್ಣನ ಹೆಂಡತಿ ವಿದ್ಯಾ ನಾಗೇಂದ್ರರಿಗೋ, ಇಲ್ಲವೇ ರವಿ ಹೆಂಡತಿ ಪೂರ್ಣಿಮಳಿಗೋ ಸಿಂಪತಿಯ ಮೇಲೆ ಟಿಕೆಟ್ ದಕ್ಕುವ ಚಾನ್ಸ್ ಇದೆಯೆಂಬ ಊಹಾಪೋಹದ ಜೊತೆಗೆ ಸ್ವತಂತ್ರ ಅಭ್ಯರ್ಥಿಯಾಗಿಯೇ ಪೂರ್ಣಿಮಾ ಕಣಕ್ಕಿಳಿಯುತ್ತಾಳೆ ಎಂಬ ಮಾತು ಅಲ್ಲಲ್ಲಿ ದಟ್ಟವಾಗಿತ್ತು, ಹಾಗೇನಾದರೂ ಆದಲ್ಲಿ ಮತ್ತದೇ ರಕ್ತಸಿಕ್ತ ರವಿಯ ರಾಕ್ಷಸ ಪಡೆ ಬೀದಿಗಿಳಿಯಬಹುದೇನೋ. ಇಂತಹ ಸನ್ನಿವೇಶ ತೀರಾ ಕಡಿಮೆಯಾದರೂ, ಇವತ್ತಿಗೂ ಮಂಡ್ಯ ಭೂಗತಜೀವಿಗಳಿಗೆ ಪುಂಗಿಯೂ ದುತ್ತಲಿ, ಮಚ್ಚಿನ ಲೋಕವನ್ನು ಹೆಮ್ಮರವಾಗಿ ಬೆಳೆಸಿದ ಗುಳ್ಳೇನರಿ ಬುದ್ಧಿಯ ಲಿಕ್ಕರ್ ರಂಗಸ್ವಾಮಿ ಎಮ್ಮೆಲ್ಲೆ ಕನಸು ಕಾಣುತ್ತಾ ಮಂಡಕ್ಕಿ



ತಿನ್ನುತ್ತಿದ್ದಾನೆ. ನಿನ್ನೆ ಮೊನ್ನೆಯವರೆಗೂ ಆತ್ಮಾನಂದರ ಪಂಚೆಯ ಚುಂಗಿಡಿದು, ಕಾಂಗ್ರೆಸ್‌ನಲ್ಲಿ ಅಡ್ಡಾಡುತ್ತಿದ್ದವನು ಇದೀಗ ಬಿ.ಎಸ್.ಪಿ ಸೇರಿಕೊಂಡು ಮದ್ದಾನೆಯಂತೆ ಕಣಕ್ಕಿಳಿಯುವ ಹಪಾ-ಹಪಿಯಲ್ಲಿದ್ದಾನೆ. ಸೆಕೆಂಡ್ಸ್-ಥರ್ಡ್ಸ್‌ಅನ್ನು ಕಾವೇರಿ ನದಿಗಿಂತಲೂ ಯಥೇಚ್ಛವಾಗಿಯೇ ಹರಿಸಿ ದುಂಡಗಾದ ರಂಗಸ್ವಾಮಿ ತನ್ನ ಖದೀಮತನದ ಹಣದ ಥೈಲಿಯಿಡಿದು ಖಾದಿದಾರಿಯಾಗಿ ಕಣಾಂಗಣಕ್ಕಿಳಿಯಲಿದ್ದಾನೆ. ಹಾಗೇನಾದರೂ ಆದಲ್ಲಿ ಮತ್ತದೇ ರೌಡಿ ಪಡೆ ಬೀದಿಗಿಳಿಯಲಿದೆ. ಅನಾದಿಕಾಲದಿಂದಲೂ ಜಡೇಜಾ, ಚೀರನಹಳ್ಳಿ, ಶಂಕರ, ಅಶೋಕ ಪೈ, ಬುಂಯ್ಯ ಸ್ವಾಮಿ ಮುಂತಾದ ರೌಡಿ ಪಡೆಯನ್ನು ತನ್ನ ಬಿಸಿನೆಸ್‌ಗೆ ಕಾವಲುಗಾರರಂತೆ ಇಟ್ಟುಕೊಂಡಿದ್ದ ರಂಗಸ್ವಾಮಿ ಅವರ ಮಧ್ಯೆಯೇ ನವರಂಗಿ ಆಟ[…] ಅವರವರೇ ಬಡಿದಾಡಿಕೊಂಡು ಮಂಡ್ಯದ ನೆಲ […] ತಾಕುವಂತೆ ಮಾಡಿದ ಕುಖ್ಯಾತಿ ಈತನದು. ಅಂ[…] ಅಂವ ಎಮ್ಮೆಲ್ಲೆಯಾಗ ಹೊರಟರೆ ರೌಡಿಪಡೆ […] ಬೇಕು ಅಸಲಿಗೆ ಜಡೇಜಾ ರವಿಯ ಬಲಗೈ […] ಬಂಗಾರಪ್ಪನನ್ನು ಲೀಡ್ ಮಾಡುತ್ತಿರುವುದು […] ಬಡ್ಡಿರಂಗ. ತನ್ನ ಹರಾಮಿ ಬಿಸಿನೆಸ್ ದ[…] ಎದುರಾಳಿಯಾಗಿದ್ದ ಅಬಕಾರಿ ನಾಗಣ್ಣ ಬಲಿಯ[…] ಈತನೇ ಮಾಡಿದ ಚಿತಾವಣೆಯಿಂದ ಹಾಗೂ […] ಪುಂಗಿಯಿಂದ. ಯಾಕೆಂದರೆ ನಾಗಣ್ಣ ಬದುಕಿದ್ದರೆ […] ಆತನೇ ಕಾಂಗ್ರೆಸ್‌ನ ಅಧಿಕೃತ ಕ್ಯಾಂಡಿಡೇಟಾಗಿ[…] ಗೆಲ್ಲುವುದಂತೂ ಪಕ್ಕ ಗ್ಯಾರಂಟಿಯಿತ್ತು, ಮೊ[…] ಬಿಸಿನೆಸ್‌ನಲ್ಲಿ ತುಳಿಯಹೊರಟಿದ್ದ ನಾಗಣ್ಣ […] ಶಾಸಕನಾಗಿಬಿಟ್ಟರೆ ಸುಮ್ಮನಿದ್ದಾನೆಯೇ ಎನ್ನುವ ರ[…] ರಂಗನದ್ದಾಗಿತ್ತು, ಇಂತಹ ಪಂಚರಂಗಿ ರಂಗ […] ಹಾರಾಟಕ್ಕಿಳಿದರೆ ರೌಡಿ ಸಿಂಡಿಕೇಟ್ ಸದಸ್ಯರಾದ ಬ[…] ತಂಡ, ....ಪದ್ಮ ತೊಡ್ಲಶಿವ ಹೀಗೆ ಅನೇಕ ಪಾಖಂ[…]

# ಅಂಬಿ ನಿಲ್ಲೋದು ಎಲ್ಲಿ?

[illegible] … ರಿವರ್ಣದಲ್ಲಿ ಮರೆಯುವ ತವಕ ಶುರುವಾಗಿರುವುದರಿಂದ, ಮಂಡ್ಯ … ಅವರದು. ಈ ಹಿಂದ ಬಿಜೆಪಿಗೆ ಹೋಗುತ್ತಾರೆನ್ನುವ ಹಾವ್ರ … ಕರುಳಿದ ಅಂಬಿ ಗೇಮು ಶುರುವಿಟ್ಟಿದ್ದಾರೆ. ಮೊದಲೆಲ್ಲಾ … ಸೂಂವಿಷ್ಟ ಅಂಬರೀಷ್‌ಗೆ ಅದ್ಯಾರು ಪುಂಗಿ ಊದಿದರೋ, ಅಲ್ಲಿ … [illegible] … ಮದ್ದೂರು ಕೊನೆಗೆ … ಗೊಂದಲವಾಗಿದೆ. ಅದರೂ ಅವರು ಎಲ್ಲೇ … ಪಟ್ಟವಾಗಿದ್ದರೂ, ಅಂಬಿಯ … [illegible]!



…ಯಾಗುವ ನಾಗಮಂಗಲ ಸಮರಕ್ಕೆ ಸಿದ್ಧವಾಗಿದೆ. …ಿ ಸಚಿವ ಚಲುವರಾಯಸ್ವಾಮಿಯ ಪ್ರತಿಷ್ಠೆ …ಯಾಗಿರುವ ಹಿನ್ನೆಲೆಯಲ್ಲಿ ಮತ್ತೆ ಗೆಲ್ಲುವ …ವಲ್ಲಿರುವುದರಿಂದ, ತಾನು ಅಧಿಕಾರದಲ್ಲಿ ಕೊಳ್ಳೆ …ದೆದ ಹಣವನ್ನು ಕೈಲಿಡಿದು ನಿಂತಿದ್ದರೆ, ಕಾಂಗ್ರೆಸ್‌ನಲ್ಲಿ …್‌ಗಾಗಿ ಶಿವರಾಮೇಗೌಡ ಹಾಗೂ ಸುರೇಶ್‌ಗೌಡರ …ನೆ ಐರಾವಣ-ಮಹಿರಾವಣ ಕಾಳಗವೇರ್ಪಟ್ಟಿದೆ. …ಬ್ಬರೂ ಒಂದಾಗದಿದ್ದರೆ ಚಲುವರಾಯಿಯೇ …ಯದ ಪತಾಕೆ ಹಾರಿಸುವ ಛಾನ್ಸ್ ಇದೆ. ಹಾಗಾಗಿಯೇ … ನಡುವೆ ಎಸ್.ಎಂ. ಕೃಷ್ಣ ರಾಜಿ ಕಬೂಲಿ ಆರಂಭಿಸಿ …ಮೇಗೌಡರಿಗೆ ಹೊಸದಾಗಿ ರೂಪು ತಳೆದಿರುವ …ೂರಿನ ಪದ್ಮನಾಭನಗರದಲ್ಲಿ ನಿಲ್ಲಿಸುವ ತಂತ್ರದಲ್ಲಿದ್ದಾರೆ, …ಶ್ ಗೌಡರಿಗೆ ನಾಗಮಂಗಲ ದಕ್ಕಿಸುವ ನಿಟ್ಟಿನಲ್ಲಿ. 'ಬಲ್‌ಕುಲ್ ನಾವಲ್ಲೆ' ಅಂತ ಹಟಕ್ಕೆ ಬಿದ್ದಿರುವ …ಮೇಗೌಡ ಟಿಕೆಟ್ ಸಿಗದಿದ್ದರೆ, ಇಂಡಿಪೆಂಡೆಂಟಾಗಿ …ನ ಹಾದಿಯಲ್ಲಿದ್ದರೆ, ಸುರೇಶ್‌ಗೌಡ ಬಿಜೆಪಿ ಪಾಳಯಕ್ಕೆ …ಯುವ ತರಾತುರಿಯಲ್ಲಿದ್ದಾರೆ. ಹಾಗಾದಲ್ಲಿ …ಾಂಗಲ್ ಕಾಳಗವೇರ್ಪಟ್ಟು ಮೇಜರ್ ಕುರುಬ …ದಾರರಿರುವ ನಾಗಮಂಗಲದಲ್ಲಿ ಕಾಂಗ್ರೆಸ್ ಆಂತರಿಕ …ಟದಲ್ಲಿ, ಹಣದ ಸುರಿಮಳೆಯ ಜೊತೆಗೆ …ತವಾದರೂ ಅಚ್ಚರಿಯೇನಲ್ಲ.

…ೋಲಿನ ಸುಳಿಯಲ್ಲಿ ಸಿಲುಕಿರುವ ಜೆಡಿಎಸ್, ಅತಂತ್ರ …ಲ್ಲಿ ಮುಳುಗಿರುವ ಬಿಜೆಪಿ ನಡುವೆ ಟಿಕೆಟ್‌ಗಾಗಿ …ದ್ದುಗಳಂತೆ ಹಾಕ್ಯಾಟಕ್ಕಿಳಿದಿರುವ ಕಾಂಗ್ರೆಸ್. ಇದು …ಗಪಟ್ಟಣ ಕ್ಷೇತ್ರದ ಸ್ಥಿತಿ. ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ …ೀ ಅವರ ಮಗ ರಮೇಶ್‌ಬಾಬು ಎಂಬಂತಾಗಿರುವ …ಸ್‌ನಲ್ಲಿ ಶುಗರ್ ಫ್ಯಾಕ್ಟರಿಯ ಮಾಜಿ ಅಧ್ಯಕ್ಷ …ಮಾಂಜಯ್ಯ ಎ.ಟಿ. ನಾರಾಯಣಗೌಡ, ಧನಂಜಯ …ಮಿ, ಬಾಲಕೃಷ್ಣೇಗೌಡರ ಪತ್ನಿ ಕವಿತಾರ ತಮ್ಮ …ಬಾಬು ಮುಂತಾದ ಸೀನಿಯರ್ ಮುಖಂಡರುಗಳೇ …ಶ್ ಬಾಬು ವಿರುದ್ಧ ತಿರುಗಿಬಿದ್ದಿದ್ದಾರೆ. ಸೀರೆ ಸೆರಗು …ಲ್ಲಿ ಕಾರು ನಿಲ್ಲಿಸುವ ಶಾಸಕರ ಪುತ್ರ ಅಂತಲೇ …ಖ್ಯಾತಿಗೊಂಡಿರುವ ಬಾಬು ಬಗ್ಗೆ ಅಸಮಾಧಾನ …ದ್ದು ಬಂಡಾಯ ಬಣ ಸೃಷ್ಟಿಯಾಗಿದೆ. ರಾಜ್ಯ …ತ್ ಪ್ರಧಾನ ಕಾರ್ಯದರ್ಶಿ ಪಿ. ನಂದಕುಮಾರ್‌ಗೆ … ನೀಡಬೇಕೆಂದು ದೇವೇಗೌಡರಿಗೆ ದುಂಬಾಲು …ವ ಬಣ, ಇಲ್ಲವೇ ಮಾಜಿ ಡಿಎಸ್‌ಪಿ ಬಿ.ಪಿ. …ಶ್‌ಗಾದರೂ ಕೊಡಿ ಅನ್ನುತ್ತಿದೆ. ಈಗಾಗಲೇ …ಲಕ್ಷ್ಮಿ ಬಂಡಿಸಿದ್ದೇಗೌಡರ ಕುಟುಂಬಕ್ಕೆ ಟಿಕೆಟ್ … ಅಂತಾಗಿರುವುದರಿಂದ ದಳದಲ್ಲಿನ ಆಂತರಿಕ ಕ್ಷೋಭೆ …ಿದೆ.

…ಲಿರುವುದು ಕಟುಸತ್ಯ

…ನ್ನು ಅಂಬರೀಷ್‌ಗೇನಾದರೂ ಕಾಂಗ್ರೆ ಟಿಕೆಟ್ …ೂ ಮಾಜಿ ಶಾಸಕ ಹೆಚ್.ಬಿ.ರಾಮು ಕೃಪಾಪೋಷಿತ …ಯ ರಪಿಯ ರೌಡಿ ಪಡೆ ಆ ಕಡೆ ವಾಲುವುದಂತೂ …ಡಿಎಸ್‌ನಿಂದ ಮತ್ತೆ ಅಖಾಡಕ್ಕಿಳಿಯಲಿರುವ ಮಾಜಿ …ಎಂ.ಶ್ರೀನಿವಾಸ್ ಪಾಳಯದಲ್ಲಂತೂ ಜಡೇಜಾನನ್ನು … ಬಾಯಿಗಾಕಿಕೊಂಡ ಸದ್ಯದ ಡಾನ್ ಅಶೋಕ್ …ಿಂಬಲಿಸಿದೆ. ಮೊದಲಿಂದಲೂ ಶ್ರೀನಿವಾಸರ …ದ್ದವನು ಹೈ, ಇದರ ಜೊತೆ ಬಿಜೆಪಿಯ ಅಬ್ಬಾಸ್ …ಬೋಹ್ರಾ, ವಿಷೂ ಕಡಿಮೆಯಲ್ಲ, ಒಂದಿಷ್ಟು …ರೌಡಿಗಳೂ ಫೀಲ್ಡಿಗಿಳಿಯಲಿದ್ದಾರೆ.

…ಟ್ಟಾರೆ ಯಾವ ಪಕ್ಷದಿಂದ ಯಾರೇ ಸೆಣಸಿದರೂ … ಪಾತಕ ಲೋಕದ ನಂಟು ಪಾತಕಿಗಳ ದಂಡೂ …ಸುವುದಂತೂ ಭೈರವಪಾಣಿಯಾಗಿಯೂ ದಿಟವೋ …ಷ್ಟೇ ಅಗಲಿ ರೌಡಿಗಳ ಅಪ್ಪ-ಅಮ್ಮ ಇದೇ …ನೆಗಳಲ್ಲಿಪ್ಪೇ!

ಕಾಂಗ್ರೆಸ್‌ನಲ್ಲೂ ಅಷ್ಟೇ ತಗಾದೇ ಶುರುವಾಗಿದೆ. ಕ್ಷೇತ್ರದಲ್ಲಿನ 27 ಸಾವಿರ ಮತಗಳು ಕುಟಂಬದಲ್ಲೇ ಇರುವುದರಿಂದ ಪಾರ್ವತಮ್ಮ ಶ್ರೀಕಂಠಯ್ಯ ಇಲ್ಲವೇ ಅವರ ಮಗ ರವೀಂದ್ರ ಶ್ರೀಕಂಠಯ್ಯ ಟಿಕೆಟ್ ಗಳಿಸುವ ನಿಟ್ಟಿನಲ್ಲಿದ್ದಾರೆ. ಅಂಬರೀಷ್ ಬಲಗೈ ಭಂಟರಾದ ಪಿ.ಎಚ್. ಚಂದ್ರಶೇಖರ್ ಹಾಗೂ ಲಾಯರ್ ಪುಟ್ಟೇಗೌಡ, ಸಿದ್ಧರಾಮಯ್ಯನವರ ಅನುಯಾಯಿ ಭಾಸ್ಕರ್ ಅಲಿಯಾಸ್ ಅಂಬರೀಷ್ ಗೌಡ ಆದಿಯಾಗಿ ಟಿಕೆಟ್ ಕಾತರಿಕೆಯಲ್ಲಿ ಜಪಾಜಪಿಸುತ್ತಿದ್ದಾರೆ. ಇಲ್ಲೂ ನಾಲ್ಕು ಬಣಗಳಾಗಿವೆ. ಒಟ್ಟಾರೆ ಟಿಕೆಟ್ ಯಾರಿಗೇ ದಕ್ಕಿದರೂ ಜೆಡಿಎಸ್-ಕಾಂಗ್ರೆಸ್ ಕಾದಾಡಲಿವೆ. ರೈತ ಸಂಘದ ನಂಜುಂಡೇಗೌಡರಿಗೆ ಇಬ್ಬರ ಕಾದಾಟ ವರದಾನವಾದರೂ ಅಚ್ಚರಿಯೇನಿಲ್ಲ. ಬಿಜೆಪಿಯಲ್ಲಿ ಜೆ.ಟಿ. ದೇವೇಗೌಡರ ಅನುಯಾಯಿ ಸಂತೋಷ್, ಮಾಜಿ ಜಿಲ್ಲಾ ಬಿಜೆಪಿ ಅಧ್ಯಕ್ಷ ಕೆ. ಬಲರಾಮ್ ಅಲ್ಲದೇ ಟಿಕೆಟ್ ಕೊಟ್ಟರೆ ಐದು ಕೋಟಿ ಇನಾಮು ಪಕ್ಷದ ಫಂಡಿಗೆ ಕೊಡಲು ತುದಿಗಾಲಲ್ಲಿ ನಿಂತಿರುವ ಅನಂತ್‌ಕುಮಾರ್ ಬಲಗೈ ಬಂಟ ಶ್ರೀನಿವಾಸ್ ನೂಕುನುಗ್ಗಲಿನಲ್ಲಿದ್ದರೂ ಬಿಜೆಪಿಯ ಗೆಲ್ಲುವ ಆಸೆ ಕೊನರುವುದು ಕಷ್ಟವೇ.

ಪಾಂಡವಪುರ ಮಂಗಮಾಯವಾಗಿ ಜನ್ಮವೆತ್ತಿರುವ ಮೇಲುಕೋಟೆಯಲ್ಲಿ ಜೆಡಿಎಸ್‌ನ ಪುಟ್ಟರಾಜು ಗೆಲ್ಲೋದು ಖಾತ್ರಿ. ಕೆರಗೋಡು ಕ್ಷೇತ್ರ ಹರಿದು ದುದ್ದಹೋಬಳಿ ಮೇಲುಕೋಟೆಗೆ ವಕ್ಕರಿಸಿದರೂ ಈಗಾಗಲೇ ಅಲ್ಲೆಲ್ಲಾ ಮದ್ದಾನೆಯಂತೆ ಓಡಾಡಿ ತನ್ನತ್ತ ಸೆಳೆದುಕೊಂಡಿರುವ ಪುಟ್ಟರಾಜು ಈ ಸಲವೂ ಗೆಲ್ಲುವ ಕ್ಯಾಂಡಿಡೇಟು. ಕಾಂಗ್ರೆಸ್‌ನಿಂದ ಅಂಬರೀಷ್ ಶಿಷ್ಯ ಎಲ್.ಡಿ. ರವಿ, ಹಿಂದೆ ಮೂರು ಸಲ ಗೆದ್ದಿದ್ದ ಮಾಜಿ ಶಾಸಕ ಕೆಂಪೇಗೌಡ, ಎಂಡಿಸಿಸಿಯ ಹೊನ್ನೇಗೌಡ ಹೀಗೆ ಸಾಲುಸಾಲು ಮುಖಂಡರು ಆಕಾಂಕ್ಷಿಗಳಾಗಿದ್ದರೂ, ಕಾಂಗ್ರೆಸ್‌ಗೆ ಗಿರಕಿ ಹೊಡೆಯುವುದು ಖಚಿತ. ಬಿಜೆಪಿಯಿಂದ ವಕೀಲ ಅನಂತ್‌ಕುಮಾರ್, ಕಳೆದ ಸಲ ಸೋತು ಸುಣ್ಣವಾಗಿದ್ದ ಜೈದೇವ್, ಎಲ್.ಡಿ. ಕೃಷ್ಣಪ್ಪ, ಬಲರಾಮ್ ಮಂಜುನಾಥ್ ಕ್ಯೂನಲ್ಲಿದ್ದರೂ ಯಾರೆ ನಿಂತರೂ ಠುಸ್ಸೇ.

ರೈತ ಸಂಘದಿಂದ ಕಣಕ್ಕಿಳಿಯುವ ಪುಟ್ಟಣ್ಣಯ್ಯನವರಲ್ಲಿ ಮೊದಲಿನ ಖದರ್ರಾಗಲೀ, ಪವರ್ರಾಗಲೀ ಗೋಚರಿಸುತ್ತಿಲ್ಲವಾದರೂ ಬಿಎಸ್‌ಪಿ ಬೆಂಬಲವೇನಾದರೂ ದಕ್ಕಿದರೆ, ನೇರಾ ಹಣಾಹಣಿ ಪುಟ್ಟಣ್ಣಯ್ಯ-ಪುಟ್ಟರಾಜು ನಡುವೆ ಆಗಲಿರುವುದು ಸ್ಪಷ್ಟ. ಒಟ್ಟಾರೆ ಮಂಡ್ಯಾ ಜಿಲ್ಲೆಯಲ್ಲಿ ಚುನಾವಣಾ ರಣಾಂಗಣ ಧಗಧಗಿಸಲಿದೆ. ಜಿಲ್ಲೆಯಲ್ಲಿ ಹದಿಮೂರರಿಂದ-ಹದಿನಾಲ್ಕು ಲಕ್ಷ ಮತದಾರರಿದ್ದು, 40% ಒಕ್ಕಲಿಗ ಮತಗಳಿವೆ. 80 ಸಾವಿರದಷ್ಟು ಮುಸ್ಲಿಂ, 60 ಸಾವಿರದಷ್ಟು ಲಿಂಗಾಯತ ಸಮುದಾಯ, ಹನ್ನೊಂದು ಪರ್ಸೆಂಟ್ ಪರಿಶಿಷ್ಟ ಮತಗಳು, ಇನ್ನುಳಿದವು ಹಿಂದುಳಿದ ವರ್ಗದ ಓಟುಗಳಾಗಿವೆ.

ಮುಸ್ಲಿಂ ಮತಗಳು ಕಾಂಗ್ರೆಸ್-ಜೆಡಿಎಸ್ ನಡುವೆ ಹಂಚಿ ಹೋದರೆ, ಕುರುಬರು ಕಾಂಗ್ರೆಸ್ ಕಡೆ, ಬಹುತೇಕ ಒಕ್ಕಲಿಗರು ಜೆಡಿಎಸ್ ಪರವಾಗಿ ನಿಲ್ಲುವ ಸಾಧ್ಯತೆಗಳೇ ಹೆಚ್ಚು, ಯಡಿಯೂರಪ್ಪ ಘಟನೆಯಿಂದಾಗಿ ಲಿಂಗಾಯತ ಸಮುದಾಯ ಬಿಜೆಪಿ ಕಡೆ ವಾಲಬಹುದಾದರೂ ಬಿಜೆಪಿ ಅಲೆ ಕಷ್ಟವೇ. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಆಗಮನದಿಂದಾಗಿ ಕಾಂಗ್ರೆಸ್ ಮುಖಂಡರುಗಳು ಗ್ಯಾಂಗ್ ಅಪ್ ಆಗಬಹುದು. ಆದರೂ ದೊಡ್ಡಮಟ್ಟದ ಗೆಲುವು ಕಷ್ಟ. ಮಹಿಳೆಯರು ಹಾಗೂ ಯುವಕರು ಕುಮಾರಸ್ವಾಮಿ ಪರ ಒಲವು ಹೊಂದಿರುವುದು ಜೆಡಿಎಸ್‌ಗೆ ವರದಾನವಾಗಲಿದೆ. ಮತ್ತೆ ನಾಲ್ಕು ಸೀಟು ಗ್ಯಾರಂಟಿಯಾಗಲಿದೆ. ಒಟ್ಟಾರೆ ಮಂಡ್ಯ ಚುನಾವಣಾ ಅಗ್ನಿಕುಂಡ ಪ್ರತಿಷ್ಠೆಯ ಉಳಿವಿಗಾಗಿ, ಕಾದಾಟ-ರಾದ್ಧಾಂತದ ಜೊತೆಗೆ ಸಾಕಷ್ಟು ಹಣದ ಹೊಳೆಯೇ ಹರಿಯಲಿರುವುದು ಸ್ಪಷ್ಟ. ■

# ಎಲೆಕ್ಷನ್ ಟಿಕೆಟ್: ಲಕ್ಕಿ ಡ್ರಾನಲ್ಲಿ ಯಾರ್ಯಾರಿಗಿದೆ?

ಎಲೆಕ್ಷನ್‌ಗೆ ಸೆಲೆಕ್ಷನ್ ಆಗಲು ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಪುಢಾರಿಗಳೆಲ್ಲ ತೋಳು ಮಡಚುತ್ತಿದ್ದಾರೆ. ದಿನಾಂಕ ನಿಗದಿಯಾದ ಎರಡನೇ ದಿನಕ್ಕೆ 108 ಡಿಗ್ರಿಗೆ ಏರಿರುವ ಎಲೆಕ್ಷನ್ ಜ್ವರ, ಪುಢಾರಿಗಳಿಗೂ, ಅವರ ಹಿಂಬಾಲಕರಿಗೂ ಸುಡುತ್ತಿದೆ. ಹಿರಿ ಪುಢಾರಿಗಳ ಜೊತೆ 3 ಜಿ.ಪಂ. ಸದಸ್ಯರು ಕೂಡಾ ಕಣಕ್ಕಿಳಿಯಲು ರೆಡಿಯಾಗಿದ್ದಾರೆ.

ಕೊಪ್ಪಳ ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಕನಕಗಿರಿ ಮೀಸಲು ಕ್ಷೇತ್ರ. ಕಾಲಿದ್ದರೆ ಹಂಪಿ ಸುತ್ತು, ಕಣ್ಣಿದ್ದರೆ ಕನಕಗಿರಿ ನೋಡು ಎಂಬ ಗಾದೆಗೆ ಈಗ ದಮ್ಮಿದ್ದರೆ ಕನಕಗಿರಿಯಲ್ಲಿ ಸ್ಪರ್ಧಿಸು' ಎಂಬ ನಾಣ್ನುಡಿ ಸೇರಿದೆ. ಕಾರಣ ಮಾಜಿ ಸಚಿವರಾದ ನಾಗಪ್ಪ ಸಾಲೋಣಿ ಮತ್ತು ಮಲ್ಲಿಕಾರ್ಜುನ ನಾಗಪ್ಪ ಕಳೆದ ಬಾರಿ ನೀರಿಗಿಂತ ಕಡೆಯಾಗಿ ಹಣ ಚೆಲ್ಲಿದ್ದು.


ಕನಕಗಿರಿ ಕ್ಷೇತ್ರಕ್ಕೆ ಕಾಂಗ್ರೆಸ್‌ನಿಂದ ಜಿಪಂ ಮಾಜಿ ಅಧ್ಯಕ್ಷರಾದ ಮುಕುಂದರಾವ್ ಭವಾನಿಮಠ, ರಾಮಣ್ಣ ಭಜಂತ್ರಿ ಮತ್ತು ನಿವೃತ್ತ ಕೆಎಎಸ್ ಅಧಿಕಾರಿ ಮಲ್ಲಿನಾಥ ಆಕಾಂಕ್ಷಿಗಳು. ಅಲ್ಲದೇ ಹಾಲಿ ಜಿಪಂ ಸದಸ್ಯ ಪ್ರಕಾಶ ರಾಥೋಡ ಮತ್ತು ಎಡಬಿಡಂಗಿ ವೆಂಕಟೇಶ ಹಾಲವರ್ತಿ ಕೂಡ ಪ್ರಯತ್ನದಲ್ಲಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಗದಿದ್ದರೆ ಜೆಡಿಎಸ್ ಸೇರಿ ಕಣಕ್ಕಿಳಿಯುವ ರಹಸ್ಯ ತಯಾರಿಯಲ್ಲಿ ರಾಮಣ್ಣ ಭಜಂತ್ರಿ ಇದ್ದಾರೆ.

ಕನಕಗಿರಿಯಿಂದ ಗೆದ್ದು, ಮಂತ್ರಿಯಾಗಿ ಮೆರೆದಾಡಿ, ಕೊನೆಗೆ ಸೋತು ಮನೆಯಲ್ಲಿ ಕುಳಿತಿರುವ ಸಾಲೋಣಿ ನಾಗಪ್ಪ ಮತ್ತು ಮಲ್ಲಿಕಾರ್ಜುನ ನಾಗಪ್ಪ ಎಂಬಿಬ್ಬರೂ ಈಗ ಗಂಗಾವತಿಯತ್ತ ತಲೆಹಾಕಿ ಮಲಗುತ್ತಿದ್ದಾರೆ. ಇವರಿಬ್ಬರಿಗೆ ಪ್ರಬಲ ಸ್ಪರ್ಧೆ ನೀಡುತ್ತಿರುವುದು ಸಣ್ಣ ಸೂಗಪ್ಪ ಮತ್ತು ಜಿ.ಪಂ. ಸದಸ್ಯ ಅಮರೇಶ ಹೊಸಮನಿ. ಲಿಂಗಾಯತ ವರ್ಗದ ಅಮರೇಶ್‌ಗೆ ಜಾತಿ ಪ್ಲಸ್‌ಪಾಯಿಂಟ್ …

…ಯುವಕ ಕಳೆದ ಬಾರಿ ಪಕ್ಷೇತರನಾಗಿ ಸ್ಪರ್ಧಿಸಿದ್ದ ಆತನೀಗ ದಳದ ಯೂತ್ ಕೋಟಾದ ಆಕಾಂಕ್ಷಿ. ಆದರೆ ಬರೀ ಸ್ವಾರ್ಥ ರಾಜಕಾರಣ ಮಾಡುವ ಸಂಗಣ್ಣ ಕರಡಿ ಇಕ್ಬಾಲ್ ಅನ್ಸಾರಿಯನ್ನು ಕೊಪ್ಪಳಕ್ಕೆ ಕಳಿಸಿ "ಅಲ್ಲಿ ಮುಸ್ಲಿಮರು ಬಹಳ ಇದ್ದಾರೆ. ನಾನು ಗಂಗಾವತಿಗೆ ಹೋಗ್ತೀನಿ. ಅಲ್ಲಿ ಅನ್ಸಾರಿಯ ಅಭಿವೃದ್ಧಿ ಕೆಲಸಗಳ ಆಧಾರದಲ್ಲಿ ನಾನು ಗೆಲ್ಲುತ್ತೇನೆ" ಅಂತಿದ್ದಾನೆಯೇ ಹೊರತು ಜಿಲ್ಲೆಯಲ್ಲಿ ಜೆಡಿಎಸ್ ಗೆಲಿಸುವ ಯಾವ ಯೋಚನೆಯೂ ಈ ಜಿಲ್ಲಾಧ್ಯಕ್ಷ ಮಾಡುತ್ತಿಲ್ಲ.

ಭಯಂಕರ ಪಾಲಿಟಿಕ್ಸ್ ಮಾಡುವ ವಿಷಯದಲ್ಲಿ ದೇವೇಗೌಡರನ್ನೇ ಸರಿಗಟ್ಟುವ ಸಂಗಣ್ಣ ಅತ್ತ ಕಾಂಗ್ರೆಸ್‌ನೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಗಂಗಾವತಿಗೆ ಕಾಂಗ್ರೆಸ್ ಅಭ್ಯರ್ಥಿಯಾದರೆ ಲಿಂಗಾಯತ ಮತ ಮತ್ತು ಸಿದ್ದರಾಮಯ್ಯನ ಫೋಟೋ ಹಿಡ್ಕೊಂಡು ಗೆಲ್ಲುವ ಪ್ಲಾನ್ ಹಾಕಿದ್ದಾನೆ. ಇದೆಲ್ಲ ಗೊತ್ತಾಗಿಯೇ ಕೊಪ್ಪಳದಲ್ಲಿ ನಿಗದಿಯಾಗಿದ್ದ ಚೈತ್ರ ಯಾತ್ರೆ ರದ್ದಾಗಿ ಹೋಗಿದೆ. ಕರಡಿ ಜೆಡಿಎಸ್ ತೊರೆದರೆ ದಳದ ನಿಷ್ಠಾವಂತ ಎಂ.ವಿ. ಪಾಟೀಲ್‌ರಿಗಾದರೂ ಅವಕಾಶ ಸಿಗುತ್ತೆ.


ಇನ್ನು ಬಿಜೆಪಿಯಿಂದ ಬಳ್ಳಾರಿಯ ಶ್ರೀರಾಮಲು ಬಂಟ ಸಂಜಯ್ ಎಂಬ ಕೌನ್ಸಿಲರ್ ಕೊಪ್ಪಳಕ್ಕೆ ಸ್ಪರ್ಧಿಸಲು ಅರ್ಜಿ ಹಾಕಿಹೋಗಿದ್ದಾನೆ. ಆತ ಅತ್ತ ಹೋದದ್ದೇ ತಡ ಸ್ಥಳೀಯರಿಗೆ ಟಿಕೆಟ್ ಕೊಡಿ ಅಂತ ಚಡ್ಡಿಗಳ ಒಂದು ಗುಂಪು ಕ್ಯಾತೆ ತೆಗೆದಿದೆ. ಸಂಗಪ್ಪನ ಮಗನಾದ ಅಂದಣ್ಣ ಅಗಡಿ, ಕಳಕಪ್ಪ ಜಾಧವ, ಪರೇರಪ್ಪ ಆರೋರ್, ವಿರೂಪಾಕ್ಷಪ್ಪ ಅಗಡಿ, ಪೀರಾಹುಸೇನ್ ಹೊಸಹಳ್ಳಿ ಸೇರಿದಂತೆ ಸುಮಾರು 14 ಜನ ಬಿಜೆಪಿ ಟಿಕೆಟ್‌ಗಾಗಿ ಮುಕ್ಕುರಿದ್ದಾರೆ. ಆದರೆ ವಕ್ಕಳದ, ಅಗಡಿ, ಸಂಜಯ್ ಇವರಲ್ಲಿಯೇ ತ್ರಿಕೋನ ಸ್ಪರ್ಧೆ. ಈ ಮೂವರಲ್ಲಿ ಟಿಕೆಟ್‌ಗಾಗಿ ರೇಸ್ ಬಿದ್ದರೆ ಗೆಲ್ಲುವುದು ಸಂಜಯ್.



ಎಂ.ವಿ. ಪಾಟೀಲ್



ಸಿರಾಜ್ ಶೇಖ್



ಅಮರಗುಂಡಪ್ಪ



ಅಮರೇಶ್.ಎಚ್

ಆಗುತ್ತದೆ. ಹಾಗೆಯೇ ಪಾರ್ಟಿ ಕಾರ್ಯಕರ್ತೆಯರನ್ನು ಮಲಗೋಕೆ ಕರೆದು ರಾದ್ಧಾಂತ ಮಾಡಿಕೊಂಡಿರುವ ಮತ್ತು ಸದ್ಯ ಬಿಜೆಪಿ ಗೂಢಚಾರನಾಗಿ ಕಾಂಗ್ರೆಸ್‌ನಲ್ಲಿರುವ ಸಿದ್ರಾಮಸ್ವಾಮಿ ರೇಸ್‌ನಲ್ಲಿದ್ದು, ಅತ್ತ ಬಿಜೆಪಿಯಿಂದ ಲಲಿತಾರಾಣಿ, ಪರಣ್ಣಮುನವಳ್ಳಿ ಟಿಕೆಟ್ ಕೇಳುತ್ತಿದ್ದಾರೆ. ಆದರೆ ನಿನ್ನೆ ಪಕ್ಷಕ್ಕೆ ಬಂದು ಇಂದು ಟಿಕೆಟ್ ಕೇಳಿದವರಿಗೆ ಕೊಟ್ಟರೆ ಹೇಗೆ ಎಂಬುದು ಬಿಜೆಪಿಯಿಂದ ಮೂರು ಸಾರಿ ಮುಗ್ಗರಿಸಿರುವ ಗಿರಿಗೌಡನ ಅಳಲು. ಇದೇ ಗಂಗಾವತಿಗೆ ಕಾಂಗ್ರೆಸ್‌ನಿಂದ ಕೊಪ್ಪಳದ ಕರಿಯಣ್ಣ ಸಂಗಟಿ ಕೂಡಾ ಆಕಾಂಕ್ಷಿ. ಆದರೆ ಜೆಡಿಎಸ್‌ನಲ್ಲಿ ಏನಿದ್ದರೂ ಅನ್ಸಾರಿಯದ್ದೇ ಒನ್ ಮ್ಯಾನ್ ರೇಸ್!

ಜಿಲ್ಲಾಕೇಂದ್ರ ಕೊಪ್ಪಳದಲ್ಲಿ ಕಾಂಗ್ರೆಸ್ಸಿಗರು ಗಾಂಧಿ ಕ್ಲಾಸ್‌ಗೆ ಮುಗಿಬಿದ್ದಂತೆ ಬಿಜೆಪಿಯವರು ಬಾಲ್ಕನಿ ಟಿಕೆಟ್‌ಗೆ ನಿಂತಂತೆ ಸಾಲಾಗಿ ನಿಂತಿದ್ದಾರೆ. ಕಾಂಗ್ರೆಸ್‌ನಿಂದ ಅಲ್ಪಸಂಖ್ಯಾತರಿಗೆ ಟಿಕೆಟ್ ಕೊಡಿ ಎಂಬ ಕೂಗಿನ ಮಧ್ಯೆಯೇ, ಕಳೆದ ಬಾರಿ ಸ್ವಲ್ಪದರಲ್ಲಿಯೇ ರಾಯರೆಡ್ಡಿಯ ಕುತಂತ್ರದಿಂದ ಟಿಕೆಟ್ ಮಿಸ್ ಮಾಡಿಕೊಂಡ ಡಾ. ರಾಂಪುರ, ಮೊನ್ನೆ ಮಾಜಿಯಾದ ಬಸವರಾಜ ಹಿಟ್ನಾಳ, ಹಳೇ ಹುಲಿ ದಿವಟರ್ ಎಲ್ಲರೂ ಪ್ರಬಲ ಆಕಾಂಕ್ಷಿಗಳೇ. ಈ ಮಧ್ಯೆ ನಂದೂ ಒಂದು ಇರಲಿ ಅಂತ ಅಂಗಡಿ ಹನ್ಮಂತಪ್ಪನೂ ಒಂದು ಆಸೆ ಇಟ್ಟುಕೊಂಡಿದ್ದಾನೆ. ಆದರೆ ಅದು ಕೈಗೆಟುಕುವ ಲಕ್ಷಣಗಳಿಲ್ಲ, ವಿಧಾನಪರಿಷತ್‌ನ ಮಾಜಿ ಸದಸ್ಯ ಕರಿಯಣ್ಣ ಸಂಗಟಿ, ವೈಟ್ ಹೌಸ್‌ನ ಫೇವರಿಟ್ ಕ್ಯಾಂಡಿಡೇಟ್.


ಜನತಾದಳದಿಂದ ಮತ್ತದೇ ಸೋತ ಮುಖದ ಸಂಗಣ್ಣ ಕರಡಿ ಮತ್ತು ಎಂ.ವಿ. ಪಾಟೀಲ್ ಇದ್ದರೆ ಕ್ಷಾತ್ರಿಕ ಜನಾಂಗದ ಮಲ್ಲಿಕಾರ್ಜುನ ಹಡಪದ ಎಂಬ …

ಆರು ತಿಂಗಳಿಂದ ರಗಳೆ ಮಾಡಿಕೊಳ್ಳುತ್ತಿರುವ ರಾಯರೆಡ್ಡಿ ಯಲಬುರ್ಗದ ಅಳಿದುಳಿದ ಕಾಂಗ್ರೆಸ್‌ಗೊಬ್ಬನೆ ಗೌಡ. ಮೊದಲೆಲ್ಲ ಜೋರಾಗಿ ಅಬ್ಬರಿಸಿದ್ದ ಘೋರ್ಪಡೆ ಕುಟುಂಬದ ಕುಡಿ ಈಗ ಯಾಕೋ ಠುಸ್ ಆಗಿಬಿಟ್ಟಿದೆ. ಆದರೆ ಬಿಜೆಪಿ ಈಶಣ್ಣನಿಗೆ ಟಿಕೆಟ್ ಕೊಟ್ರೆ ಇರಲಿ ಅಂತ ಧಾರವಾಡದ ಉತ್ತರ ಕ್ಷೇತ್ರಕ್ಕೆ ಹಾರಲು ರಾಮರೆಡ್ಡಿ ಪ್ರಯತ್ನಿಸುತ್ತಿದ್ದಾನೆ. ಜೆಡಿಎಸ್‌ನಲ್ಲಿ ಸ್ವಲ್ಪ ಲವಲವಿಕೆ ಕಾಣುತ್ತಿದ್ದರೂ ಶಿವಶರಣಪ್ಪಗೌಡ, ಸಿ.ಹೆಚ್. ಪಾಟೀಲ್, ಅಮರಗುಂಡಪ್ಪ ಮೇಟಿ ಮಧ್ಯೆ ಸಮಬಲದ ಪ್ರಯತ್ನ ನಡೆಯುತ್ತಿದೆ. ಬಿಜೆಪಿಯಿಂದ ಈಶಣ್ಣ ಮತ್ತು ಹಾಲಪ್ಪ ಆಚಾರ್ ಸ್ಪರ್ಧೆಯಲ್ಲಿದ್ದು, ಹಾಲಪ್ಪ ತನ್ನ ಜಾತಿಯ ಕಾರ್ಡ್ ಬಳಸಿ ಜನಾರ್ದನ ರೆಡ್ಡಿ ಮೂಲಕ ಟಿಕೆಟ್ ತರುವ ಶಂಕೆ ಇದೆ.

ಮಾಡಬಾರದ್ದು ಮಾಡಿ ಪಕ್ಷ ಮತ್ತು ತನ್ನ ಹೆಸರು ಕೆಡಿಸಿಕೊಂಡಿರುವ ಕುಷ್ಟಗಿಯ ಬಿಜೆಪಿಗೆ ದೊಡ್ಡನಗೌಡನೊಂದಿಗೆ ಫಕೀರಪ್ಪ ಬೆಳಗೇರಿ ಪ್ರಯತ್ನ ನಡೆದಿದೆ. ಜೆಡಿಎಸ್‌ನಿಂದ ಕೆ.ಶರಣಪ್ಪ ಕಾಂಗ್ರೆಸ್‌ನಿಂದ ಎಂ.ಪಿ. ಪ್ರಕಾಶ್ ಬಣದ ಅಮರೇಗೌಡ ಬಯ್ಯಾಪುರ ಲಿಂಗಸೂರಿನಿಂದ ಕುಷ್ಟಗಿಗೆ ಶಿಫ್ಟ್ ಆಗಿ ಬಾಡಿಗೆ ಮನೆ ಹಿಡಿದಿದ್ದಾರೆ. ಆದರೆ ಮಾಜಿ ಶಾಸಕ ಹಸನ್‌ಸಾಬ ದೋಟಿಹಾಳ ತನಗೆ ಟಿಕೆಟ್ ಬೇಕೆಂದು ಹಟ್ಟು ಹಿಡಿದಿದ್ದಾರೆ. ಕಸಾಪದ ಜಿಲ್ಲಾಧ್ಯಕ್ಷ ಶೇಖರ್‌ಗೌಡ ಮಾಲೀಪಾಟೀಲ್ ಕೂಡಾ ಭಯಂಕರ ಪ್ರಯತ್ನದಲ್ಲಿದ್ದಾರೆ.

ಭಯಂಕರ ಬೇಸಿಗೆ ನಡುವೆ ಬರುತ್ತಿರುವ ಚುನಾವಣೆಯಂತೂ ಪಕ್ಷಗಳ ನಾಯಕರ ನೀರಿಳಿಸುತ್ತಿದೆ. ಎಲ್ಲ ಆಕಾಂಕ್ಷಿಗಳಿಗೆ ಸದ್ಯ ಬೇಕಿರುವುದು ತಮ್ಮ [illegible] ಕೃಪೆ. ಮತದಾರರು … ವರೂ ಆಮೇಲೆ


■ ವರದಿಗಾರ



# ಉಡುಪಿ: ಆರೆಸ್ಸೆಸ್‌ನ ಸುಳ್ಳುಗಳು ಮಾಜಿ ಬಿಜೆಪಿ ಶಾಸಕರ ದಾದಾಗಿರಿ

ಉಡುಪಿಯಲ್ಲಿ ಮಾರ್ಚ್ 31, ಸೋಮವಾರ ದಂದು ಆರ್‌ಎಸ್‌ಎಸ್ ಕೇರಳದಲ್ಲಿ ಇತ್ತೀಚಿಗೆ ನಡೆದ ಹಿಂಸಾಕೃತ್ಯಗಳ ವಿರುದ್ಧ ಮೆರವಣಿಗೆ ತೆಗೆದು ಸಾರ್ವಜನಿಕ ಸಭೆ ನಡೆಸಿತು. ಆರ್‌ಎಸ್‌ಎಸ್ ಸಂಸ್ಕೃತಿಗೆ ತಕ್ಕಂತೆ ಸಭೆಯ ಉದ್ದಕ್ಕೂ ಕೇರಳದ ವಿದ್ಯಮಾನಗಳ ಬಗ್ಗೆ ಹಸಿಹಸಿ ಸುಳ್ಳುಗಳನ್ನೇ ಹೇಳಲಾಯಿತು. ಆ ರಾಜ್ಯದಲ್ಲಿ ಮಾರ್ಕ್ಸ್‌ವಾದಿಗಳ ಮೇಲೆ ಆರ್‌ಎಸ್‌ಎಸ್ ನಡೆಸಿದ ಅಮಾನುಷ ಹಲ್ಲೆ ಮತ್ತು ಕೊಲೆಗಳ ಬಗ್ಗೆ ಸಭೆಯಲ್ಲಿ ಒಂದು ಮಾತೂ ಕೇಳಿಬರಲಿಲ್ಲ. ದೆಹಲಿಯಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮೇಲೆ ಹಾಗೂ ಬೆಂಗಳೂರಿನಲ್ಲಿ ಪಕ್ಷದ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಅವರ ಮನೆಯ ಮೇಲೆ ನಡೆದ ದಾಳಿಗಳನ್ನು ಸಹ ಯಾರೂ ಪ್ರಸ್ತಾಪಿಸಲಿಲ್ಲ. ಆ ಸಭೆಯಲ್ಲಿ ಮಾತನಾಡಿದವರು ಪಶ್ಚಿಮ ಬಂಗಾಳದ ನಂದಿಗ್ರಾಮದಲ್ಲಿ ನಡೆದ ಹಿಂಸಾಚಾರದ ಬಗೆಗೂ ಯದ್ವಾತದ್ವಾ ಸುಳ್ಳುಗಳನ್ನು ಹೇಳಿದರು. ನಂದಿಗ್ರಾಮದಲ್ಲಿ ಪ್ರಜೆಗಳ ಮೇಲೆ ಹಿಂಸೆ ನಡೆದಿರುವುದು ನಿಜ. ಅದನ್ನು ಕಮ್ಯೂನಿಸ್ಟರ ಪೈಕಿ ಯಾರು ಸಹ ನಿರಾಕರಿಸುತ್ತಿಲ್ಲ. ಸ್ವತಃ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದಲ್ಲೇ ಪಶ್ಚಿಮಬಂಗಾಳದ ಮುಖ್ಯಮಂತ್ರಿ ಬುದ್ಧದೇವ ಭಟ್ಟಾಚಾರ್ಯರಿಂದ ಹಿಡಿದು ಪಕ್ಷದ ಸಾಮಾನ್ಯ ಕಾರ್ಯಕರ್ತರವರೆಗೆ ಎಲ್ಲರಿಗೂ ಆ ಬಗ್ಗೆ ವಿಷಾದವಿದೆ. ಮುಖ್ಯಮಂತ್ರಿ, ನಂದಿಗ್ರಾಮದ ಉದ್ದೇಶಿತ ಕೆಮಿಕಲ್ ಸ್ಥಾವರದ ಯೋಜನೆಯನ್ನು ರದ್ದುಪಡಿಸಿದ್ದಾರೆ. ಪ್ರಜೆಗಳ ಅಭಿಪ್ರಾಯಕ್ಕೆ ಮಣಿದು "ಅಭಿವೃದ್ಧಿ ಯೋಜನೆ"ಯೊಂದನ್ನು ಸರಕಾರ ರದ್ದುಪಡಿಸಿದ ಇನ್ನೊಂದು ಉದಾಹರಣೆ ಭಾರತದಲ್ಲಿ ಇಲ್ಲ. ಪಶ್ಚಿಮ ಬಂಗಾಳದ ಮಾರ್ಕ್ಸ್‌ಸ್ಟ್ ಸರಕಾರದ ಈ ಧೋರಣೆಯ ಜೊತೆಗೆ, ಗುಜರಾತ್ ನರಮೇಧದ ಕುರಿತು ಗುಜರಾತ್ ಮುಖ್ಯಮಂತ್ರಿ ಹಾಗೂ ಸಂಘಪರಿವಾರದ ಧೋರಣೆಯನ್ನು ಹೋಲಿಸಿ ನೋಡಬಹುದಾಗಿದೆ. ಮುಖ್ಯಮಂತ್ರಿ ನರೇಂದ್ರಮೋದಿಯಿಂದ ಹಿಡಿದು ಸಂಘ ಪರಿವಾರದ ಸಾಮಾನ್ಯ ಸದಸ್ಯರವರೆಗೆ ಯಾರೊಬ್ಬನಿಗೂ ಇಂದಿಗೂ ಆ ಬಗ್ಗೆ ಕಿಂಚಿತ್ತೂ ಪಶ್ಚಾತ್ತಾಪ ವಿಲ್ಲ.

ನಂದಿಗ್ರಾಮವೇ ಇರಲಿ, ತಸ್ಲೀಮಾ ನಸ್ರೀನ್ ಗಡೀಪಾರಿನ ಪ್ರಕರಣವೇ ಇರಲಿ, ಆ ಕುರಿತು ಪಶ್ಚಿಮ ಬಂಗಾಳದ ಮಾರ್ಕ್ಸಿಸ್ಟ್ ಸರಕಾರವನ್ನು ಕಟುವಿಮರ್ಶೆಗೆ ಒಳಪಡಿಸಿದವರಲ್ಲಿ ಎಡಪಂಥೀಯರೇ ಮುಂದಿದ್ದಾರೆ. ಜ್ಯೋತಿ ಬಸು ಸರಕಾರದಲ್ಲಿ ಸುದೀರ್ಘ ಕಾಲ ಅರ್ಥಮಂತ್ರಿಯಾಗಿದ್ದ ಡಾ. ಅಶೋಕ್ ಮಿತ್ರ, ಇತಿಹಾಸಕಾರ ಸುಮಿತ್ ಸರ್ಕಾರ್, ತನಿಖಾ ಸರ್ಕಾರ್, ಪತ್ರಕರ್ತ ಪ್ರಫುಲ್ ಬಿದ್ವಾಯಿ, ಲೇಖಕರಾದ ಅರುಂಧತಿ ರಾಯ್, ಯು.ಆರ್. ಅನಂತಮೂರ್ತಿ ಹಾಗೂ ಮಹಾಶ್ವೇತಾದೇವಿ- ಹೀಗೆ ಪಶ್ಚಿಮ ಬಂಗಾಳ ಸರಕಾರವನ್ನು ಕಟಕಟೆಯಲ್ಲಿ ನಿಲ್ಲಿಸಿದ ಎಡಪಂಥೀಯ ಬುದ್ಧಿಜೀವಿಗಳ ಪಟ್ಟಿ ದೊಡ್ಡದಿದೆ.




ಎಡಪಂಥೀಯ ರಾಜಕೀಯ ಮತ್ತು ತತ್ವ-ಎರಡಕ್ಕೂ ಭಿನ್ನಮತ, ಚರ್ಚೆ, ಸ್ವವಿಮರ್ಶೆಗಳ ದೊಡ್ಡ ಪರಂಪರೆಯೇ ಇದೆ. ಆದರೆ ಸಮವಸ್ತ್ರದ ಆರ್‌ಎಸ್‌ಎಸ್ ಸಿದ್ಧಾಂತದಲ್ಲಿ ಚರ್ಚೆ, ಭಿನ್ನಮತಗಳಿಗೆ ಅವಕಾಶವೇ ಇಲ್ಲ. ವಾದದಲ್ಲಿ ಎದುರಾಳಿಯನ್ನು ಸಹಿಸದ ಅದರ ಹಠಮಾರಿತನ ಕ್ರಿಯೆಯಲ್ಲಿ ಅಸಾಧಾರಣ ಹಿಂಸೆಯ ರೂಪ ಪಡೆದುಕೊಳ್ಳುತ್ತದೆ. ಸ್ವವಿಮರ್ಶೆಯನ್ನು ತನ್ನ ಸಂಘಟನೆಯಿಂದ ಸಂಪೂರ್ಣ ಹೊರಗೆ ಇಟ್ಟಿರುವ ಆರ್‌ಎಸ್‌ಎಸ್‌ಗೆ ತಾನು ಎಸಗಿದ ಹಿಂಸೆಯ ಕುರಿತು ಆತ್ಮಜ್ಞಾನವೂ ಇಲ್ಲ; ಅಪರಾಧಿಭಾವವೂ ಇಲ್ಲ. ಗುಜರಾತ್ ನರಮೇಧದ ಕುರಿತು ನರೇಂದ್ರ ಮೋದಿಯ ಉಡಾಫೆಯ ಮಾತುಗಳಿಗೆ ಆತನ ವೈಯಕ್ತಿಕ ಒರಟುತನ ಕಾರಣವಲ್ಲ, ಆರ್‌ಎಸ್‌ಎಸ್ ಸಿದ್ಧಾಂತದಲ್ಲೇ ಅಂತರ್ಗತವಾಗಿರುವ ಒರಟುತನ ಅದು.

ಹಾಗಾಗಿ ಉಡುಪಿಯ ಆರ್‌ಎಸ್‌ಎಸ್ ಸಭೆಯಲ್ಲಿ ಹಿಂಸೆಯ ಕುರಿತು ಬರೇ ಸುಳ್ಳುಗಳನ್ನು ಹೇಳಲಾಯಿತು ಎನ್ನುವುದು ವರದಿ ಮಾಡುವಂತಹ ಸುದ್ದಿಯೇ ಅಲ್ಲ. ಆದರೆ ಆ ಸಭೆಯಲ್ಲಿ ಆರ್‌ಎಸ್‌ಎಸ್‌ನ ನಿಜ ಸ್ವರೂಪವನ್ನು ಹೊರಗೆಡಹುವ ಇನ್ನೊಂದು ಘಟನೆ ನಡೆಯಿತು. ಸಭೆ ನಡೆಯುವ ಸ್ಥಳದಲ್ಲಿ ಉಡುಪಿಯ ಪತ್ರಕರ್ತರ ಜೊತೆ ಸ್ವತಃ ಪತ್ರಕರ್ತರೂ, ಜನಪರವೇದಿಕೆ, ಕೋಮುಸೌಹಾರ್ದ ವೇದಿಕೆ ಮುಂತಾದ ಸಂಘಟನೆಗಳ ಕಾರ್ಯಕರ್ತರೂ ಆಗಿರುವ ಶ್ರೀರಾಮ ದಿವಾಣರೂ ಇದ್ದರು. ಸಭೆಗೆ ಮುನ್ನ ನಡೆದ ಆರ್‌ಎಸ್‌ಎಸ್‌ನ ಮೆರವಣಿಗೆಯಲ್ಲಿ ಉಡುಪಿಯ ಮಾಜಿ ಬಿಜೆಪಿ ಶಾಸಕ ರಘುಪತಿಭಟ್ಟ ಭಾಗವಹಿಸಿದ್ದರು. ಮೆರವಣಿಗೆ, ಸಭೆ ನಡೆಯುವ ಸ್ಥಳಕ್ಕೆ ಸಮೀಪ ಬಂದಾಗ ಅಲ್ಲಿದ್ದ ಶ್ರೀರಾಮ ದಿವಾಣರನ್ನು ನೋಡಿದ ಮಾಜಿ ಶಾಸಕರು ತನ್ನ ಜೊತೆಯಲ್ಲಿದ್ದವರಿಗೆ "ಅವನೊಬ್ಬನನ್ನು ತೆಗೆದರೆ ಎಲ್ಲ ಸರಿಹೋಗುತ್ತದೆ" ಎಂದು ಗಟ್ಟಿ ದನಿಯಲ್ಲಿ ಹೇಳಿದರು. ಮಾಜಿ ಶಾಸಕರ ಅಬ್ಬರದ ಮಾತು ಕೇಳಿ ಮೆರವಣಿಗೆಯಲ್ಲಿದ್ದವರಿಗೆ ಏಕ್‌ದಂ ಸ್ಪಿರಿಟ್ ಬಂದು ಅವರು, "ರಾಮದಿವಾಣನಿಗೆ ಧಿಕ್ಕಾರ" ಎಂದು ಘೋಷಣೆ ಕೂಗಿದರು. ರಾಮದಿವಾಣ ಅದರಿಂದ ಏನೂ ಆಗುವುದಿಲ್ಲ ಎಂದು ಗೊತ್ತಿದ್ದೇ ಈ ಘಟನೆಯ ಬಗ್ಗೆ ಜಿಲ್ಲಾವರಿಷ್ಠ ಪೊಲೀಸ್ ಅಧಿಕಾರಿಗೆ ಲಿಖಿತ ದೂರು ಕೊಟ್ಟಿದ್ದಾರೆ. ರಾಮದಿವಾಣರಿಗೆ ಇಂತಹ ಬೆದರಿಕೆಗಳು ಹೊಸತಲ್ಲ. ಅವರು ಪೊಲೀಸರಿಗೆ ದೂರು ಬರೆಯುವುದೂ ಇದೇನೂ ಮೊದಲ ಬಾರಿ ಅಲ್ಲ. ಕೆಲವು ತಿಂಗಳ ಹಿಂದೆ, ಉಡುಪಿಯ ಭಜರಂಗದಳದ ದೊಣ್ಣೆ ನಾಯಕರಲ್ಲಿ ಒಬ್ಬರಾದ ರಾಘವೇಂದ್ರ ಆಚಾರ್ಯ ರಾಮದಿವಾಣರಿಗೆ, ಜಿಲ್ಲಾ ವಾರ್ತಾಧಿಕಾರಿಗಳ ಕಚೇರಿಯಲ್ಲಿ ಥೇಟು ರಘುಪತಿ ಭಟ್ಟರ ಭಾಷೆಯಲ್ಲಿಯೇ ಧಮಕಿ ಹಾಕಿದ್ದರು. ಆಗಲೂ ರಾಮದಿವಾಣರು ಪೊಲೀಸರಿಗೆ ದೂರು ಕೊಟ್ಟಿದ್ದರು. ಮತ್ತು ಯಥಾಪ್ರಕಾರ ಆಗಲೂ ಪೊಲೀಸರು ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

ಮಾಜಿ ಶಾಸಕ ರಘುಪತಿಭಟ್ಟರು ಉಡುಪಿಯಲ್ಲಿ ಅರಮನೆಯಂತಹ ಮನೆ ಕಟ್ಟಿಕೊಂಡಿದ್ದಾರೆ. ರಾಘವೇಂದ್ರ ಆಚಾರ್ಯರೂ ಸಾಕಷ್ಟು ದೊಡ್ಡವರೇ- ದುಡ್ಡಿನ ಮು... ಇಂತಹ ಕುಳಗಳಿಗೆ, ಎರಡು ಕೋಣೆಯ ಬಾ... ಮನೆಯಲ್ಲಿ ವಾಸಿಸುತ್ತ, ನಿತ್ಯದ ಖರ್ಚಿಗೆ ಪರದಾ... ರಾಮದಿವಾಣರಂತಹ ಬಡಪಾಯಿ ನಿವಾರಿಸಬೇಕ... ಅಪಾಯವೆಂದು ಕಂಡಿದ್ದು ಹೇಗೆ? ರಾಮದಿವಾ... ನ್ಯಾಯಪರತೆ ಮತ್ತು ಛಲ ರಘುಪತಿ ಭಟ್ಟರಂತಹ... ನೆಮ್ಮದಿಯನ್ನು ಕೆಡಿಸಿದೆ. ಉಡುಪಿಯ ಹೆಸ... ಮಸಿಬಳಿದ ಆದಿ ಉಡುಪಿ ಬೆತ್ತಲೆ ಪ್ರಕರಣದಂ... ಅಮಾನುಷ ಘಟನೆಗಳ ವಿರುದ್ಧ ಕೋಮು ಸೌಹಾ... ವೇದಿಕೆ ಸಂಘಟಿಸಿದ ಸಾರ್ವಜನಿಕ ಪ್ರತಿಭಟನೆಯ... ಸದ್ದಿ ಭಟ್ಟ ಆಚಾರ್ಯರುಗಳು ಮರೆತಿಲ್ಲ. ಈ ಪ್ರತಿ... ನೆಯ ನೇತೃತ್ವ ವಹಿಸಿದ್ದು ರಾಮದಿವಾಣ ಎಂಬುದ... ಅವರು ಮರೆತಿಲ್ಲ. ತಮ್ಮ ರಾಜಕೀಯದಲ್ಲಿ ತ... ಎದುರಾಳಿಗಳನ್ನು ಪ್ರಜಾಸತ್ತಾತ್ಮಕವಾಗಿ ಎದುರಿಸುವು... ಬಿಜೆಪಿ, ಆರ್‌ಎಸ್‌ಎಸ್‌ಗಳ ಜಾಯಮಾನವೇ ಅ... ನಿರಂತರವಾಗಿ ಸುಳ್ಳು ಹೇಳುವುದು, ಧಮಕಿ ಹ... ಎದುರಾಳಿಗಳ ಬಾಯಿಮುಚ್ಚಿಸುವುದು, ಗುಂ... ಕಟ್ಟಿಕೊಂಡು ಹೋಗಿ ಅಸಹಾಯಕರ ಮೇಲೆ ... ನಡೆಸುವುದು ಹಾಗೂ ಅಂತಹ ವರ್ತನೆಯನ್ನೇ ಮ... ಪರಾಕ್ರಮ ಎಂದು ಹೆಗ್ಗಳಿಕೆಯಲ್ಲಿ ಹೇಳಿಕೊಳ್ಳುವುದ... ಇದು ಅವರ ಕಾರ್ಯ ವಿಧಾನ.


ಉಡುಪಿಯ ಮಾಜಿ ಬಿಜೆಪಿ ಶಾಸಕರ ವರ್ತ... ಶಾಸಕರಿಗೆ ಏಕೆ, ಸಾಮಾನ್ಯ ಗೃಹಸ್ಥನೊಬ್ಬನಿಗೆ ... ತಕ್ಕ ನಡವಳಿಕೆ ಅಲ್ಲ. ಅದು ಮೂರನೆಯ ದರ್ಜೆ... ದಾದಾಗಿರಿ. ಆದರೆ ಹೀಗೆ ತನ್ನ



ಪರೀಕ್ಷೆಗಳು ನ...ದ್ದ ಶಾಲೆಯ ಪಕ್ಕದಲ್ಲೇ ಸಾಗಿದ ಆರೆಸ್ಸೆಸ್ ಮೆ...ಗೆ ಮತ್ತು ಮಾಜಿ ಶಾಸಕ ಭಟ್ಟ

ಎದುರಾಳಿಗಳನ್ನು ಬೆದರಿಸಿ ಮಣಿಸಬಹುದು ಎಂ... ಮಾಜಿ ಶಾಸಕ ರಘುಪತಿಭಟ್ಟ ಹಾಗೂ ಅವ... ಸೈನಾತಿಗಳು ಭಾವಿಸಿದ್ದರೆ ಅದರಷ್ಟು ದೊಡ್ಡ ಭ್ರ... ಬೇರೊಂದಿಲ್ಲ.

■ ಜಿ. ರಾಜಶೇಖರ



## ಹಲವೇ ಪದಗಳ ಕತೆ

ಖ್ಯಾತ ಲೇಖಕ ಹೆಮಿಂಗ್‌ವೆ ಒಮ್ಮೆ ಆರೇ ಆರು ಪದಗಳಲ್ಲಿ ಒಂದು ಚಿಕ್ಕಕತೆ ಬರೆದಿದ್ದರಲ್ಲದೇ ಅದನ್ನು ತನ್ನ ಶ್ರೇಷ್ಠ ಬರಹ ಎಂದು ಹೇಳಿದ್ದರು. ಅವರ ಕತೆ ಹೀಗಿತ್ತು: "ಮಾರಾಟಕ್ಕಿದೆ: ಎಳೆಯ ಮಗುವಿನ ಚಪ್ಪಲಿಗಳು." ಎಂದೂ ಉಪಯೋಗಿಸಲ್ಪಟ್ಟಿಲ್ಲ."

ಸುಮ್ಮನೆ ಯೋಚಿಸಿ. ಆ ಆರು ಪದಗಳ ಹಿಂದೆ ಎಷ್ಟೊಂದು ಅರ್ಥಗಳು ಅಡಗಿವೆಯಲ್ಲಾ. ಆ ಮಗುವಿಗೆ ಏನಾಯಿತು? ಅದು ಜನಿಸಲೇ ಇಲ್ಲವೆ? ಜನಿಸಿದ ನಂತರ ಸಾವನ್ನಪ್ಪಿತೆ? ಅಥವಾ ಆ ಮಗುವೇ ಒಂದು ಕಲ್ಪನೆಯೇ? ಹಾಗೊಮ್ಮೆ ಮಗು ಜನಿಸಿದ್ದರೂ ಅದು ಚಪ್ಪಲಿಗಳನ್ನು ಏಕೆ ಬಳಸಲಿಲ್ಲ? ಮಗು ಹೆಣ್ಣುಮಗುವಾಗಿದ್ದು, ಚಪ್ಪಲಿ ಗಂಡುಮಗುವಿನದ್ದಾಗಿತ್ತೆ? ಅಥವಾ ಅದಲುಬದಲು? ಚಪ್ಪಲಿಯಲ್ಲೇ ದೋಷವಿತ್ತೇ? ತಮ್ಮ ಕಂದನ ಚಪ್ಪಲಿಗಳನ್ನು ಮಾರಾಟ ಮಾಡುವಷ್ಟು ಬಡತನ ತಂದೆ-ತಾಯಿಗಿತ್ತೇ? ಹೀಗೆಲ್ಲ ಯೋಚಿಸಿದಾಗ ಆ ಪುಟ್ಟ ಕತೆ ಎಷ್ಟು ಅದ್ಭುತವಾಗಿದೆ ಎನಿಸುತ್ತದಲ್ಲವೇ? ಪದಗಳ ಶಕ್ತಿಯೇ ಅಂತಹದ್ದು ಎನ್ನಬಹುದಲ್ಲವೇ.

ಇತ್ತೀಚಿಗೆ ತೀರಿಕೊಂಡ ಸೈಫಿ ಬರಹಗಾರ ಆರ್ಥರ್ ಸಿ. ಕ್ಲಾರ್ಕ್ ಕೂಡ ಅಂಥದ್ದೊಂದು ಪುಟ್ಟ ಕತೆ ಬರೆದಿದ್ದರು. ಅದು ಹೀಗಿದೆ: "ಸೃಷ್ಟಿಪರ್ವ ಯೋಜನೆಯನ್ನು ರದ್ದುಗೊಳಿಸಿರಿ ಎಂದ ದೇವ. ಆ ಕೂಡಲೇ ವಿಶ್ವ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು."

ಇಲ್ಲಿ ಅಂತಹದ್ದೇ ಹಲವು ಪುಟ್ಟ ಕತೆಗಳ ಉದಾಹರಣೆಗಳನ್ನು ನೀಡಿದ್ದೇವೆ. ಮಜಾ ಮಾಡಿ.

"ಸಮಾಧಿಲೇಖ: ಬುದ್ಧಿ ಇಲ್ಲದ ಮಾನವರು ಭೂಮಿಯಿಂದ ಎಂದೂ ಬಿಡುಗಡೆ ಹೊಂದಲಿಲ್ಲ."

-ವರ್ನರ್ ವಿನ್‌ವಿ

"ಮಳೆ, ಮಳೆ, ಮಳೆ, ಎಂದೆಂದಿಗೂ ನಿಲ್ಲದ ಮಳೆ."

-ಹವರ್ಡ್ ವಾಲ್‌ಡ್ರಾಪ್

"ಮಾನವಕುಲವನ್ನು ರಕ್ಷಿಸಲು ಆತ ಮತ್ತೆ ಸತ್ತ."

-ಬೆನ್ ಬೊವಾ

"ಟಿಕ್ ಟಾಕ್ ಟಿಕ್ ಟಾಕ್ ಟಿಕ್ ಟಿಕ್."

-ನೀಲ್ ಸ್ಟೀಫನ್‌ಸನ್

"ಸಾವು ಸಂಭವಿಸಿದ್ದು ಬಾಗ್ದಾದ್‌ನಲ್ಲಿ, ವಯಸ್ಸು 18. ಶವಪೆಟ್ಟಿಗೆಯನ್ನು ಮುಚ್ಚಿರಿ."

-ರಿಚರ್ಡ್ ಕೆ. ಮಾರ್ಗನ್

"ಸ್ವರ್ಗ ನಾಪತ್ತೆಯಾಗಿದೆ. ಹನ್ನೊಂದು ಗಂಟೆಗೆ ವಿಶೇಷ ಸುದ್ದಿಯೊಂದಿಗೆ ಮತ್ತೆ ಭೇಟಿಯಾಗೋಣ."

-ರಾಬರ್ಟ್ ಜಾರ್ಡನ್

ಈ ಚುನಾವಣೆಯು ಹಿಂದಿನ ಎಲ್ಲಾ ಚುನಾವಣೆಗಳಿಗಿಂತ ಬಹಳ ಭಿನ್ನವಾದುದು ಮತ್ತು ಮಹತ್ವದ್ದೇನೂ ಅಲ್ಲ. ಆದರೆ ಅಂತಹವರ ಪಾಲಿಗೂ ಈ ಚುನಾವಣೆಯನ್ನು ಭಿನ್ನ ಮತ್ತು ಸಕಾರಾತ್ಮಕ ವಿದ್ಯಮಾನವನ್ನಾಗಿ ಬದಲಾಯಿಸುವ ಒಂದು ಪ್ರಕ್ರಿಯೆ ಸಾಧ್ಯವಿದೆ. ಅಂತಹದೊಂದು ಪ್ರಕ್ರಿಯೆಯ ಭಾಗವಾಗಿಯೇ 'ಪತ್ರಿಕೆ'ಯ ಜನತೆಯ ಪ್ರಣಾಳಿಕೆಯನ್ನು ಈ ವಾರದಿಂದ ಪ್ರಾರಂಭಿಸುತ್ತಿದೆ. ಮೊದಲನೇ ಕಂತು ಇಲ್ಲಿದೆ.....



# ನೈಜ ಪ್ರಜಾಪ್ರಭುತ್ವದೆಡೆ ಮೊದಲ ಹೆಜ್ಜೆ

## ಚುನಾವಣೆ 2008 ಜನತೆಯ ಪ್ರಣಾಳಿಕೆ

ಮುಂದಿನ ಒಂದೂವರೆ ತಿಂಗಳಲ್ಲಿ ಕರ್ನಾಟಕದ ಜನತೆಯ ಮುಂದೆ ಬರಲಿರುವ ಚುನಾವಣೆಯು ಈ ಹಿಂದಿನ ಚುನಾವಣೆಗಳಿಗಿಂತ ಭಿನ್ನವಾದುದು ಎಂದು ಹಲವರು ಹೇಳುತ್ತಿದ್ದಾರೆ. ಅದರಲ್ಲೂ ಬಿಜೆಪಿಯ ಕೈಗೆ ಈ ರಾಜ್ಯದ ಚುಕ್ಕಾಣಿ ಹೋಗಬಾರದೆಂದು ಬಯಸುವ ಜನರು, ಅದೇ ಕಾರಣಕ್ಕೆ ಈ ಸಾರಿಯ ಚುನಾವಣೆ ಅತ್ಯಂತ ಮಹತ್ವದ್ದು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಆದರೆ ಕೋಮುವಾದವನ್ನು ಅಷ್ಟೇನೂ ಮಹತ್ವದ ವಿಷಯವನ್ನಾಗಿ ಪರಿಗಣಿಸದ ಅಥವಾ ಅದಕ್ಕಿಂತಲೂ ತಮ್ಮ ದಿನನಿತ್ಯದ ಹಲವಾರು ಸಮಸ್ಯೆಗಳೇ ಮುಖ್ಯ ಎಂದು ಭಾವಿಸಿರುವ ದೊಡ್ಡ ಸಂಖ್ಯೆಯ ಜನಸಾಮಾನ್ಯರೂ ಇದ್ದಾರೆ. ಅವರ ಪಾಲಿಗೆ ಈ ಚುನಾವಣೆಯು ಹಿಂದಿನ ಎಲ್ಲಾ ಚುನಾವಣೆಗಳಿಗಿಂತ ಬಹಳ ಭಿನ್ನವಾದುದು ಮತ್ತು ಮಹತ್ವದ್ದೆಂದು ಅನಿಸಿರಬೇಕೆಂದೇನೂ ಇಲ್ಲ. ಆದರೆ ಅಂತಹವರ ಪಾಲಿಗೂ ಈ ಚುನಾವಣೆಯನ್ನು ಭಿನ್ನ ಮತ್ತು ಸಕಾರಾತ್ಮಕ ವಿದ್ಯಮಾನವನ್ನಾಗಿ ಬದಲಾಯಿಸುವ ಒಂದು ಪ್ರಕ್ರಿಯೆ ಸಾಧ್ಯವಿದೆ. ಅಂತಹದೊಂದು ಪ್ರಕ್ರಿಯೆಯ ಭಾಗವಾಗಿಯೇ 'ಪತ್ರಿಕೆ'ಯ ಜನತೆಯ ಪ್ರಣಾಳಿಕೆಯನ್ನು ನೋಡಬಹುದು.

ಪ್ರಸಕ್ತ ಸಾಲಿನ ಚುನಾವಣೆಯ ಸಂದರ್ಭದಲ್ಲಿ ಅಂತಹ ಪ್ರಣಾಳಿಕೆಯೊಂದರ ಅಗತ್ಯ ಮತ್ತು ಪ್ರಸ್ತುತತೆಯ ಕುರಿತು ಚರ್ಚಿಸುವ ಮುನ್ನ, ಪ್ರಜಾತಂತ್ರದ ಕುರಿತು ಚಾಲ್ತಿಯಲ್ಲಿರುವ ಕೆಲ ಅಂಶಗಳನ್ನು ಗಮನಿಸೋಣ. ಪ್ರಾಥಮಿಕ ಶಾಲಾಮಟ್ಟದಿಂದ ಹಿಡಿದು, 'ಗಹನ'ವಾದ ಅಕ್ಯಾಡೆಮಿಕ್ ಚರ್ಚೆಗಳವರೆಗೆ ಪ್ರಜಾತಂತ್ರದ ವ್ಯಾಖ್ಯಾನಗಳಲ್ಲಿ ಬಳಕೆಯಾಗುವ ಅಬ್ರಹಾಂ ಲಿಂಕನ್‌ರ ಒಂದು ಮಾತಿದೆ. 'ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳೇ ನಡೆಸುವ .........'. ಈ ಪುರಾತನ ಮಾತು ತನ್ನ ಅರ್ಥವನ್ನು ಕಳೆದುಕೊಂಡಿರುವುದು ಅದು ಪದೇ ಪದೇ ಬಳಸಿ ಸವೆಯಾಗಿದೆ ಎಂಬ ಕಾರಣಕ್ಕೂ ಅಲ್ಲ; ಅದನ್ನು ಹೇಳಿದ ವ್ಯಕ್ತಿಯ ದೇಶದ ಸರ್ಕಾರಗಳು ಪ್ರಜಾತಂತ್ರದ ಹೆಸರಿನಲ್ಲೇ ಇನ್ನೂ ಹಲವು ದೇಶಗಳಲ್ಲಿ ಮಾರಣಹೋಮ ನಡೆಸುತ್ತಿದ್ದಾರೆ ಎನ್ನುವ ಕಾರಣಕ್ಕೂ ಅಲ್ಲ, ಬದಲಿಗೆ 'ಜಗತ್ತಿನ ದೊಡ್ಡ ಪ್ರಜಾಪ್ರಭುತ್ವ' ಭಾರತವೂ ಸೇರಿದಂತೆ ಪ್ರಪಂಚದ ಹತ್ತು ಹಲವಾರು ದೇಶಗಳಲ್ಲಿನ ದಶಕ/ಶತಮಾನಗಳ ಕಾಲದ ಪ್ರಜಾತಂತ್ರದ ಅನುಷ್ಠಾನದ ಪರಿಯೇ ಅದರ ಅರ್ಥವನ್ನು ಕಳೆದುಬಿಟ್ಟಿದೆ. ಹಾಗಾಗಿಯೇ ಈ ಪ್ರಜಾಪ್ರಭುತ್ವವನ್ನು ಪ್ರಶ್ನೆಗೊಳಿಸುವ ಅಥವಾ ಅದನ್ನು ನಿಜವಾದ ಅರ್ಥದಲ್ಲಿ ಜಾರಿಗೆ ತರುವ ವಿವಿಧ ರೀತಿಯ ಆಲೋಚನೆಗಳು ಪ್ರಪಂಚದ ವಿವಿಧ ಭಾಗಗಳಲ್ಲಿ ಚಾಲ್ತಿಯಲ್ಲಿವೆ. ಅದರಲ್ಲಿ ಸಕ್ರಿಯ ಪ್ರಜಾಪ್ರಭುತ್ವ (active democracy) ಎಂಬುದೂ ಒಂದಾಗಿದೆ.

ಬಹಳ ವರ್ಷಗಳ ಹಿಂದೆ ನಮ್ಮ ಸಿನೆಮಾ ಥಿಯೇಟರ್‌ಗಳಲ್ಲಿ ಸಿನೆಮಾಗಿಂತ ಮುಂಚೆ ತೋರಿಸುತ್ತಿದ್ದ ಸರ್ಕಾರೀ ಸಿನೆಮಾ(ಸ್ಪೈಡ್ ರೀಲು)ಗಳಲ್ಲಿ ಚುನಾವಣೆಯಲ್ಲಿ ವೋಟು ಹಾಕಲು ಜಾಗೃತಿ ಮೂಡಿಸುವ ಸಾಕ್ಷ್ಯಚಿತ್ರವೊಂದಿತ್ತು. ಅದರಲ್ಲಿ 'ಪ್ರಜ್ಞಾವಂತ ಮತದಾರ'ನು ಬೆಳಿಗ್ಗೆ ಸೂರ್ಯ ರಶ್ಮಿಯು ತಾಕಿದೊಡನೆ ಎದ್ದು ಉತ್ಸಾಹದಿಂದ ಸಿದ್ಧನಾಗಿ ಮತಗಟ್ಟೆಗೆ ಹೋಗಿ ಮತ ಚಲಾಯಿಸುವ ದೃಶ್ಯವಿರುತ್ತಿತ್ತು. ಅದರ ನಂತರ ಆತ ಮತಗಟ್ಟೆಯ ಹೊರಗೆ ಬಂದು, ಮತದಾರರ ಉದ್ದನೆಯ ಸಾಲಿನ ಪಕ್ಕ ನಿಂತು ತನ್ನ ಕೈಬೆರಳಿಗೆ ಹಚ್ಚಿರುವ ಶಾಯಿಯ ಗುರುತನ್ನು ಹೆಮ್ಮೆಯಿಂದ ತೋರಿಸುತ್ತಿದ್ದ. 'ನೀವೂ ಪ್ರಜ್ಞಾವಂತ ಪ್ರಜೆಗಳಾಗಿ, ನಿಮ್ಮ ಮತವನ್ನು ತಪ್ಪದೆ ಚಲಾಯಿಸಿ' ಎಂದು ಸರ್ಕಾರೀ ಸಾಕ್ಷ್ಯಚಿತ್ರಗಳಿಗೆ ಧ್ವನಿ ನೀಡುತ್ತಿದ್ದ ಚಿರಪರಿಚಿತ ದನಿಯಲ್ಲಿ ಕೇಳಿಬರುತ್ತಿತ್ತು. ಅದರ ನಂತರ 'ಮುಕ್ತಾಯ' ಎಂದುಬರುತ್ತಿತ್ತು. ಬಹುಶಃ ಅದು ಹಾಲಿ ಅಸ್ತಿತ್ವದಲ್ಲಿರುವ 'ಪ್ರಜಾತಂತ್ರ'ದ ಸಾರಾಂಶವನ್ನು ಸರಿಯಾದ ರೀತಿಯಲ್ಲಿ ಬಿಂಬಿಸುತ್ತದೆ.

ಚುನಾವಣೆಯಲ್ಲಿ ಮತ ಚಲಾಯಿಸುವುದರೊಂದಿಗೆ ಮಾತ್ರ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪಾತ್ರ ಪ್ರಾರಂಭವಾಗಲೂಬಾರದು ಮತ್ತು ಅಲ್ಲಿಗೇ ಮುಗಿಯಲೂಬಾರದು. ಆದರೆ ದುರಂತವೆಂದರೆ ಅದು ಅದಕ್ಕಿಂತ ಹೆಚ್ಚಾಗುವುದಿರಲಿ, ಈ ಚುನಾವಣೆಗಳೇ ಪ್ರಜಾತಂತ್ರದ ಅಣಕಗಳಾಗಿವೆ.

ಚುನಾವಣೆಯ ನಂತರದ ಆಳ್ವಿಕೆಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಜನತೆಯ ಪಾತ್ರ ಏನೇನೂ ಇರುವುದಿಲ್ಲ, ಅಂತಹ ಪಾತ್ರವಿರುವಂತಾಗಲು ಯಾವುದೇ ವ್ಯವಸ್ಥೆಯೂ ಇರುವುದಿಲ್ಲ, ಒಂದು ವೇಳೆ ಇದ್ದರೂ ಅವು ನಾಮಕಾವಸ್ಥೆಯಾಗಿರುತ್ತವೆ ಮತ್ತು ಈಗಾಗಲೇ ಸಮಾಜದಲ್ಲಿನ ತಾರತಮ್ಯಪೂರಿತ ಶ್ರೇಣೀಕರಣದ ಇನ್ನೊಂದು ರೂಪಗಳಾಗಿ ಇರುತ್ತವೆ. ಇಲ್ಲವೇ ಜನರ ಭಾಗವಹಿಸುವಿಕೆ ಹೆಸರಿನಲ್ಲಿ ಎನ್‌ಜಿಓಗಳಿಗೆ ಅವಕಾಶ ಮಾಡಿಕೊಡಲಾಗುತ್ತದೆ. ಎನ್‌ಜಿಓಗಳೆಂದರೆ ಸರ್ಕಾರೇತರ ಜನಸಂಘಟನೆಗಳಾಗದೆ, ಸಾಮ್ರಾಜ್ಯಶಾಹಿ ಪೋಷಿತ ಹಿತಾಸಕ್ತ ಸಂಸ್ಥೆಗಳಾಗಿರುತ್ತವೆ. ಆಡಳಿತದಲ್ಲಿ ಜನರ ನಿರಂತರವಾದ ಭಾಗವಹಿಸುವಿಕೆಯನ್ನು ಖಾತ್ರಿ ಪಡಿಸುವ ರಚನೆಗಳನ್ನು ರೂಪಿಸಿಕೊಳ್ಳದೆ ಕೆಲವು ಸಭೆಗಳಿಗೆ ಅವು ಸೀಮಿತವಾಗಿರುತ್ತವೆ.

ಹತ್ತು ಹಲವು ಆಯಾಮಗಳಲ್ಲಿ ಜನತೆಯನ್ನು ಖಂಡಿತವಾಗಿ ಒಳಗೊಳ್ಳುವ ಸಾಧ್ಯತೆಯಿದ್ದೇ ಇದೆ. ಸದಾ ಕಾಲ ಜನಸಾಮಾನ್ಯ ಮತದಾರರ ಆಶಯ-ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು, ಅವರ ಆಶಯ-ಹಿತಾಸಕ್ತಿಗಳ ನಿರ್ವಚನವನ್ನು ಅವರಿಂದಲೇ ಮಾಡಿಸಬಹುದು. ಯಾವ ರೀತಿಯ ಅಭಿವೃದ್ಧಿಯನ್ನು ಜನರು ಬಯಸುತ್ತಾರೆ? ಯಾವ ರೀತಿಯ ಯೋಜನೆಗಳು ತಮ್ಮ ಹಳ್ಳಿ/ಪಟ್ಟಣಗಳಲ್ಲಿ ಬರಬೇಕು ಅಥವಾ ಬರಬಾರದು ಎಂದು ಬಯಸುತ್ತಾರೆ? ಇತ್ಯಾದಿ ಇತ್ಯಾದಿ. ಡಬ್ಲ್ಯುಟಿಓ ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಇಡೀ ದೇಶದ ಅದುವರೆಗಿನ ಹಲವಾರು ನೀತಿಗಳಲ್ಲಿ ದೊಡ್ಡ ಬದಲಾವಣೆ ಬರುತ್ತದೆ ಮತ್ತು ಅದು ಈ ದೇಶದ ಬಹುತೇಕ ಜನರ ಮೇಲೆ ತೀವ್ರ ತರದ ದುಷ್ಪರಿಣಾಮ ಉಂಟುಮಾಡುತ್ತದೆ ಎಂಬುದು ಗೊತ್ತಿದ್ದೂ ಸಹ ಅದರ ಬಗ್ಗೆ ಜನಮತಗಣನೆ ನಡೆಯಲಿಲ್ಲ, ಅಷ್ಟು ಮಾತ್ರವಲ್ಲ ಸಂಸತ್ತಿನಲ್ಲೂ ಅದರ ಬಗ್ಗೆ ಚರ್ಚೆ ನಡೆಯಲಿಲ್ಲ.

ಈಗಾಗಲೇ ಅಸ್ತಿತ್ವದಲ್ಲಿರುವ ಸರ್ಕಾರೀ ಸಮಿತಿಗಳು, ಸಾರ್ವಜನಿಕ ವಿಚಾರಣೆ **(public hearing)**ಗಳಲ್ಲಿ ಇವು ನಡೆಯಲಾಗುತ್ತದೆ ಎಂಬ ಭ್ರಮೆಯನ್ನು ಹುಟ್ಟಿಸಲಾಗುತ್ತದಾದರೂ ಅವು ಕೇವಲ ಕಣ್ಣೊರೆಸುವ ತಂತ್ರಗಳೆಂಬುದನ್ನು ನಾವೆಲ್ಲಾ ನೋಡಿದ್ದೇವೆ. ತಳಮಟ್ಟದಲ್ಲಿ ಅಧಿಕಾರ ವಿಕೇಂದ್ರೀಕರಣದ ಹೆಸರಿನಲ್ಲಿ ಜಾರಿಯಲ್ಲಿರುವ ಗ್ರಾಮಪಂಚಾಯಿತಿಗಳು ಹಾಗೂ ಗ್ರಾಮಸಭೆಗಳು ಇವನ್ನು ಮಾಡುತ್ತಿವೆಯಲ್ಲಾ ಅಥವಾ ಕನಿಷ್ಠ ಮಾಡುವ ಉದ್ದೇಶವನ್ನು ಹೊಂದಿವೆಯಲ್ಲಾ ಎಂದೆನಿಸಬಹುದು. ಆದರೆ ವಾಸ್ತವದಲ್ಲಿ ಈ ಎಲ್ಲಾ ರಚನೆಗಳಲ್ಲಿ ಎರಡು ಮುಖ್ಯವಾದ ಸಮಸ್ಯೆಗಳಿವೆ. ಒಂದು-ಇವುಗಳಲ್ಲಿ ಹಾಲಿ ಈ ಸಮಾಜದಲ್ಲಿನ ವಿವಿಧ ರೀತಿಯ ತಾರತಮ್ಯಪೂರಿತ ಶ್ರೇಣೀಕರಣ (ಜಾತಿ, ವರ್ಗ, ಲಿಂಗ ಅಸಮಾನತೆಯ ತಾರತಮ್ಯ) ಮತ್ತೆ ಇನ್ನೊಂದು ರೀತಿಯಲ್ಲಿ ಪ್ರತಿಬಿಂಬಿತವಾಗಿರುತ್ತದೆ. ಇಲ್ಲವೇ ಈ ಅಧಿಕಾರ ವಿಕೇಂದ್ರೀಕರಣವೆಂಬ ಸರ್ಕಸ್ಸಿನಲ್ಲಿ ಇಡೀ ಸಮುದಾಯಗಳನ್ನು ಒಳಗೊಳ್ಳುವುದರ ಬದಲಾಗಿ ಗ್ರಾಮ ಮಟ್ಟದಿಂದ ದಿಲ್ಲಿಯವರೆಗೆ ವಿವಿಧ ಸ್ತರಗಳಲ್ಲಿ ಒಂದಷ್ಟು ಹೊಸ ಏಜೆಂಟರುಗಳನ್ನು ಸೃಷ್ಟಿಸಲಾಗುತ್ತದೆ. ಆ ರೀತಿ ಆಗದೆ ಜನರೇ ತಮ್ಮ ಬದುಕಿನ ಆಗು ಹೋಗುಗಳನ್ನು ನಿರ್ಧರಿಸಲು ಸಾಧ್ಯವಾಗುವಂತೆ ಪ್ರಜಾತಂತ್ರವು ವ್ಯವಸ್ಥೆ ಮಾಡಿಕೊಳ್ಳಬೇಕು.

ಇವೆಲ್ಲವೂ 'ಸಕ್ರಿಯ ಪ್ರಜಾಪ್ರಭುತ್ವ'ದ ಅಗಾಧ ಸಾಧ್ಯತೆಯ ಸಣ್ಣ ತುಣುಕುಗಳಷ್ಟೇ ಆಗಿವೆ. ಇವನ್ನು ನಾವು ಪ್ರಾಯೋಗಿಕವಾಗಿ ಜಾರಿಗೆ ತರುವುದು ಹಾಗಿರಲಿ, ಕಲ್ಪಿಸಿಕೊಳ್ಳುವುದೇ ಒಂದು ರೀತಿಯಲ್ಲಿ ಯುಟೋಪಿಯದಂತೆಯೋ ಅಥವಾ ತಮಾಷೆಯಂತೆಯೋ ಕಾಣುವ ಎಲ್ಲಾ ಸಾಧ್ಯತೆಗಳಿವೆ.

ಅದೆಲ್ಲಾ ಹೇಗೇ ಇರಲಿ, ಇಂದು ನಾವು ಚುನಾವಣೆಯ ಸಂದರ್ಭದಲ್ಲಿರುವಾಗ ಈ ಚುನಾವಣೆಯಲ್ಲಿ ಸಕ್ರಿಯ ಪ್ರಜಾಪ್ರಭುತ್ವವಾದಿಗಳ ಪಾತ್ರ ಏನು? ಈ ಸಂದರ್ಭದಲ್ಲಿ ನಿಜವಾದ ಪ್ರಜಾತಂತ್ರವನ್ನು ಜಾರಿಗೆ ತರುವ ನಿಟ್ಟಿನಲ್ಲಿ ನಾವು ಮಾಡಬಹುದಾದ್ದೇನಿದೆ? ಎನ್ನುವುದನ್ನು ಪರಿಶೀಲಿಸಬೇಕಿದೆ. ಅಂತಹ ಒಂದು ಸಾಧ್ಯತೆಯೇ 'ಜನರ ಪ್ರಣಾಳಿಕೆ'ಯಾಗಿದೆ.

ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ನಡೆದ ಚುನಾವಣೆಯಲ್ಲಿ ಅಧಿಕಾರಕ್ಕೆ ಬಂದ ಪಕ್ಷ ಬಿಎಸ್‌ಪಿಯು ಆ ಚುನಾವಣೆಯಲ್ಲಿ ಒಂದು ಪ್ರಣಾಳಿಕೆಯನ್ನೇ ಹೊರಡಿಸಲಿಲ್ಲ, ಇದನ್ನು ಎರಡು ರೀತಿಯಲ್ಲಿ ಅರ್ಥೈಸಬಹುದು. ಚುನಾವಣೆಯಲ್ಲಿ ಗೆಲ್ಲಲಿಕ್ಕೆ ಪ್ರಣಾಳಿಕೆಯೊಂದರ ಅವಶ್ಯಕತೆಯೇ ಇಲ್ಲ ಎಂಬುದು ಒಂದು. ಎರಡನೆಯದ್ದು, ಪ್ರಣಾಳಿಕೆಗಳು ಹಾಗೂ ಚುನಾವಣಾ ಪೂರ್ವ ಆಶ್ವಾಸನೆಗಳಿಗೆ ಯಾವುದೇ ಅರ್ಥ ಉಳಿದಿಲ್ಲವಾದ್ದರಿಂದ ಅಂತಹ ವ್ಯರ್ಥ ಸರ್ಕಸ್ಸು ಏಕೆ? ಎಂದು. ಹಾಗಾದರೆ ಚುನಾವಣೆಯಲ್ಲಿ ಗೆಲ್ಲಲು ಏನು ಮಾಡಬೇಕು? ಉತ್ತರ ಸರಳವಾಗಿದೆ. ಬಿಎಸ್‌ಪಿಯು ಅದನ್ನು ಬಹಿರಂಗವಾಗಿ ಹೇಳುತ್ತಿದೆ, ಮಿಕ್ಕ ಪಕ್ಷಗಳು ಬಹಿರಂಗವಾಗಿ ಹೇಳದೆ ಅದನ್ನು ಮಾಡುತ್ತಾ ಬರುತ್ತಿವೆ. ಆ ಉತ್ತರ ಏನೆಂದರೆ ಗೆಲ್ಲಲು 'ಏನು ಬೇಕಾದರೂ ಮಾಡಬಹುದು, ಗೆಲ್ಲುವುದು ಮುಖ್ಯವಷ್ಟೇ' (ಈ ವಿಚಾರದಲ್ಲಿ ಎಡಪಕ್ಷಗಳು ಸ್ವಲ್ಪ ಭಿನ್ನವಾಗಿವೆ. ಅವರು 'ಏನನ್ನು ಬೇಕಾದರೂ' ಮಾಡುವುದಿಲ್ಲ; ಬದಲಿಗೆ ಅವರು ನಿರಂತರವಾಗಿ ಗೆಲ್ಲುತ್ತಾ ಬಂದಿರುವ ರಾಜ್ಯಗಳಲ್ಲಿ ಹಾಗೆ ಗೆಲ್ಲಲು ಅವರಿಗೆ ಬೇರೆಯದೇ ಆದ ರೀತಿಯ ತಂತ್ರಗಳಿವೆ. ಆ ಮಾತು ಬೇರೆ. ಹಾಗೆಯೇ ಕೆಲವು ಪ್ರಗತಿಪರ ಸಂಘಟನೆಗಳು ಚುನಾವಣೆಯಲ್ಲಿ ಭಾಗವಹಿಸುವಾಗ ಈ ರೀತಿ ಇಲ್ಲ ಎಂಬುದನ್ನೂ ಇಲ್ಲಿ ನಮೂದಿಸಬೇಕು. ಆದರೆ ಅಂತಹ ಶಕ್ತಿಗಳು ಭಾರತದ ರಾಜಕಾರಣದ ದಿಕ್ಕನ್ನು ಬದಲಾಯಿಸುವ ಬಲವನ್ನು ಹೊಂದಿಲ್ಲ ಮತ್ತು ಸದ್ಯದ ಚುನಾವಣಾ ರಾಜಕಾರಣದಲ್ಲಿ ಅದನ್ನು ಹೊಂದುವ ಸಾಧ್ಯತೆಯೂ ಇಲ್ಲ). ಕರ್ನಾಟಕದಲ್ಲಿ ಆರು ತಿಂಗಳ ಹಿಂದೆ ಅಧಿಕಾರ ಹಂಚಿಕೆಯ ಅಸಹ್ಯಕರ ನಾಟಕ ನಡೆಯುವಾಗ ಮಾಧ್ಯಮದವರು ಕೇಳಿದ ಪ್ರಶ್ನೆಗಳಿಗೆ 'ರಾಜಕೀಯದಲ್ಲಿ ಏನು ಬೇಕಾದರೂ ಆಗಬಹುದು' ಎಂದು ಕೆಲವು ರಾಜಕಾರಣಿಗಳು ನೇರವಾಗಿಯೇ ಹೇಳುವ ಎದೆಗಾರಿಕೆ ತೋರಿದರು. ಅದೇ ಮಾತನ್ನು 'ಚುನಾವಣೆಯಲ್ಲಿ ಏನು ಬೇಕಾದರೂ ಮಾಡಬಹುದು' ಎಂದೂ ನಾವು ತಿಳಿದುಕೊಳ್ಳಬಹುದು.

ಇದೇ ಅಸಲೀ ಸಂಗತಿಯಾಗಿರುವಾಗ ರಾಜಕೀಯ ಪಕ್ಷಗಳು ಹೊರಡಿಸುವ ಪ್ರಣಾಳಿಕೆಗೆ ಯಾವ ಅರ್ಥ ಉಳಿದಿದೆ? ಅದನ್ನು ಯಾವ ಹೆಸರಿನಲ್ಲಿ ಕರೆಯಲಾಗುತ್ತದೆ ಎಂಬುದು ಮುಖ್ಯವಲ್ಲ, ಬದಲಿಗೆ ಪ್ರತಿ ಚುನಾವಣೆಯಲ್ಲಿ, ಆ ಚುನಾವಣೆಯಲ್ಲಿನ ಮತದಾರ ಸಮೂಹಕ್ಕೆ-ಅಂದರೆ ಸಾರಾಂಶದಲ್ಲಿ ಪ್ರಜಾಪ್ರಭುತ್ವದ ನಿರ್ಧಾರಕ ಶಕ್ತಿಯಾದ ಜನಸಮೂಹಕ್ಕೆ- ಯಾಕಾಗಿ ಯಾರಿಗೆ ಓಟು ಹಾಕಬೇಕೆಂಬುದಕ್ಕೆ ಉಮೇದುವಾರ ಪಕ್ಷಗಳು ತಮ್ಮ ವಿಚಾರಗಳನ್ನು ಮುಂದಿಡುವ ಕೆಲಸವನ್ನಂತೂ ಮಾಡಲೇಬೇಕಲ್ಲಾ? ತಾವು ಯಾವ ರೀತಿಯಲ್ಲಿ ಮುಂಬರುವ ಐದು ವರ್ಷಗಳಲ್ಲಿ ಪ್ರಜಾತಂತ್ರವನ್ನು ನಿಜವಾದ ಅರ್ಥದಲ್ಲಿ ಜಾರಿ ಮಾಡಲು ಕ್ರಮಕೈಗೊಳ್ಳುತ್ತೇವೆ? ಹಾಲಿ ಇರುವ ಪರಿಸ್ಥಿತಿಗಿಂತ ಉತ್ತಮವಾದ್ದನ್ನು ತರುವಲ್ಲಿ ಏನು ಪ್ರಯತ್ನ ಮಾಡುತ್ತೇವೆ? ಜೊತೆಗೆ ಅದರಲ್ಲಿ ಮಿಕ್ಕವರಿಗಿಂತ ಯಾವ ರೀತಿಯಲ್ಲಿ ಭಿನ್ನ ಎಂಬುದನ್ನು ಹೇಳಬೇಕಲ್ಲವೆ? ಅಷ್ಟು ಮಾತ್ರವಲ್ಲ ಸ್ವತಃ ಆ ಪಕ್ಷಗಳಿಗೇ ಒಂದು ಕಾರ್ಯಸೂಚಿಯ ಮುನ್ನೋಟ ಇರಬೇಕಲ್ಲವೇ? ಇವಾವುವೂ ಇಲ್ಲ ಎಂಬುದೇ ಇಂದಿನ ಕಟು ವಾಸ್ತವ.

ಈ ಎಲ್ಲಾ ಪಕ್ಷಗಳ ಸಂಗತಿ ಹೀಗಿರುವುದರಿಂದಲೇ, ನಾವು-ನೈಜ ಪ್ರಜಾತಂತ್ರವಾದಿಗಳಾಗಿರುವ ಈ ನಾಡಿನ ಜನತೆ- ಈ ಸಂದರ್ಭದಲ್ಲೂ ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಯಾವ ರೀತಿಯ ಸಕ್ರಿಯ ಪಾತ್ರವನ್ನು ವಹಿಸಬೇಕೆಂಬುದನ್ನು ಚಿಂತಿಸಬೇಕಾಗಿದೆ. ಇದುವರೆಗಿನ ಚುನಾವಣೆಗಳಲ್ಲಿ ಬಂದ, ಈ ಚುನಾವಣೆಯಲ್ಲೂ ಬರುವ ವಿವಿಧ ಪಕ್ಷಗಳ ಪ್ರಣಾಳಿಕೆಗಳಲ್ಲಿ ಜನರ ಜನಪ್ರಿಯ ಬೇಡಿಕೆಗಳೆಲ್ಲವನ್ನೂ ತಣಿಸುವ ಆಶ್ವಾಸನೆಗಳ ಸುರಿಮಳೆ ಹೇಗೂ ಇರುತ್ತದೆ. ಆದರೆ ಜನರ ಮುಂದಿರುವ ಸಮಸ್ಯೆಗಳ ಕಾರಣಗಳನ್ನು ಕಂಡುಕೊಳ್ಳುವುದು ಹಾಗೂ ಅದನ್ನು ಬದಲಾಯಿಸಲು ಯಾವ ರೀತಿಯ ನಿರ್ದಿಷ್ಟ ಕ್ರಮಗಳನ್ನು ಕೈಗೊಳ್ಳುತ್ತಾರೆಂಬುದರ ಬಗ್ಗೆ ಅದರಲ್ಲಿ ಏನೂ ಇರುವುದಿಲ್ಲ. ಅಂತಹ ನಿರ್ದಿಷ್ಟ ಕ್ರಮಗಳೇನೂ ಇಲ್ಲದೆ, ಇಷ್ಟು ರೂಪಾಯಿಗೆ ಇಷ್ಟು ಕೆಜಿ ಅಕ್ಕಿ, ಇಷ್ಟು ಲಕ್ಷ ಉದ್ಯೋಗ ಸೃಷ್ಟಿ, ಉಚಿತ ವಿದ್ಯುತ್, ಸಾಲಮನ್ನಾ, ಕಡಿಮೆ ಬಡ್ಡಿದರದ ಸಾಲ ಇಂತಹ ನೂರಾರು ಅಂಶಗಳು ಪ್ರಣಾಳಿಕೆಗಳಲ್ಲಿ ಬಂದು ಹೋಗುತ್ತವೆ. ಸಾಲಮನ್ನಾ ಬಗ್ಗೆ ಘೋಷಣೆ ಇರುತ್ತದೆಯೇ ಹೊರತು, 'ಸಾಲ ಮನ್ನಾ ಪ್ರಶ್ನೆಯೇ ಮುಂದೆ ಬರದಂತೆ ಮಾಡಲು ರೈತರು ಬೆಳೆಯುವ ಎಲ್ಲಾ ಬೆಳೆಗಳಿಗೆ ಬೆಂಬಲ ಬೆಲೆ ಖಾತ್ರಿ ಇರುತ್ತದೆ; ಆ ರೀತಿ ಬೆಂಬಲ ಬೆಲೆ ನೀಡಲು ಇಂತಿಷ್ಟು ಸಾವಿರ ಕೋಟಿಗಳ ನಿಧಿ ಸ್ಥಾಪನೆ ಮಾಡುತ್ತೇವೆ, ಅದಕ್ಕೆ ಹಣಕಾಸನ್ನು ಈ ರೀತಿ ರೂಢಿಸಿಕೊಳ್ಳುತ್ತೇವೆ' ಎಂದು ಯಾರೂ ಹೇಳುವುದಿಲ್ಲ. ಏಕೆಂದರೆ ಮೊದಲನೆಯದಾಗಿ, ಜನರಿಗೆ ಅವರ ತಕ್ಷಣದ ಸಮಸ್ಯೆಗಳನ್ನು ಬಗೆಹರಿಸಲು ಹಣಕಾಸಿನ ರೂಪದ ಪರಿಹಾರ ಕೊಡುವುದು ಜನಪ್ರಿಯತೆಯನ್ನೂ, ಮತವನ್ನೂ ತಂದುಕೊಡುತ್ತದೆ; ಎರಡನೆಯದಾಗಿ ಬೆಂಬಲ ಬೆಲೆಯ ಖಾತ್ರಿ ಇತ್ಯಾದಿಗಳು ಮೂಲಭೂತವಾಗಿ ಜನಪರ ಹಿತಾಸಕ್ತಿಯ ಆಳ್ವಿಕೆಯನ್ನು ಬೇಡುತ್ತವೆ. ಅಂತಹ ಆಳ್ವಿಕೆಯನ್ನು ನೀಡುವುದಿಲ್ಲ ಎಂಬುದರ ಬಗ್ಗೆ ಸ್ವತಃ ಆ ಪಕ್ಷಗಳಿಗೇ ಖಾತ್ರಿಯಿದೆ. ಎಲ್ಲಕ್ಕಿಂತ ಮುಖ್ಯವಾಗಿ ಈ ರೀತಿ ನೀಡಲಾಗುವ ಯಾವುದೇ ಆಶ್ವಾಸನೆಯನ್ನು ಈಡೇರಿಸಬೇಕೆಂಬ ಯೋಜನೆಯೇ ಅವರಿಗಿರುವುದಿಲ್ಲ. ಅದು ಈ ಚುನಾವಣೆಯ ಸಂದರ್ಭದಲ್ಲಿ ಮತ ಪಡೆದು ಅಧಿಕಾರಕ್ಕೆ ಬರಲು ಅಗತ್ಯವಿರುವ ಆಶ್ವಾಸನೆ ಮಾತ್ರ ಆಗಿರುತ್ತದೆ. ಹಾಗಾಗಿ ಜನರ ನಿಜವಾದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವ, ಭವಿಷ್ಯದ ಬಗ್ಗೆ ಮುನ್ನೋಟ ಕೊಡುವ, ಸಮಸ್ಯೆಗಳ ಪರಿಹಾರಕ್ಕೆ ವಾಸ್ತವವಾದೀ ಹಾದಿಗಳನ್ನು ಹುಡುಕುವ ಒಂದು ಪ್ರಣಾಳಿಕೆಯ ಅಗತ್ಯವಿದೆ ಮತ್ತು ಅಂತಹ ಪ್ರಣಾಳಿಕೆಯು ಚುನಾವಣಾ ನಂತರದಲ್ಲಿ ಜಾರಿಗೆ ಬರುವಂತೆ ನೋಡಿಕೊಳ್ಳುವ ಅಗತ್ಯವೂ ಇದೆ. ಈ ಎರಡೂ ಕೆಲಸಗಳನ್ನು ಇಂದು ಹಾಲಿ ಚುನಾವಣಾ ರಾಜಕಾರಣದಲ್ಲಿ ಸಕ್ರಿಯವಾಗಿರುವ ಪ್ರಮುಖ ರಾಜಕೀಯ ಪಕ್ಷಗಳು ಮಾಡುತ್ತಿಲ್ಲ, ಮಾಡುವುದಿಲ್ಲ ಎಂಬುದು ಸ್ಪಷ್ಟ. ಅಂತಹ ಕೆಲಸವನ್ನು ಮಾಡಬೇಕಾದ್ದು ಈ ನಾಡಿನ ಜನತೆಯೇ ಆಗಿದ್ದಾರೆ. ಅಂದರೆ ಜನತೆಯ ಪ್ರಣಾಳಿಕೆಯನ್ನು ಮುಂದಿಡುವುದು ಮತ್ತು ಅಂತಹ ಜನರ ಪ್ರಣಾಳಿಕೆಯು ನಂತರದ ದಿನಗಳಲ್ಲಿ ಜಾರಿಗೆ ಬರುವ ನಿಟ್ಟಿನಲ್ಲಿ ನಿರಂತರವಾದ ಎಚ್ಚರ ಮತ್ತು ಒತ್ತಡವನ್ನು ಕಾಪಾಡಿಕೊಂಡು ಬರುವುದು.

ಹೀಗೆ ಮಾಡುವುದರ ಮೂಲಕ ನಾವು ಇದುವರೆಗೆ ಮೋಸದ ಪ್ರಣಾಳಿಕೆಗಳನ್ನು ಮಾಡಿಕೊಂಡು ಪ್ರಜಾತಂತ್ರವನ್ನು ಅಣಕಿಸುತ್ತಾ ಹಾಗೂ ಅದನ್ನು ಪ್ರತಿನಿತ್ಯ ಹೆಚ್ಚೆಚ್ಚು ಅರ್ಥಹೀನವಾಗಿಸುತ್ತಾ ಬಂದಿರುವ ರಾಜಕೀಯ ಪಕ್ಷಗಳಿಗೆ ಸವಾಲೆಸೆಯೋಣ ಮತ್ತು ಸಕ್ರಿಯ ಪ್ರಜಾಪ್ರಭುತ್ವದ ಒಂದು ಮಾದರಿಯನ್ನು ನಿರೂಪಿಸುತ್ತಾ ಹೋಗೋಣ.

ಡಾ.ವಾಸು ಎಚ್.ವಿ.
ಕರ್ನಾಟಕ ಜನಪರ ವೇದಿಕೆ

# ನ್ಯರೆವರೆಲಿ ನ್ಯಟ್ಟಗಿರಬೇಕು ಅನ್ನದ ಕಲೀಲಿಲ್ಲ ಕಂಡ್ಯ ಅವ್ರು

ಹೊಗೇನಕಲ್ ವೃತ್ತಾಂತ ಕೇಳಿದ ಕಾಳಮಾವ,

"ಆ ಕ್ವಂಗಾಟನನ್ನ ಮಕ್ಕಳಿಗೆ ಯಕ್ಕ್ರುತ್ತಿನ ಮ್ಯಾಲೆ ಮಿದಿಬೇಕು ಕಂಢ" ಎಂದು ಹಲ್ಲು ಕಡಿದ. ಸೀರನ ಬಾಯಲ್ಲಿ ಬರುಬರುದಾದ ಮಾತು ಕಾಳಮಾವನ ಬಾಯಲ್ಲಿ ಬಂದುದಕ್ಕೆ ಅಚ್ಚರಿಗೊಂಡ ಉಗ್ರಿ.

"ನೀನು ಅಂಗೇ ಅಂದುಬುಟ್ಯಾ" ಎಂದ.

## ಬಯಲು ಸೀಮೆಯ ಕಟ್ಟೆ ಪುರಾಣ

■ ಬಿ. ಚಂದ್ರೇಗೌಡ

"ಇನ್ನೇನ್ಲ ಮತ್ತೆ? ಇಂತ ನನಮಕ್ಕಳು ನ್ಯರೆಲಿದ್ರೆ ಯಾವನಾರ ನೆಮ್ಮದಿ ತಗಂಡು ಬಾಳಕ್ಕಾದತೇನ್ಲ? ಅವುನ್ಯಾರೊ ಈರಪ್ಪ ಅನ್ನೊ ಕಾಡಕಪಿ ಬತ್ತು, ದೇವರಂತ ಮನ್ಸ ರಾಜಕುಮಾರನ್ನ ಹೊತಗಂಡೋಯ್ತು, ಬಿಡುಗಡೆಯಾಗಿ ಬಂದ್ರು ರಾಜಕುಮಾರ ಅದೇ ಕ್ವರಗಿನಲ್ಲಿ ತೀರಿಕೊಂಡ. ನ್ಯನಿಸಿಗುಂಡುಬುಟ್ರೆ ಆ ನನ್ನ ಮಗನವ ದಡಿತಗಂಡು ಉಬ್ಬುಲು ಬಡದಂಗೆ ಬಡಿಯನಾ ಅನ್ನಸ್ತದೆ. ಏನು ಮಾಡಿಯೇಳು?"

"ನೀನೇಳದೇನೊ ಸರಿ, ಆದ್ರೆ ವೀರಪ್ಪ ಸಿಕ್ಕಿದ್ದಾಗ ಬುಟ್ಟು ಕಳಿಸಿದೋನು ನಮ್ಮ ರಾಜ್ಯದ ಅಧಿಕಾರಿಯಂತಲ್ಲ ಹೇಳು" ಎಂದ ಉಗ್ರಿ. ಕೂಡಲೇ ಹಲ್ಲು ಕಡಿದ ಸೀರ,

"ಅವುನ್ಯಾರು ತೋರುಸ್ಲ ಹೋಗಿ ಮಕ್ಕುಗುದು ಬತ್ತಿನಿ" ಎಂದ.

"ಅಲ್ಲಾ ಕಂಢ, ಆ ರಾಜಕುಮಾರನ್ನ ನಮ್ಮ ಜನ ಅಂಗೆ ಹೂವು ಮಡಿಗಿದಂಗೆ ಮಡಿಕಂಡು ಪೂಜೆ ಮಾಡಿದ್ರು. ಅಂಥೊನ್ನ ಹೊತಗಂಡೋದಾಗ್ಲೆ ಅವುರಿಗೆ ಬುದ್ಧಿ ಕಲುಸಬೇಕಾಗಿತ್ತು ಕಂಢ."

"ಆ ಟೇಮಲ್ಲಿ ಜಯಲಲ್ತ ಇಲ್ದೆ ಈ ಕರುಣಾನಿಧಿ ಅನ್ನೊನು ಇದ್ರೆ ಅವುನ್ನೆಲ್ಲಿ ಹಿಡಿತಿದ್ರೂ. ಇನ್ನೂ ಆರಾಮಾಗೇ ಇರನು" ಎಂದ ಉಗ್ರಿ.

"ನಿಜವೇನ್ಲ?" ಎಂದಳು ಜುಮ್ಮಿ.

"ಊ ಕಣೆ. ವೀರಪ್ಪನ್ ಕರುಣಾನಿಧಿ ಜ್ವತೆ ಚನ್ನಾಗೇ ಇದ್ನಂತೆ. ಅದ್ಕೆ ಅವುನು ಅಧಿಕಾರದಲ್ಲಿ ಇದ್ದಾಗ ವೀರಪ್ಪ ಯಾರಿಗೂ ಸಿಗಲಿಲ್ಲ" ಎಂದು ಉಗ್ರಿ ಹೇಳುತ್ತಿರುವಾಗ ಕಣ್ಣಯ್ಯನ ಮಗ ಷಣ್ಮುಖ ಹೋಗುತ್ತಿರುವುದು ಕಂಡಿತು. ಕೂಡಲೇ ಜುಮ್ಮಿ,

"ಲೇ ಸಣಮುಖ, ಬಾರ್ಲ ಇಲ್ಲಿ" ಎಂದಳು.

"ಏನು ಚುಮಕ್ಕ?" ಎಂದು ಶಣ್ಮುಖ ನಗುತ್ತ ಬಂದ.

"ಅದ್ಯಾವುದೊ ವಗೆಕಲ್ಲು ನಮ್ದು ಅಂತ ಕುಂತಿದ್ದರಂತೆ ತಮುಳ್ರು. ಅವುಕೇನು ಬಂದದ್ದಾ?"

"ಯಾವ ಯಾಕೆ ಕಲ್ಲು, ಏನಕ್ಕಾ ಅದು?"

"ಹೊಗೇನಕಲ್ ಪಾಲ್ಸ ಉಪಯೋಗಿಸಿಕೊಂಡು ಕರಂಟ್ ತಗಿಯಕ್ಕೆ ಕರುಣಾನಿಧಿ ವಂಟದ್ದನಂತೆ ಕಣೊ" ಎಂದ ಉಗ್ರಿ.



"ಕರಂಟು ತಕಿಲಿ ಬಿಡು ಉಕ್ಕುರಿ. ನಮ್ಮ ಕರ್ನಾಟಕದಲ್ಲಿ ಕರಂಟು ಶಾರಟೇಜು. ಅವರು ತಕಿತ ಕರಂಟನಲ್ಲಿ ನಾವು ಅರ್ಧ ಈಚಕೊಂಡರಾಯ್ತು."

"ತಗಳಪ್ಪ ಈ ನನ್ನ ಮಗನ ಲ್ಯಕ್ಕಚಾರ ಯಂಗದೆ. ಏಟೇ ಆಗ್ಲಿ ಕ್ವಂಗನನ್ನ ಮಗ ತಮುಳ್ರು ಪರ ಮಾತಾಡದೆ ಇನ್ನ್ಯಾರು ಪರ ಮಾತಾಡ್ತನು" ಎಂದ ಉಗ್ರಿ.

"ನೋಡು ಉಕ್ಕುರಿ, ನಾನು ನಮ್ಮಪ್ಪನ ಜೊತೆಯಲ್ಲಿ ಕರ್ನಾಟಕಕ್ಕೆ ಪಂತು ಇರವತ್ತಂಜೆ ವರ್ಸ ಅಚ್ಚೆ ನಿಮ್ಮೂರ ಕೆರೆ ಕಲ ಮಾಡಲು ಪಂತಿದ್ದು ನಾವು. ಆತರೂ ... ತಮಿಳ ತಮಿಳ ಅಂತ ಯಾವಾಗಲು ಹೇಳ್ರಿ ... ತಮಿಳು ಮಾತನಾಟುವ ಕನ್ನಟಕ ತೆರಿಯಿ."

"ಕನ್ನಟಕ, ಆಹಹ ಮರಕುಟಕ ಅನ್ನು ಅತ್ಲಗೆ. ಅಲ್ಲ ... ನ್ಯರೆ ಹ್ವರೆಲಿ ಇರೊ ಜನ ನಾವು ಯಂಗಿರಬೇಕು ಅ... ತಿಳಕಂಡಿಲ್ಲ ಆ ಕ್ವಂಗರು. ಅವುರು ಅಂಗೆ ಮಾಡದಿ... ನಿಮ್ಮಂಥೋರಿಗೆ ಕಷ್ಟ ಕಂಢ."

"ಏನು ಕಸ್ಟ ಉಕ್ಕುರಿ? ವಕ್ಕನೇಕಲ್ಲಕೂ, ನವ... ಎನ್ನ ಸಂಪಂತ? ಆ ಕರುಣಾನಿತಿಗೆ ವಯಚ್ಚಾತು. ... ತೇವೇಕೌಟರು, ಆ ಕರುಣಾನಿತಿ ಒಂದೇ. ಅವನು ... ಮಕ ಸ್ಟಾಲಿನ್ ತಂದು ಮುಖ್ಯಮಂತ್ರಿ ಮಾಡಬ... ಇಲ್ಲಿ ತೇವೇಕೌಟರು ತಮ್ಮ ಮಕನನ್ನು ಪುನ ಮುಖ್ಯ... ಮಾಡಬೇಕು. ಅತಕ್ಕೆ ಅವರು ಏನೇನೊ ಹೇಳಿದರೆ ... ಸೀರಿಯಸ್ಸಾಗಿ ತೆಗೆದುಕೊಳ್ಳಬಾರದು."

"ಅದಪ್ಪ ಮಾತು ಅಂದ್ರೆ. ಲೊ ಸಣಮುಖ ... ಬರೀ ಮಣ್ಣುಮುಕ್ಕ ಅನ್ನಕಂಡಿದ್ದೆ ಕಂಢ ನಾನು. ಪರವ... ರಾಜಕೀಯನು ತಿಳಕಂಡಿದ್ದಿ" ಎಂದುಕೊಂಡು ವ... ಬಂದ.

"ನೋಡು ವಾಟಚ್ಚೆ ವಕನೆ ಕಲ್ಲಿಕೂ. ಕರ್ನಾ... ತಮಿಳರಿಗೂ ಎನ್ನ ಸಂಬಂತಾ?"

"ಇಲ್ಲ ಬುಡು, ಏನೂ ಸಮಂದ ಇಲ್ಲ. ... ಹೊಗೇನಕಲ್ಲಿಗೆ ನಾವೆಲ್ಲಾ ಜಾಥಾ ಹೊಂಟಾಗ ... ಮುಂದಿರಬೇಕು."

"ಈಕಲೆ ರೆಟಿ, ಪತ್ತಿಯಾ."

# ಆಗು ಸುಗುಣಿ ತಿಂದು ಸಗಣಿ!

ಕೈಬೆರಳುಗಳಲ್ಲಿ ಯಾವುದು ಶಕ್ತಿಶಾಲಿ ಎಂದು ಕೇಳಿದರೆ ಹೆಬ್ಬೆರಳು, ತೋರುಬೆರಳು, ಮಧ್ಯದ ಬೆರಳು, ಉಂಗುರ ಬೆರಳು ಎಂದು ವಿಧವಿಧವಾದ ಉತ್ತರಗಳು ಬರಬಹುದು. ಯಾರೂ ಕಿರುಬೆರಳು ಎನ್ನಲಾರರು. ಆದರೆ ನಿಜಕ್ಕೂ ಕಿರುಬೆರಳೇ ಅತ್ಯಂತ ಶಕ್ತಿ ಹಾಗೂ ಪ್ರಭಾವಿ ಎಂಬುದನ್ನು ರಾಹುಲ್ ಗಾಂಧಿ ತೋರಿಸಿದ್ದಾರೆ. ಅವರು 'ಡಿಸ್ಕವರ್ ಇಂಡಿಯಾ' ಯಾತ್ರೆಯಲ್ಲಿದ್ದಾಗ ಹುಣಸೂರಿನ ಬಳಿ ಕೆಲವು ಯುವ ಕಾಂಗ್ರೆಸ್ ಕಾರ್ಯಕರ್ತರು ಅವರೊಡನೆ ಮಾತನಾಡಲು ಬಯಸಿದರಂತೆ. ಅಂಗರಕ್ಷಕ ದಳ ಅನ್ನೋದು ಅವರ ಕೂಗಾಟ ಕಿರುಚಾಟಕ್ಕೆ ಕ್ಯಾರೇ ಅನ್ನಲಿಲ್ಲವಂತೆ. ರಾಹುಲ್‌ರ ಹತ್ತಿರ ಸುಳಿಯಲೂ ಬಿಡಲಿಲ್ಲವಂತೆ. ನಿರಾಶೆಯಿಂದ ಆಕ್ರೋಶಗೊಂಡ ಯುವಕರ ಮನಸ್ಥಿತಿಯನ್ನು ಅರಿತ ಅವರು ತಮ್ಮ ಕೈನ ಕಿರುಬೆರಳನ್ನು ಸ್ವಲ್ಪ ಬಾಗಿಸಿ ಅಂಗರಕ್ಷಕರಿಗೆ ತೋರಿಸಿದರಂತೆ. ಹೆಬ್ಬೆರಳು ತೋರಿಸಿದ್ದರೆ ಕುಡಿಯಲು ನೀರು ಕೇಳುತ್ತಿದ್ದಾರೆ ಎಂದು ವಾಹನದಲ್ಲಿಯೇ ಇದಕ್ಕೆ ಅನುಕೂಲ ಕಲ್ಪಿಸಬಹುದಾಗಿತ್ತು, ತೋರುಬೆರಳು ತೋರಿಸಿದ್ದರೆ ಯಾವುದೋ ಬೇರೆ ಮಾರ್ಗ ಸೂಚಿಸುತ್ತಿದ್ದಾರೆ ಅನ್ನಬಹುದಾಗಿತ್ತು, ಹಾಗೆಯೇ ಬೇರೆ ಯಾವ ಬೆರಳನ್ನು ತೋರಿಸಿದ್ದರೂ ಅವಕ್ಕೆ ಒಂದೊಂದು ಅರ್ಥ ಕಲ್ಪಿಸಿ ವ್ಯವಸ್ಥೆ ಮಾಡಬಹುದಾಗಿತ್ತು, ಆದರೆ ಈ ಇದು ಇದೆಯಲ್ಲ ಅದು ಪ್ರಕೃತಿಯ ಕರೆಗೆ ಸಂಬಂಧಿಸಿದ್ದು. ಅದರ ಒತ್ತಡ ಹೆಚ್ಚಾದಾಗ ಅನುಭವಿಸಬೇಕಾದ ತೊಂದರೆ ಅವರೆಲ್ಲರಿಗೂ ಅರಿವು ಇದ್ದದ್ದೆ. ಅದಕ್ಕೆ ರಾಹುಲ್ ತೆರಳುತ್ತಿರುವ ವಾಹನದಲ್ಲಿ ಅವಕಾಶ ಇರಲಿಲ್ಲ, ಅನ್ಯಥಾ ಮಾರ್ಗ ಇಲ್ಲದೆ ವಾಹನ ನಿಲ್ಲಿಸಿದರಂತೆ. ಈ ರಾಜಕುಮಾರ ವಾಹನದಿಂದ ಇಳಿದವರೇ ನೇರವಾಗಿ ಯುವಕರ ಬಳಿ ತೆರಳಿ ಸಂಭಾಷಣೆಯಲ್ಲಿ ನಿರತರಾದರಂತೆ. ಅಗಾಧ ಜನಸ್ತೋಮದ ನಡುವೆ ಅವರು 'ಬಯಲು ಮೂತ್ರಾಲಯ' ಹೇಗೆ ಬಳಸಬಲ್ಲರು ಎಂಬುದನ್ನು ಕುರಿತು ಈ ಮೂರ್ಖ ಶಿಖಾಮಣಿಗಳು ಎತ್ತು ಈಯಿತು ಎಂದರೆ ಕೊಟ್ಟಿಗೆಗೆ ಕಟ್ಟು ಅನ್ನುವ ಭೂಪರಂತೆ ವರ್ತಿಸಿದ್ದರು. ಅದು ಸರಿ ಹೀಗೆ ಯೋಚಿಸುವ ಶಕ್ತಿ ಇದ್ದಿದ್ದರೆ ಅವರು ಯಾಕೆ 'ಅಂಗರಕ್ಷಕ ಪಡೆ'ಯಲ್ಲಿ ಕೊಳೀತಾ ಬಿದ್ದಿರೋರು. ಬೇರೆ ಯಾವುದಾದರೂ ಉದ್ಯೋಗ ಹುಡುಕಿಕೊಂಡಿರೋರು!

ಇದನ್ನೆಲ್ಲ ಯಾಕೆ ಹೇಳಬೇಕಾಯಿತು ಅಂದರೆ ಈ 'ಮೂತ್ರ' ಅನ್ನುವುದು ಎಷ್ಟು ಪ್ರಭಾವಶಾಲಿ ಅನ್ನೋದಕ್ಕೆ, ಮನುಷ್ಯನ ದೇಹಕ್ಕೆ ಬೇಡವಾದ ಕಲ್ಮಷಗಳನ್ನೆಲ್ಲ ಹೊರಕ್ಕೆ ಹಾಕಲು ಪ್ರಕೃತಿಯ ಚಿಕಿತ್ಸೆಯೇ ಈ ಮೂತ್ರ ವಿಸರ್ಜನೆ. ಇಂತಹ ಮೂತ್ರದಲ್ಲಿಯೂ ಪಾವಿತ್ರತೆಯನ್ನು, ಔಷಧೀಯ ಗುಣಗಳನ್ನು ಕಾಣುವ 'ಮಹಾತ್ಮ'ರು ನಮ್ಮಲ್ಲಿದ್ದಾರೆ! ಮೊರಾರ್ಜಿ ದೇಸಾಯಿಯವರ ದೀರ್ಘ ಆಯುಸ್ಸಿಗೆ ಅವರ ಸ್ವಮೂತ್ರ ಚಿಕಿತ್ಸೆಯೇ ಕಾರಣ ಎಂದು ಹೇಳಲಾಗುತ್ತದೆ. ಆದರೆ ಒಂದು. ಇದನ್ನು ದೊಡ್ಡವರು ಅನ್ನಿಸಿಕೊಂಡವರು ಮಾಡಿದರೆ ಅದಕ್ಕೊಂದು ಘನತೆ ಬರುತ್ತದೆ. ಇತರರು ಈ ಸಾಹಸಕ್ಕೆ ಕೈಹಾಕಿದರೆ... 'ಗುರು' ಸಿನಿಮಾದಲ್ಲಿ ಮನೆಯಿಂದ ಹೊರಕ್ಕೆ ಹಾಕಿಸಿಕೊಂಡ ಕೆಲವರು ಇದಕ್ಕೆ ಕಾರಣ ವಿವರಿಸುತ್ತಾರೆ. ಅವರಲ್ಲಿ ಒಬ್ಬ... ಶ್ರೀಮಂತರಿಗೆ ಸಕ್ಕರೆ ಕಾಯಿಲೆ ಅಲ್ವಾ. ಅದಕ್ಕೆ ಬೆಂಗಳೂರಿನ ಶ್ರೀಮಂತ ಬಡಾವಣೆಯಲ್ಲಿರುವವರೆಲ್ಲರ ಮೂತ್ರ ಸಂಗ್ರಹಿಸಿ ಅದರಿಂದ ಸಕ್ಕರೆ ಉತ್ಪಾದಿಸುವ ಭಯಂಕರ ಯೋಜನೆಯನ್ನು ಹಾಕಿದ್ದನಂತೆ! ಜನ ಇವನ ತಲೆ ಕೆಟ್ಟೋಗಿದೆ ಅನ್ನದೆ ಇನ್ನೇನು ಅಂದಾರು. ಅದಕ್ಕೆ ಹೇಳಿದ್ದು ಸಾಮಾನ್ಯರು ಮೂತ್ರದ ಔಷಧಿಯ ಗುಣ, ಉಪಯುಕ್ತತೆ ಕುರಿತು ಮಾತನಾಡಿದರೆ ಸಕ್ಕರೆ ಉತ್ಪಾದಕನ ತರಹದ ಪಟ್ಟ ಖಾತರಿ.

ಮಾನವ ಮೂತ್ರದ ಉಪಯುಕ್ತತೆ ಕುರಿತು ಇಂತಹ ಅಮೋಘ ಅಭಿಪ್ರಾಯಗಳು ಅಪರೂಪವೇ ಆದರೂ



ಇದೇ ಮಾತನ್ನ 'ಗೋಮೂತ್ರ' ಕುರಿತು ಹೇಳುವಂತಿಲ್ಲ. ಕೆಲವು ಜನತಾಂತ್ರಿಕ ಸರ್ಕಾರಗಳೇ 'ಗೋಮೂತ್ರ'ದಲ್ಲಿ ಔಷಧೀಯ ಗುಣ ಇದೆ ಎಂದು ಸಾರಿವೆ. ಇದರ ಬಗ್ಗೆ ಸಂಶೋಧನೆ ನಡೆಸಲು ಕೋಟ್ಯಂತರ ರೂಪಾಯಿ ಖರ್ಚು ಮಾಡುತ್ತಿವೆ. ಉತ್ತರ ಖಂಡದ ಸರ್ಕಾರ ಗೋಮೂತ್ರವನ್ನು ಸಂಸ್ಕರಿಸಿ ಶೇಖರಿಸಲು ಘೋಷಿಸಿದೆ! ಹಾಲಿನ ಡೈರಿಯಂತೆ 'ಗೋಮೂತ್ರ ಡೈರಿ' ಸ್ಥಾಪಿಸಲಾಗುವುದಂತೆ!

ಬರಲಿದೆ! ಬರಲಿದೆ!  
ಆಹಾ ಬರಲಿದೆ!  
ಮೂತ್ರದ ಡೈರಿ  
ಗೋಮೂತ್ರದ ಡೈರಿ!  
ಬರುವುದು ಮೂತ್ರವು  
ಮನೆ ಬಾಗಿಲಿಗೆ  
ಗಂಜಲವಲ್ಲವದು ಮೂರ್ಖ  
ತಿಳಿ ಪವಿತ್ರ ಮೂತ್ರವು!

ಕಾಯಿಲೆಗಳಿಗೆ ಬೆದರ ಬೇಕಿಲ್ಲ, ಆಸ್ಪತ್ರೆಗಳ ಹಂಗಿಲ್ಲ, ಮೂತ್ರೌಷಧಿ ಕುಡಿದರೆ ಸಾಕು! ಭಾಜಪ ಅಧಿಕಾರಕ್ಕೆ ಬಂದರೆ ಇವೆಲ್ಲ ಸಾಧ್ಯ!

ಕಾಯಿಲೆ ಬಂದವರಿಗೇನೋ ಸಿಕ್ಕಿತು ಮದ್ದು.  
ಆರೋಗ್ಯವಂತರಾಗಿರಲು ಬೇಡವೆ ಆಹಾರ?  
ಹಸಿವಿನಿಂದ ಪ್ರತಿದಿನ ಆರು ಸಾವಿರ ಮಕ್ಕಳೇ  
ಸಾವನ್ನಪ್ಪುತ್ತಿದ್ದಾರಲ್ಲ ಈ ಗೋಪೂಜಾ ಭಾರತದಲ್ಲಿ?  
ಅದಕ್ಕೂ ಇದೆ ಉತ್ತರ!  
ಸಗಣಿಯಲ್ಲವ್ವೋ ಇದು  
ಪೌಷ್ಠಿಕಾಂಶದ ಆಗರ!  
ಆಗು ಸುಗುಣಿ  
ತಿಂದು ಸಗಣಿ!

ಮೂವತ್ತು ಮೂರು ಕೋಟಿ ದೇವತೆಗಳ ಆವಾಸ ಸ್ಥಾನವಾದ ಗೋವಮಾತೆಯಿಂದ ಹೊರಬರುವ ಪ್ರತಿಯೊಂದೂ ಪವಿತ್ರವೆಂದು ತಿಳಿ. ಇವುಗಳ ಸಂರಕ್ಷಣೆಗಾಗಿಯೇ ಆ ದಯಾಮಯನಾದ ಭಗವಂತನು ಸೃಷ್ಟಿಸಿದ ಶ್ರೀರಾಮಚಂದ್ರ ಮಠದ ಸ್ವಾಮಿಗಳು ತಿನ್ನುವುದೇ ಸಗಣಿ! ಕುಡಿಯುವುದೇ ಗಂಜಲ! ಅದಕ್ಕೇ ನೋಡಿ ಹೇಗಿದ್ದಾರೆ ಅವರು. ಮೈಕೈ ತುಂಬಿಕೊಂಡು (ಸಿರಿಯಾಕ್ ಜೋಸೆಫ್ ಅವರ ಕ್ಷಮೆ ಕೋರಿ) ಥೇಟ್ ಗಂಡು ಖುಷ್ಬೂ ತರಹ!

ಇಂತಹ ಬಹು ಉಪಯೋಗಿ ಗೋವನ್ನು ಪೌಷ್ಠಿಕ ಆಹಾರದ ಕೊರತೆ ನೆಪದಿಂದ ಕೊಲ್ಲುವುದು ಸಗಣಿ ತಿನ್ನುವವರಿಗೆ, ಗಂಜಲ ಕುಡಿಯುವವರಿಗೆ ಆಕ್ರೋಶ ತರಿಸುವುದು ನ್ಯಾಯವೇಯ. ರಾಕ್ಷಸೀ ಪ್ರವೃತ್ತಿಯ ಗೋಹಂತಕರಿಗೆ ಶಿಕ್ಷೆ ನೀಡಲಿ ಎಂದು ಸರ್ಕಾರವನ್ನು ಕೋರುತ್ತಾ ಇರುವುದು ಸರಿಯಲ್ಲ. ಮುತಾಲಿಕ್ ಮಹಾಶಯರು ಅಪ್ಪಣೆ ಕೊಡಿಸಿರುವಂತೆ ಅವರನ್ನ ಸಿಕ್ಕಿದ ಕಡೆ ಹೊಡೆಯಬೇಕು; ಸದೆಬಡಿಯಬೇಕು! ಅದಕ್ಕಾಗಿ ಮನೆಮನೆಗೂ ಶಸ್ತ್ರಗಳನ್ನ ಹಂಚಬೇಕು! ಕಾನೂನಿನ ಭಯ ಖಂಡಿತಬೇಡ. ಅದರ ಪರಿಪಾಲಕರೂ ಸಗಣಿ ತಿನ್ನುವರೇ! ಗೋಮೂತ್ರ ಸೇವಕರೇ!

ಸಗಣಿ ತಿನ್ನುವವರಿಗೆ  
ರಕ್ಷೆ!  
ತಿನ್ನಲಾರೆ ಎಂದವಗೆ  
ಶಿಕ್ಷೆ!  
ಇದು ಅವರ ಧೋರಣೆ!

* * * * * * *

ಕೆಲವರಿದ್ದಾರೆ. ಅವರ ತೆರೆದ ಮನಸ್ಸನ್ನು ನ... ಹಂಗೇ ಅವರನ್ನ ತಬ್ಬಿಕೊಂಡು ತಲೇನ ನೆಕ್ಕಬೇಕು ಅನ್ನಿ... ಯಾರವರು? ಎಲ್ಲಿದ್ದಾರೆ ಅನ್ನುವ ಕಾತುರ ಬೇಕಿಲ್ಲ... ಪರಮಾತ್ಮನ ತರಹ ಎಲ್ಲೆಲ್ಲೂ ಇದ್ದಾರೆ.

ಇತ್ತೀಚೆಗೆ ಒಂದು ಜಾಹೀರಾತು ನೋಡಿರಬಹು... ವಿದ್ಯಾವಂತ ಯುವಕ. ಸಮಾಜಸೇವೆ ಮಾಡಬೇಕು ಅ... ಆಸೆ ಪಾಪ. ರಾಜಕೀಯದಲ್ಲಿದ್ದರೆ ಇದಕ್ಕೆ ಸಹ... ಅಂತಾನೋ ಏನೋ ತನ್ನ ಪ್ರವರವೆಲ್ಲ ಒಪ್ಪಿಸಿ ಕೊನೆ... ತಿಳಿಸಿದ್ದ- 'ನನ್ನ ಸೇವೆಯನ್ನು ಬಳಸಿಕೊಳ್ಳುವ ಉ... ಇರುವ ಪಕ್ಷದವರು ಸಂಪರ್ಕಿಸಿ, ಎಂತಹ ಆದ...

## ಅಣ...

■ ಎಚ್.ಎಲ್. ಕೇಶವಮೂ...

ತತ್ವ? ಸಿದ್ಧಾಂತ? ಅದು ಯಾವ ಪಕ್ಷಕ್ಕೆ ಇದೆ ಅ... ಖಾತರಿ ಮೇಲೆ ಹೀಗೆ ನಡೆದುಕೊಂಡಿದ್ದ ಅಂತ ಕಾ...

ಇದು ಎಳಸು ಮನಸ್ಸಿನ ಮಾತಾಯಿತು. ... ಕೆಲವರು ಅನುಭವೀ ಕುಳಗಳಿರ್ತಾವೆ. ಚುನಾವ... ಸಮಯ ನೋಡಿ. ಎಂತೆಂತಹವಕ್ಕೋ ಆನೆ ಬಲ ಬ... ಅನ್ನುವ ಭ್ರಮೆ ಮೂಡಿಬರುತ್ತೆ, 'ನನ್ನನ್ನು ಈ ಪ... ಕಡೆಗಣಿಸಲಾಗಿದೆ. ಇದನ್ನು ಬದ್ದೀನಿ' ಅಂತಾವೆ. ... ವರಿಷ್ಠರು ಕೇಳಲಿ ಬಿಡಲಿ ಸುದ್ದಿ ಮಾಧ್ಯಮದ... ಅಂತಹವರನ್ನ ಬಿಡಲ್ಲ, ಊರಿಗೆಲ್ಲ ಒಂದು ದಾರಿ ... ಮನೆ ಯಡವಟ್ಟಿಗೇ ಒಂದು ದಾರಿ ಅನ್ನೋ ... ದಾರಿಬಿಟ್ಟು ಹೋಗುವವರ ಮೇಲೇ ಯಾವಾ... ಅವರ ಕಣ್ಣು, ಅವರ ಮುಂದೆ ಇವು 'ನನ್ನ ಶ... ಒಪ್ಪಿದರೆ ನಾನು ಪಕ್ಷ ತ್ಯಾಗ ಮಾಡೊಲ್ಲ' ಅಂತ ಬಡ... ಕೊಚ್ಚಿಕೊಳ್ತವೆ.

ಇಂತಹವರನ್ನು ಕಂಡೇ ಇರಬೇಕು, ಒಂದು ... ಕತೆ ಹೀಗಿದೆ:


ಒಬ್ಬ ನಾಯಕ ಅಂದುಕೊಂಡಿದ್ದವನು. ಚುನ... ಸಮಯ ಬಂತು. ಪಕ್ಷದ ವರಿಷ್ಠರನ್ನು ಇಕ್ಕಟ್ಟಿಗೆ ಸಿಕ್ಕಿಸ... ಅಂತ ಮುಖ್ಯಸ್ಥರಿಗೆ ಪತ್ರ ಬರೆದ- 'ನಾನು ... ತ್ಯಜಿಸುತ್ತಿದ್ದೇನೆ.'

ಂಗಿರಬೇಕು ಕಂಡ್ರ, ಸಣಮುಖ. ಆದಿರ್ಲಿ, ಈಗ ನಾನು
ಾಯಿಂಟಿಗೆ ಬತ್ತಿನಿ. ಚುನಾವಣೆ ಅತ್ರ ಬರ್ತಾಯಿದೆ. ಈ ಟೈಮಲ್ಲಿ
ಧಿ ಬ್ಯಾಗೆ ಕೇಳಬಾರದಾಗಿತ್ತು, ಕಿತ್ತುವ್ರನೆ. ಅವ್ರುನಿಗೆ ಅರ್ದ ಡಜನ್
ನಯುಸ್ಟಾಯ್ತೆ ವರತು ಬುದ್ದಿಬರಲಿಲ್ಲ, ಅವ್ರುನೀತರ ಮಾತಾಡದಕೂ
ರ್ನಾಟಕದಲ್ಲಿ ತಮುಳ್ರು ಎಷ್ಟು ಜನವ್ರರೆ, ಅದೇರೀತಿ ತಮುಳನಾಡಲ್ಲಿ
ನವ್ರರೆ ಅಂತ ತಿಳಕಬೇಕಾಗಿತ್ತು, ಅಲವೆ ದ್ಯಡಪ್ಪ?"
ಲ್ಲೆಲ್ಲಿರಕೊಳ್ಳೀಗಿದ್ದವ್ರುಲ. ಅಲ್ಲೆಲ್ಲೊ ಊಟ ಕಡೆ ಒಸಿ ಅವೆ. ಆ ಬಡೆತ್ತವ್ರು
ಬಂದಾಗ ತಮುಳು ಬುಟ್ಟು ಇನ್ನೇನೂ ಮಾತಾಡದಿಲ್ಲ, ಇದಕೇನೇಳ್ತಿ?"
ೋದು ಮತ್ತೆ, ಇದೇ ಸಣಮುಖ ಸೇಲಂಗೋದಾಗ ಅಲ್ಲಿ ತಮುಳು
ಇನ್ನೇನೂ ಮಾತಾಡದಿಲ್ಲ, ಅಲವೇನ್ನ?"
ೋದು ವಾಟಬ್ಬೆ ಮನುಚ್ಛ ಮುಕ್ಯ ಮಾತು ಮುಕ್ಯ ಅಲ್ಲ, ಮನುಚ್ಛರು
ಒಂತು."
ಹ ವಿಶ್ವಮಾನವ ಕಣಪ್ಪ ನೀನು. ಅದ್ಕೆ ಏನೋ ಆ ಶ್ರೀಲಂಕಾದಲ್ಲಿ
ಗಾಯ್ತು ಅಂದ್ರೆ ಗೂಸು ತಿಂತಾಯಿರದು?"
ೋಟು ಉಕ್ಕುರಿ, ವಿಚ್ಯಯ ತಿಳಿದು ಮಾತಾಡಬೇಕು. ಚ್ರೀಲಂಕ
ನೋಡಿದ್ದಿಯಾ? ಅಲ್ಲಿ ಏನೇನು ಕಲಾಟ ಇತೆ ಅಂತ ನಿನಗೆ ಏನು
"
ಹೋಗ್ಲಿ ಸುಂಕಿರ್ಲ ಸಣಮುಖ. ನಾನೇನೊ ಹೇಳಕ್ಕೆ ಅಂತ ವಂಟದ್ದೆ
ಉಗ್ರಿ, ಈ ತಮುಳ್ರಿಗೂ ಕನ್ನಡಿಗರಿಗೂ ಹೊಗನೇಕಲ್ ವಿಷಯದಲ್ಲಿ
ಜಾಸ್ತಿಯಾದಂಗೂ ಕುಮಾರಸ್ವಾಮಿ ಪ್ರಾದೇಶಿಕ ಪಕ್ಷದ ಬಗ್ಗೆ ಮಾತಾಡ್ತನೆ.
ಕ್ಷಣಾ ವೇದಿಕೆ ಜನ ಉಷಾರಾಗಿರಬೇಕು ಕಣೊ ಉಗ್ರಿ."
ಕ್ಷಣಾ ವೇದಿಕೆ ಅಂದ್ರೆ ಅವ್ರುರ್ಯಾರ್ಲ?"
, ಅವತ್ತು ಹಿರಿಸಾಯದಲ್ಲಿ ನೋಡ್ಲಿಲವೇನಕ್ಕ ನೀನು? ಕತ್ತಿಗೆ ಹರಸಣ
ಮುದ ಬಟ್ಟೆ ಸುತ್ತಿಗಂಡು ವೀರಾವೇಶದಲ್ಲಿ ಕುಣಿತಿದ್ರಲ್ಲ, ಅವ್ರುರೆಯಾ."
ರಿಸಾಯಕೆ ಯಾಕೆ ಬಂದ್ರಿದ್ರುವುರು?"
ಬಂದಿರಲಿಲ್ಲ, ಅಲ್ಲೇ ಹುಟಿಗಂಡವ್ರುರೆ. ಸಮಸ್ಯೆ ಇರೊ ಜಾಗದಲ್ಲಿ
ಬುಟ್ಟು ಇಲ್ಯಾಕುಟಿಗಂಡ್ರು, ಅಂತ ನಾನು ದೀಪಾಗಿ ಯೋಚನೆ
ಮಿದ್ದಿನಿ."
!?" ■


ಧ್ಯಕ್ಷ ಇದರಿಂದ ಗಾಬರಿ ಆಗಲಿಲ್ಲವಂತೆ. ಪರಂತು ಮರು ಪತ್ರ
ನಂತೆ.
ಒಂದು ಹಸುಬಾಲದ ಮೇಲೆ ಒಂದು ನೊಣ ಕುಳಿತಿತ್ತು, ಅದು 'ನನ್ನ
ಮನಾನೆ ಕೊಡ್ತಿಲ್ಲವಲ್ಲ, ನಾನು ಹಾರಿ ಹೋಗ್ತೀನಿ' ಅಂತ ಹಸುವಿಗೆ
ಿ. ಅದಕ್ಕೆ ಆ ಹಸು 'ಏನು ನೀನು ಹಾರಿ ಹೋಗ್ತೀನಿ ಅಂದೆಯಾ,
ಇದ್ದದ್ದೇ ಗೊತ್ತಿರಲಿಲ್ಲವಲ್ಲ' ಅಂತಂತೆ!"
ಷ್ಟು ಬರೆದು ತನ್ನ ಸಹಿ ಹಾಕಿ ಅವನಿಗೆ ಕಳುಹಿಸಿದನಂತೆ.
ಈಗ ಪ್ರತಿನಿತ್ಯ ಪಕ್ಷಾಂತರಿಗಳದ್ದೇ ಸುದ್ದಿ. ಆ ಪಕ್ಷ, ಈ ಪಕ್ಷ ಅಂತ ಇಲ್ಲ,
ಲ್ಲಿ ಸಮಾನತೆ!
ಕುಮಾರಸ್ವಾಮಿ ಗೌಡರು 'ನಮ್ಮದು ತತ್ವ ಸಿದ್ಧಾಂತಗಳ ಪಕ್ಷ' ಅಂತ ಬಾರಿ
ಹೇಳ್ತಾರೆ. ರಣಹದ್ದಿನ ತರಹ ಬೇರೆ ಪಕ್ಷದವರನ್ನ ಹಾರಿಸಿಕೊಂಡು
ತ್ತಿದಾರೆ.
ೇಡ
ವರ್ಮಾಂತರ!
ೇಕು
ಪಕ್ಷಾಂತರ!
ದೇ ಭಾಜಪ ಸಿದ್ಧಾಂತನೂ ಕೂಡ ಹೌದಾ!!

*******

ಹೊಗೇನಕಲ್ ವಿವಾದ. ಕನ್ನಡದ ನೆಲ, ಜಲ ರಕ್ಷಣೆ ರಾಜಕಾರಣಿಗಳ
ನಿರ್ಧಾರ. ಚುನಾವಣಾ ಸಮಯ ಹಾಗೆ ಮಾಡುವುದು ಅನಿವಾರ್ಯ!
ಪರ ಸಂಘಟನೆಗಳಿಂದ ಪ್ರತಿಭಟನೆ. ಹೇಗೆ?
ತಮಿಳು ಸಿನಿಮಾ ಪ್ರದರ್ಶಿಸುವ ಸಿನಿಮಾಮಂದಿರಗಳ ಮೇಲೆ ದಾಳಿ!
ತಮಿಳುನಾಡು ಬಸ್‌ಗಳ ಧ್ವಂಸ!
ತಮಿಳು ಸಂಘಗಳ ವಿರುದ್ಧ ವಾಗ್ದಾಳಿ!
ತಮಿಳು ಪತ್ರಿಕೆ, ಚಾನೆಲ್ ಬಂದ್!
ಹೆದ್ದಾರಿ ಬಂದ್!
ಕೊಂದರೆ ಯಾರಿಗೆ?
ಅದರ ಪರಿವೆ ಯಾರಿಗೂ ಇದ್ದಂತಿಲ್ಲ!
ಅಲ್ಲಿಯೂ ಕನ್ನಡಕ್ಕೆ ಇದೇ ರೀತಿಯ ಮರ್ಯಾದೆ! ತಮಿಳುನಾಡಿನ
ವಕೀಲರಿಂದ ಕನ್ನಡಿಗರ ಹೋಟೆಲ್ ಧ್ವಂಸ! ಏನು ನ್ಯಾಯ ಪರ
!!
ಅಷ್ಟಕ್ಕೆ ನಿಲ್ಲಲಿಲ್ಲ, ಕೂಗಿದರು–
ಕೆಜಿಎಫ್ ನಮ್ಮದು; ಚಾಮರಾಜನಗರ ನಮ್ಮದು; ಅಲಸೂರು ನಮ್ಮದು!
ಇದಕ್ಕೆ ಕನ್ನಡಿಗರು ಪ್ರತಿಕ್ರಿಯಿಸಬೇಡವೇ? ಅರ್ಭಟಿಸಿದರು– ಕೊಯಮತ್ತೂರು
ದು; ಊಟಿ ನಮ್ಮದು.... ಹೀಗೆ!
ಕನ್ನಡ ಪರ ಹೋರಾಟಗಾರರಲ್ಲೇ ಬಿರುಕು!
ಯಾಕೆ ಬಿರುಕು ಎಂದರೆ ಬೇಗ ಬಂದ್ ಕರೆ ನೀಡಲು!
ಏಪ್ರಿಲ್ ಹತ್ತರಂದು ಕರ್ನಾಟಕ ಬಂದ್' ಸಾರಿತು ಒಂದು ಬಣ.
ಒಂದು ಬಣ? 'ನಮ್ಮ ಬಂದ್ ತಾರೀಖು ಹೈಜಾಕ್ ಮಾಡಲಾಗಿದೆ'
ು ಅರ್ಭಟಿಸಿತು. ಮತ್ತೊಂದು ದಿನ ಅದರಿಂದ ಬಂದ್ ನಿಗದಿ!
ಪರೀಕ್ಷೆಗಳ ಕಾಲ. ವಿದ್ಯಾರ್ಥಿಗಳಿಗೆ ತೊಂದರೆಯಾಗುವುದಿಲ್ಲವೆ?
ಅದನ್ನು ಯೋಚಿಸಲು ಸಮಯ ಇಲ್ಲ, ಆಗಬೇಡವೆ 'ಜಲ' ರಕ್ಷಣೆ?
ಇದುವೆ ನಮ್ಮ ಭಾಷಾಭಿಮಾನದ ಪರಿ! ■



# ಮರೆಯುವ ಮುನ್ನ



■ಪಿ. ಲಂಕೇಶ್


ಜುಲೈ 1, 1990

## "ಹಿಂದೂ ರಕ್ತ!"

ಭಾರತದ ಅಸಂಖ್ಯ ಸಮಸ್ಯೆಗಳು ಹಾಗೇ ಉಳಿದುಬಂದಿವೆ; ಇವುಗಳಲ್ಲಿ ಎರಡನ್ನು ಸೂಚಿಸುತ್ತೇನೆ. ಉತ್ಪಾದನೆ, ವಿತರಣೆಯೇ ಇಲ್ಲದ ಈ ದೇಶದಲ್ಲಿ ಹೆಚ್ಚುಹೆಚ್ಚು ಜನ ನೆಮ್ಮದಿಯ ರೇಖೆಯೊಳಕ್ಕೆ ಸೇರಿಕೊಳ್ಳಲು ಆಗುತ್ತಿಲ್ಲ, ಇದರಿಂದಾಗಿ ಅಸ್ಪೃಶ್ಯತೆ, ಅನ್ಯಾಯ ಬೆಳೆಯುತ್ತಲೇ ಇದೆ. ನಮ್ಮ ಅನೇಕ ಪತ್ರಿಕೆಗಳ ಭಾಷೆ ನೋಡಿದರೆ ನಗೆ ಬರುತ್ತದೆ. 'ಹರಿಜನನಾದರೂ ಉತ್ತಮ ವ್ಯಕ್ತಿ', 'ಹರಿಜನರಲ್ಲಿ ಹುಟ್ಟಿದ ಪ್ರತಿಭಾವಂತ' ಮುಂತಾದ ಮಾತುಗಳನ್ನು ಬಳಸುತ್ತಾರೆ. ಉತ್ತಮ ವ್ಯಕ್ತಿಯಾಗಿರುವುದಕ್ಕೂ, ಹರಿಜನ ಜಾತಿಗೂ ಯಾವುದೇ ಸಂಬಂಧವಿಲ್ಲ; ಆತನ ಹುಟ್ಟನ್ನು ಹೇಳಿ ಅಳುಕು, ಅವಮಾನ ಉಂಟುಮಾಡುವುದು ಮಾತ್ರ ಈ ಪತ್ರಿಕೆಗಳ ಉದ್ದೇಶ. ಮುಸ್ಲಿಮರ ಬಗ್ಗೆ ಈ ಬಗೆಯ ಅನ್ಯಾಯ ಇದೇ ರೀತಿಯಲ್ಲಿದೆ. ಮೊನ್ನೆ ಒಬ್ಬಳು ಹೆಣ್ಣುಮಗಳು ತನ್ನ ಗೆಳತಿಯನ್ನು ಪರಿಚಯಿಸುತ್ತ 'ಈಕೆ ಮುಸ್ಲಿಂ, ಆದರೆ ತುಂಬ ಒಳ್ಳೇಳು!' ಅಂದಳು. ನಾನು ಗಟ್ಟಿಯಾಗಿ ನಕ್ಕು 'ಹಾಗೆ ಮಾತಾಡಬಾರದು, ಅಂಥ ಭಾವನೆ ಮನಸ್ಸಿಗೂ ಬರಬಾರದು' ಅಂದೆ. ಬಾಯಿತಪ್ಪಿ ಮಾತಾಡಿದ ಹೆಣ್ಣುಮಗಳಿಗೂ ಇದು ಗೊತ್ತಿತ್ತು. ಯಾವುದೇ ಒಕ್ಕಲಿಗರ, ಬ್ರಾಹ್ಮಣರ ಹೆಣ್ಣುಮಗಳಂತಿದ್ದ ಆ ಮುಸ್ಲಿಂ ಹುಡುಗಿ ನಕ್ಕು ಸುಮ್ಮನಾದಳು.

ಈ ಅತಿರೇಕ ಎಲ್ಲಿಯವರೆಗೆ ಹೋಗಿದೆ ಅಂದರೆ ಆರೆಸೆಸ್ ಮನುಷ್ಯನೊಬ್ಬ ತನ್ನ ಮನೆಯವರಿಗೆ ಅಪಘಾತವಾದಾಗ ಬ್ಲಡ್‌ಬ್ಯಾಂಕಿನಲ್ಲಿ 'ಹಿಂದೂ ರಕ್ತ ಕೊಡಿ' ಅಂದ. ಬ್ಯಾಂಕಿನ ನೌಕರನಿಗೆ ರೇಗಿಹೋಯಿತು. 'ಸುಮ್ಮನೆ ಮುಚ್ಚಿಕೊಂಡು ಬ್ಲಡ್‌ಗ್ರೂಪ್‌ಗೆ ಹೊಂದುವ ರಕ್ತ ತಗೊಂಡು ಹೋಗು' ಅಂದ. ಇದು ರಾಜಕೀಯದಲ್ಲಿ ಯಾವ ರೂಪ ಪಡೆಯುತ್ತಿದೆ ಎಂಬುದು ನಿಮಗೆ ಗೊತ್ತು. ನೀವು ಜಾತ್ಯತೀತ, ನಿಷ್ಠುರದ ಮಾತಾಡಿದರೆ, ಚೆಡ್ಡಿ ಮತ್ತು ಬಿಜೆಪಿಗಳನ್ನು ಟೀಕಿಸಿದರೆ 'ನಿನ್ನಲ್ಲಿ ಇರೋದು ಹಿಂದೂ ರಕ್ತ ಅಲ್ವ?' ಎಂದು ಕೇಳುತ್ತಾರೆ. ಮೊನ್ನೆ ಇಂಥ ಪ್ರಶ್ನೆಯನ್ನು ನಮ್ಮ ಕೋಲಾರದ ವರದಿಗಾರ ಸಿ.ಎಸ್.ದ್ವಾರಕಾನಾಥ್‌ಗೆ ಕೇಳಿದರು. ದ್ವಾರಕಾನಾಥ್ ರೇಗಿ ಹೇಳಿದರು, 'ಮೂರ್ಖ. ನಿನ್ನಲ್ಲಿರೋ ರಕ್ತ ಪರೀಕ್ಷಿಸಿ ನಿನ್ನ ಅಪ್ಪನಿಗೆ ತೋರಿದರೆ ನಿನಗೆ ಗೊತ್ತಾಗುತ್ತೆ. ನಿನ್ನಂಥ ಕತ್ತೆಯಲ್ಲಿ ಮನುಷ್ಯನ ರಕ್ತ ಇರೋಕೆ ಸಾಧ್ಯವಿಲ್ಲ.'

## ಮತ್ತೆ ರಕ್ತ ಕುರಿತು



ಹೋದಸಲ ರಕ್ತದ ಬಗ್ಗೆ ಬರೆದಿದ್ದೆ. ನಿನ್ನಲ್ಲಿರುವುದು ಹಿಂದೂ ರಕ್ತವಲ್ಲವೇ? ಎಂದು ಕೇಳುವವರಿಗೆ ಉತ್ತರಿಸಲು ಯತ್ನಿಸಿದ್ದೆ. ಅದನ್ನು ಬರೆದಾದ ಮೇಲೆ ಮಂಡ್ಯದ ಹೊನ್ನಯ್ಯ ಸಿಕ್ಕರು; ಈತ ಮಂಡ್ಯದ ಪುರಸಭೆಗೆ ಅಧ್ಯಕ್ಷರಾಗಿದ್ದವರು, ಸರಳ ವ್ಯಕ್ತಿ. ಈತ ತಮ್ಮ ದಲಿತ ಬದುಕಿನ ಹೋರಾಟಗಳ ಬಗ್ಗೆ ಹೇಳುತ್ತಾ ರಕ್ತಕ್ಕೆ ಸಂಬಂಧಿಸಿದ ಒಂದು ಪ್ರಸಂಗ ಹೇಳಿದರು. ಒಮ್ಮೆ ಇವರು ಕೆಲವು ಸವರ್ಣೀಯರೊಂದಿಗೆ ಸೇರಿಕೊಂಡು ಹರಿಜನರ ಪರವಾಗಿ ಒಂದು ಮೆರವಣಿಗೆ ಹೊರಡಿಸಿದರು. ಇವರನ್ನು ನೋಡಿದ ಮೇಲುಜಾತಿಯ ಹೆಣ್ಣುಮಗಳೊಬ್ಬಳು ತಾತ್ಸಾರದಿಂದ, "ಹೊಲೇರನ್ನ ಉತ್ತಮರನ್ನಾಗಿ ಮಾಡ್ತೀರೋ? ಎಮ್ಮೆಯನ್ನು ಆಕಳು ಮಾಡಿ ನೋಡೋಣ" ಅಂದಳು. ಆಗ ಮೆರವಣಿಗೆಯಲ್ಲಿದ್ದ ಮಹಿಳಾ ವೈದ್ಯರೊಬ್ಬರು ಹೇಳಿದರು,"ನೀನು ಎಲ್ಲ ತಿಳಿದವಳಂತೆ ಮಾತಾಡುವುದು ಸರಿಯೇನಮ್ಮ? ನಿನ್ನ ಗಂಡನಿಗೆ ಅಪಘಾತವಾದರೆ ಆತನಿಗೆ ಕೊಡಲು ರಕ್ತಬೇಕಾಗುತ್ತದೆ ಅಂತಿಟ್ಟುಕೋ, ನಿನ್ನ ಗಂಡನಿಗೆ ಸರಿಹೋಗುವ ರಕ್ತ ನಿನ್ನದಲ್ಲದಿರಬಹುದು. ನಿನ್ನ ಮಕ್ಕಳು, ಜಾತಿಯ ಯಾರ ರಕ್ತವೂ ಸರಿಹೋಗದಿರಬಹುದು. ಒಬ್ಬ ಹರಿಜನ ಹುಡುಗನ ರಕ್ತ, ಕೊರಚರ ಮನುಷ್ಯನ ರಕ್ತ ಸರಿಹೋಗಬಹುದು. ಇದು ಏನನ್ನು ತೋರುತ್ತೆ? ಮನುಷ್ಯರಲ್ಲಿ ಎಮ್ಮೆ, ಆಕಳುಗಳಿರುವುದಿಲ್ಲ; ಮನುಷ್ಯರೆಲ್ಲ ಒಂದೇ, ಈಗ ಏನು ಹೇಳುತ್ತೀ?"

ಆ ಹೆಣ್ಣುಮಗಳು ವಿಸ್ಮಯದಿಂದ ನಿಂತಳು.

ಆಹಾ ಹಂದಿಗೂ ಬದನೆಕಾಯಿಗೂ ಮದುವೆಯಂತೆ
ಲ್ಯಾಬಿನಲ್ಲಿ ಟ್ಯೂಬಿನೊಳಗೆ ಸೋಬನವಂತೆ ॥ ಆಹಾ ॥


ಮಾನ್ಸಾಂಟೋದ ಗೆಸ್ಟೌಸಲ್ಲಿ ಎಂಗೇಜ್ಮೆಂಟಂತೆ
ಕಾರ್ಗಿಲ್ ಕಂಪನಿ ಕಾರಿಡಾರಲ್ಲಿ ಮುಹೂರ್ತವಿದೆಯಂತೆ
ಡಬ್ಲ್ಯೂಟಿಓ ಪುರೋಹಿತರಿಂದ ಮಂತ್ರಘೋಷವಂತೆ
ಅಮೆರಿಕಾದ ವೈಟೌಸಲ್ಲಿ ಹನಿಮೂನು ಅಂತೆ ॥ ಆಹಾ ॥

ಐಟಿ ಬಿಟಿ ಸಂಗೀತ ನೃತ್ಯ ಶುರುವಾಗಿದೆಯಂತೆ
ಜಿಎಮ್ ಜಿಎಮ್ ಎಂಬಾನಾದ ಕೇಳಿಸುತ್ತಿದೆಯಂತೆ
ವಿಜ್ಞಾನಿಗಳು ಮೇರೆ ಮೀರಿ ಹೋಗ್ಯಾರಂತೆ
ಸೃಷ್ಟಿಯನ್ನೇ ಗೆಲ್ಲುತ್ತೀವಿ ಅನ್ತಿದ್ದಾರಂತೆ ॥ ಆಹಾ ॥

ಹಂದಿಯ ದೇಹದ ಜೀವದ ತಂತು ತೆಗೆದಿದ್ದಾರಂತೆ
ಬದನೆಕಾಯಿಯ ಜೀವದ ತಂತಿಗೆ ಸೇರ್ಸಿದ್ದಾರಂತೆ
ಮದುವೆಯೆಂದರೆ ಮದುವೆಯಲ್ಲ ಅಗ್ರಿಮೆಂಟಂತೆ
ಹುಟ್ಟುವ ಮಕ್ಕಳಿಗೆಲ್ಲಾ ಪೇಟೆಂಟ್ ಕೊಡಲೇ ಬೇಕಂತೆ ॥ಆಹಾ॥

ಅಂತೆಕಂತೆ ಸುದ್ದಿಯಲ್ಲ ನಿಜದಲು ನಿಜವಂತೆ
ಮೆಣಸಿನಕಾಯಿ ಟೊಮೇಟೋಗಳಿಗೂ ಇದುವೇ ಗತಿಯಂತೆ
ಹೀಗಾದ್ರೇಗೆ ಎಂಬುವುದೀಗ ಎಲ್ಲಾರಿಗೂ ಚಿಂತೆ
ಹೇಳಿಕೇಳಿ ತಿಳ್ದೋರ್ ನೀವು ನಿಮಗಿಲ್ವಾ ಚಿಂತೆ ॥ ಆಹಾ ॥

## ಜಿ.ಎಮ್... ಜಿ.ಎಮ್...




■ಜನಾರ್ದನ ಕೆಸರಗದ್ದೆ

# ಹವ್ಯಕರ ಜಾತಿ ಶ್ರೇಷ್ಠತೆಯ ವ್ಯಸನ

*ಮಲೆನಾಡಿನ ಬರಹಗಾರ ದಂಪತಿಗಳಾದ ಪ್ರಮೀಳಾ ಚೊಕ್ಕಾಡಿ ಹಾಗೂ ಅರವಿಂದ ಚೊಕ್ಕಾಡಿಯವರು ಹವ್ಯಕ ಮಹಾಸಭಾದವರಿಂದ ಇತ್ತೀಚೆಗೆ ಅನುಭವಿಸಿದ ಕಿರಿಕಿರಿಯ ಘಟನೆ ಇದು.*

*ಅರವಿಂದ ಹವ್ಯಕ ಬ್ರಾಹ್ಮಣರಾಗಿ ಹುಟ್ಟಿದ್ದರೆ ಪ್ರಮೀಳಾ ಗೌಡ ಜನಾಂಗದ ಹಿನ್ನೆಲೆಯವರು. ಆದರೆ ಜಾತಿ ಚೌಕಟ್ಟಿನಾಚೆ ಬಂದು ಘನತೆಯುಳ್ಳ ಮನುಷ್ಯರಾಗಿ ಮಾತ್ರ ಗುರುತಿಸಿಕೊಳ್ಳಬಯಸುವ ಈ ದಂಪತಿಗಳಿಗೆ ಹವ್ಯಕ ಜಾತಿ ಶ್ರೇಷ್ಠತೆಯ ವ್ಯಸನಿಗಳು ಹ್ಯೂಮಿಲಿಯೇಟ್ ಮಾಡಿದ ಬಗ್ಗೆ ಹಾಗೂ ಅದನ್ನು ಚೊಕ್ಕಾಡಿ ದಂಪತಿಗಳು ಪ್ರತಿಭಟಿಸಿದ್ದರ ಕುರಿತ ವಿವರಗಳು ಇಲ್ಲಿವೆ.*

ಮೂರ್‍ನಾಲ್ಕು ವರ್ಷಗಳ ಹಿಂದೆ ಹವ್ಯಕ ಅಧ್ಯಯನ ಕೇಂದ್ರದ ಆಧ್ವರ್ಯ ಶ್ರೀಯುತ ನಾರಾಯಣ ಶಾನುಭಾಗರು ಹವ್ಯಕ ಮಹಿಳೆಯರ ಸಾಹಿತ್ಯಿಕ ಸಾಧನೆಗಳನ್ನು ದಾಖಲಿಸುವ ಉದ್ದೇಶದಿಂದ, ನನ್ನ ಸಾಹಿತ್ಯಿಕ ವಿವರಗಳನ್ನು ಕೋರಿ ಪತ್ರ ಬರೆದಿದ್ದರು. ನಾನದಕ್ಕೆ ಅಸಮ್ಮತಿ ಸೂಚಿಸಿ ಉತ್ತರಿಸಿದ್ದೆ. ಕಾರಣ ಇಷ್ಟೇ- ನಮ್ಮ ಪಾಡಿಗೆ ನಾವು ಬರೆದರೆ ಯಾವುದೋ ಜಾತಿ ಸಂಘಟನೆಯೊಂದು ಅದನ್ನು ತಮ್ಮ ಸಮುದಾಯದವರ ಸಾಹಿತ್ಯಿಕ ಸಾಧನೆಗಳ ಪಟ್ಟಿಗೆ ಬಳಸಿಕೊಳ್ಳುವುದು ನನಗೆ ಬೇಕಿರಲಿಲ್ಲ, ಬರಹಗಾರರನ್ನು ಜಾತೀಯ ಚೌಕಟ್ಟಿನೊಳಗೆ ಸೇರಿಸುವುದು ಸರಿಯಲ್ಲವೆಂಬುದು ನನ್ನ ಅಭಿಪ್ರಾಯ. ಆದರೆ ಶ್ರೀಯುತರು ಮತ್ತೆ ಮತ್ತೆ ಒತ್ತಾಯಿಸಿ ಫಾರ್ಮ್ ಕಳುಹಿಸಿಕೊಟ್ಟಿದ್ದರು. ಏನೋ ಕೇಳುತ್ತಿದ್ದಾರೆ, ವಿವರ ಕಳುಹಿಸಿಕೊಟ್ಟ ಮಾತ್ರಕ್ಕೆ ಆಗೋ ನಷ್ಟವಾದರೂ ಏನಿದೆ ಅಂತ ವೈಯಕ್ತಿಕ/ ಸಾಹಿತ್ಯಿಕ ವಿವರಗಳನ್ನು ಬರೆದು ಫಾರ್ಮ್ ತುಂಬಿಸಿ ಕಳುಹಿಸಿಕೊಟ್ಟಿದ್ದೆ. ಈಗ್ಗೆ ಒಂದು ತಿಂಗಳ ಹಿಂದೆ ಹವ್ಯಕ ಅಧ್ಯಯನ ಕೇಂದ್ರದವರ 'ಹವ್ಯಕ ಮಹಿಳಾ ಸಾಹಿತ್ಯ ದರ್ಶಿನಿ' ಎನ್ನುವ ಹೊತ್ತಿಗೆ ಕೈಸೇರಿದೆ. ಅದರಲ್ಲಿ ನನ್ನ ತಂದೆಯವರ ಹೆಸರು 'ಬಾಬು ಗೌಡ' ಎಂಬಲ್ಲಿ 'ಬಾಬುರಾವ್' ಎಂದು ನಮೂದಿತವಾಗಿದೆ. ಇದು ಖಂಡಿತವಾಗಿಯೂ ಮುದ್ರಣ ದೋಷವಲ್ಲ. ಮುದ್ರಣದೋಷವಾಗಿದ್ದರೆ ಸರ್‌ನೇಮ್ ಇರುವಲ್ಲಿ ಮಾತ್ರ ತಪ್ಪಾಗಲಾರದು. ಇಷ್ಟರ ಮಟ್ಟಿಗೆ ಜಾತಿವ್ಯಾಧಿ ಹಿಡಿಸಿಕೊಂಡವರು ನನ್ನನ್ನು ತಮ್ಮ ಸಮುದಾಯದ ಮಹಿಳಾ ಸಾಹಿತಿಗಳ ಪಟ್ಟಿಯಲ್ಲಿ ಯಾಕೆ ಸೇರಿಸಿಕೊಳ್ಳಬೇಕಿತ್ತೊ? ಇದರ ಬಗ್ಗೆ ಪ್ರತಿಭಟಿಸಿ ನಾವು ಬರೆದ ಪತ್ರಕ್ಕೆ ಶ್ರೀಯುತ ಶಾನುಭಾಗರು ಯಾವ ಸೂಕ್ತ ಪ್ರತಿಕ್ರಿಯೆಯನ್ನು ನೀಡಿಲ್ಲ. ಈ ರೀತಿಯ ಬದಲಾವಣೆ ಮಾಡಿರುವ ವಿಚಾರವೇನಾದರೂ ನಮ್ಮ ತಂದೆಯವರ ಗಮನಕ್ಕೆ ಬಂದರೆ ಅವರಿಗೆ ನೋವಾಗದೇ ಇರಲಾರದು. ತಮ್ಮ ಸಮುದಾಯದವರನ್ನು ದಾಖಲಿಸುವ ಭರದಲ್ಲಿ ಇನ್ನೊಂದು ಸಮುದಾಯದವರನ್ನು ಅನಾಮಧೇಯರನ್ನಾಗಿಸುವ ಈ ಹುನ್ನಾರ ಒಂದು ರೀತಿಯ ಕ್ರೌರ್ಯವೂ ಹೌದಲ್ಲವೇ?

> 65. ಪ್ರತಿಭಾ ಸುರೇಶ: (ಜನನ: 9-1-1977) ಎಂ.ಎ.(ಕನ್ನಡ) ಪದವೀಧರೆ. (ಇಂಗ್ಲೀಷ) ಕುಮಟಾದ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಉಪನ್ಯಾಸಕಿ. ನಿಯತ ಕಾಲಿಕಗಳಲ್ಲಿ ಸುಮಾರು 50 ಕಾದಂಬರಿ, 100 ಕಥೆ, 150 ಕವನಗಳು ಪ್ರಕಟವಾಗಿವೆ. ತಂದೆ ನಾರಾಯಣ ಭಟ್ಟ ಕೂಜಳ್ಳಿ, ಕುಮಟಾ. ತಾಯಿ ಶರಾವತಿ, ಪತಿ ಸುರೇಶ ಹೆಗಡೆ ಹರನೀರು ಕುಮಟಾ.
> 1. ಅಮೃತಧಾರೆ – ಕಾದಂಬರಿ 2007/158
> 2. ದೂರದ ತಪ್ಪು – ಕಾದಂಬರಿ 2007/127
> 3. ಸ್ವಪ್ನ – ಕಾದಂಬರಿ 2005/214
>
> 66. ಪ್ರಮೀಳಾ ಚೊಕ್ಕಾಡಿ : (ಜನನ : ) ಎಂ.ಎ. ಪದವೀಧರೆ. ಗೃಹಿಣಿ ತಂದೆ ಬಾಬುರಾವ್, ಕುಕ್ಕುಜಡ್ಕ ಸುಳ್ಯ, ತಾಯಿ ಚಿನ್ನಮ್ಮ ಪತಿ ಅರವಿಂದ ಚೊಕ್ಕಾಡಿ, ಸಾಹಿತಿ.
> 1. ಗತಿಚಿತ್ರ – ಕವನ ಸಂಕಲನ 2003/44
>
> 67. ಪ್ರಮೀಳಾ ತೋಟ್ಟತ್ತೋಡಿ : (ಜನನ : 23-5-1974) ಬಿ.ಕಾಂ. ಪದವೀಧರೆ. ಗೃಹಿಣಿ. ತಂದೆ ಟಿ.ಎನ್. ಕೇಶವ ಭಟ್ಟ, ತಾಯಿ ಪ್ರೇಮ, ಪತಿ ಸಿ.ಎಚ್. ಶ್ರೀಕೃಷ್ಣ ಭಟ್ಟ ಪೆರಡಾಲ.
> 1. ಹಾಡುವ ಹಕ್ಕಿ – ಕವನ ಸಂಕಲನ (ಕಿರಿಯ ರಶ್ಮಿ ಜೊತೆ)

-ಪ್ರಮೀಳಾ ಚೊಕ್ಕಾಡಿ, ಮೂಡುಬಿದಿರೆ

*ಪ್ರಮೀಳಾರವರು ಈ ಪತ್ರವನ್ನು ನಮಗೆ ಕಳುಹಿಸಿದ ಮರುದಿನವೇ ಅವರಿಗೆ ಶಾನಭಾಗರಿಂದ ಉತ್ತರ ಬಂದಿದೆ. ಅದರ ಸಾರಾಂಶ ಹೀಗಿದೆ.*

ಮಾನ್ಯ ಶ್ರೀಮತಿ ಪ್ರಮೀಳಾ ಚೊಕ್ಕಾಡಿ ಮತ್ತು ಶ್ರೀ ಅರವಿಂದ ಚೊಕ್ಕಾಡಿಯವರಿಗೆ ಸಾದರ ವಂದನೆಗಳು.

ಕಣ್ತಪ್ಪಿನಿಂದಾಗಿ ಮುದ್ರಣದೋಷಗಳು ಉಳಿಯುವುದು ಸಹಜ. ಅವುಗಳಲ್ಲಿ ಕೆಲವು ಅಕ್ಷಮ್ಯವೆನಿಸುವಷ್ಟು ಗಂಭೀರವೂ ಆಗಿರುತ್ತದೆ ಎಂಬುದಕ್ಕೆ ಕೆಲವು ನಿದರ್ಶನಗಳು ದೊರಕುತ್ತವೆ. ಅವು ಉದ್ದೇಶಪೂರ್ವಕ ತಪ್ಪುಗಳು ಎನ್ನುವುದು ಸಮಂಜಸವೇ ಎನ್ನುವುದು ಪರಿಶೀಲನೀಯ.

ತಿದ್ದುಪಡಿ ಕಳುಹಿಸುವ ಸಲುವಾಗಿ, ಪ್ರಸಕ್ತ ಕೃತಿಯಲ್ಲಿ ನುಸುಳಿದ ತಪ್ಪುಗಳನ್ನು ಪಟ್ಟಿಮಾಡಲಾಗುತ್ತಿದೆ. ಗಂಭೀರ ಎನಿಸುವ ತಪ್ಪುಗಳು ಹೀಗಿವೆ.

| ಪುಟ | ಪ್ಯಾರಾ | ಸಾಲು | ತಪ್ಪು | ಸರಿ |
|---|---|---|---|---|
| 13 | 15 | 5 | south canara | cookery book ಎಂದಾಗಬೇಕು |
| 14 | 21 | 4 | 1866 | 1886 |
| 17 | 40 | 3 | ನೇರ್ಲದ್ಕ | ನೀಲೇಕಣಿ |
| 26 | 66 | 2 | ಬಾಬುರಾವ್ | ಬಾಬುಗೌಡ |
| 58 | 11 | 1 | ಎಂ.ಪಿ.. ಮಾಲತಿ | ಎ.ಪಿ. ಮಾಲತಿ |
| 59 | 28 | 1 | ಗಣಪತಿ ಹೆಗಡೆ | ಗಣಪಿ ಗಣಪತಿ ಹೆಗಡೆ |

ಮೇಲಿನ ತಪ್ಪುಗಳನ್ನು ತೋರಿಸಿದವರಿಗೆ ಕೃತಜ್ಞತೆಗಳು. ತಪ್ಪಿಗಾಗಿ ಕ್ಷಮೆ ಕೋರುತ್ತೇನೆ. ತಪ್ಪುಗಳಾವವೂ ಉದ್ದೇಶಪೂರ್ವಕವಲ್ಲ, ಹವ್ಯಕೇತರ ಸ್ತ್ರೀ, ಹವ್ಯಕ ಗೃಹಿಣಿಯಾದಾಗ ಅವಳ ತಂದೆ, ತಾಯಿಗಳ ಹೆಸರನ್ನು ಬಚ್ಚಿಡಲು / ಬದಲಾಯಿಸಲು ಪ್ರಯತ್ನಿಸಿಲ್ಲ, ಅದು ಸಾಧುವಲ್ಲ ಎಂಬ ಅರಿವಿದೆ.

ಮೇಲಿನ ಪ್ಯಾರಾದಲ್ಲಿ ಸೂಚಿಸಿದ ವ್ಯಕ್ತಿಗಳಲ್ಲಿ ಕೆಲವರ ಪರಿಚಯವಿರುವ ಖ್ಯಾತ ಸಾಹಿತಿಯೊಬ್ಬರು ಅವರನ್ನು 'ಹವ್ಯಕ' ಎಂದು ದಾಖಲಿಸಿರುವುದರ ಬಗ್ಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಅವರಿಗೆ ಸೂಕ್ತವಾಗಿ ಉತ್ತರಿಸಲಾಗಿದೆ.

ಚಿಂತನಶೀಲ, ಪ್ರಗತಿಪರ, ವಿಚಾರಪರರಾದ ತಮ್ಮಿಬ್ಬರ ಸಾಹಿತ್ಯ ಪ್ರತಿಭೆಯನ್ನು ತುಂಬಾ ಗೌರವಿಸುತ್ತೇನೆ. ತಮ್ಮಿಬ್ಬರಿಗೂ ಅಭ್ಯುದಯವಿರಲಿ ಎಂದು ಹಾರೈಸುತ್ತೇನೆ.

ವಿಶ್ವಾಸದಿಂದ

ನಾರಾಯಣ ಶಾನಭಾಗ

*ಈ ಪತ್ರಕ್ಕೆ ಚೊಕ್ಕಾಡಿ ದಂಪತಿಗಳ ಪ್ರತಿಕ್ರಿಯೆ ಹೀಗಿದೆ.*


ಹವ್ಯಕ ಅಧ್ಯಯನ ಕೇಂದ್ರದ ಉತ್ತರವು ನಮಗೆ ಸಮಂಜಸವೆಂದು ತೋರುತ್ತಿಲ್ಲ. ಕಣ್ತಪ್ಪಿನಿಂದಾದ ದೋಷ ಎಂದು ಸಮರ್ಥಿಸಿಕೊಂಡು ಹಲವಾರು ಉದಾಹರಣೆಗಳನ್ನು ನೀಡಿರುತ್ತಾರೆ. ಅವರೇ ನೀಡಿರುವ ಉದಾಹರಣೆಯಂತೆ 'ಎ.ಪಿ.ಮಾಲತಿ'ಯು 'ಎಂ.ಪಿ. ಮಾಲತಿ' ಎಂದಾಗುವುದು, 'ಗಣಪತಿ ಹೆಗಡೆ'ಯು 'ಗಣಪಿಗಣಪತಿ ಹೆಗಡೆ' ಎಂದಾಗುವುದೆಲ್ಲ ಸಹಜ. ಆದರೆ 'ಗೌಡ' ಇದ್ದದ್ದು 'ರಾವ್' ಆಗುವುದು ಅಸಹಜ. ಯಾಕೆಂದರೆ ಯಾವ ಟೈಪಿಸ್ಟೂ 'ಜಿ'ಯನ್ನು 'ಆರ್' ಎಂದು ಟೈಪ್ ಮಾಡಲು ಸಾಧ್ಯವಿಲ್ಲ, ಅಂತಹ ಟೈಪಿಸ್ಟ್ ಟೈಪ್ ಮಾಡಿದ್ದರೆ ಇಡೀ ಪುಸ್ತಕವೇ ದಿಕ್ಕೆಟ್ಟು ಹೋಗಬೇಕಾಗಿತ್ತು. ಸಮುದಾಯದ ಐಡೆಂಟಿಟಿಯನ್ನು ಬದಲಾಯಿಸಿದ್ದಕ್ಕೆ ಇಂತಹ ಸಮರ್ಥನೆಗಳನ್ನೆಲ್ಲ ಕೊಡುವುದು 'ಹಿಟ್ಟು ಗಟ್ಟಿಯಾದರೆ ರೊಟ್ಟಿ, ತೆಳುವಾದರೆ ದೋಸೆ' ಎಂಬ ವಾದವಾಗುತ್ತದೆ. ಅಲ್ಲದೆ ಪತ್ರದಲ್ಲಿ ಹವ್ಯಕರಲ್ಲದ ಕೆಲವರನ್ನು ದಾಖಲಿಸಿರುವ ಬಗ್ಗೆ ಹವ್ಯಕ ವಿದ್ವಾಂಸರೊಬ್ಬರು ಆಕ್ಷೇಪಿಸಿದ್ದಾರೆ; ಆದರೂ ನಾವು ಸೇರಿಸಿಕೊಂಡಿದ್ದೇವೆ ಎನ್ನುವ ಮೂಲಕ ನಮಗೇನೂ ಭಾರೀ ಉಪಕಾರ ಮಾಡಿದ್ದಾರೆ ಎನ್ನುವಂತಹ ಉಲ್ಲೇಖವಿದೆ. ನಮ್ಮನ್ನು ಅವರೊಂದಿಗೆ ಸೇರಿಸಿಕೊಂಡು ನಮಗೇನೂ ಆಗಬೇಕಾಗಿಲ್ಲ. ನಮ್ಮ ಪಾಡಿಗೆ ನಮ್ಮನ್ನು ಬಿಟ್ಟರೆ ಸಾಕು.

ಬಹುಸಮುದಾಯಗಳಿರುವ ಈ ನಾಡಿನಲ್ಲಿ ಸಾಂಸ್ಕೃತಿಕ-ಸಾಮಾಜಿಕ ಸೂಕ್ಷ್ಮತೆಯನ್ನು ಹೊಂದಿರುವ ಒಂದು ವಿಚಾರವು ಸಾರ್ವಜನಿಕ ಚರ್ಚೆಗೆ ಒಳಗಾಗಲಿ ಎಂಬ ಉದ್ದೇಶದಿಂದ ಈ ಪತ್ರಗಳನ್ನು ಕಳುಹಿಸುತ್ತಿದ್ದೇವೆ.

ಇಂತು

ಅರವಿಂದ ಚೊಕ್ಕಾಡಿ.

ಪ್ರಮೀಳಾ ಚೊಕ್ಕಾಡಿ




# ಪುರುಷನ ದೌರ್ಬಲ್ಯಕ್ಕೆ ಮಹಿಳೆಯ ಬಂಧನ

ಏಪ್ರಿಲ್ 2ರ ಸಂಚಿಕೆಯ 'ಕಂಡಹಾಗೆ'ಯಲ್ಲಿ ನ್ಯಾಯಾಧೀಶರುಗಳಾದ ಮಾನ್ಯ ಎಸ್.ಆರ್. ನಾಯಕ್ ಮತ್ತು ಶ್ರೀಯುತ ಸಿರಿಯಾಕ್ ಜೋಸೆಫ್ ಅವರುಗಳ ಹೇಳಿಕೆಗಳನ್ನು ಎತ್ತಿಕೊಂಡಿದ್ದೀರಿ. ಅವರಿಗೆ ಆ ಸ್ವಾತಂತ್ರ್ಯವಿದೆ! ಅದನ್ನು ಸ್ವತಂತ್ರ ಭಾರತದ ಸಂವಿಧಾನಬದ್ಧತೆಯೆನ್ನೋಣವೇ?! ಇಂದು ನಮ್ಮ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ಮೇಲ್ವರ್ಗದ ಸಿರಿವಂತರ ಮಠಮಾನ್ಯರ ಇಚ್ಛೆಗನುಗುಣವಾಗಿ ನಡೆಯುತ್ತವೆ. ಬದುಕುವ ಹಕ್ಕುಗಳ ಪ್ರತಿಪಾದನೆಯು ಜಾಮೀನುರಹಿತ ಅಪರಾಧವೆನಿಸುತ್ತದೆ.

ಪ್ರಸ್ತುತ ನಡೆಯುತ್ತಿರುವುದು ರಕ್ಷಣೆಯ ನೆಪವಲ್ಲ ಮನುಶಾಸನದ ಅನುಷ್ಠಾನದ ಘೋಷಣೆ.ಪತ್ರಿಕೆಗೆ ಅಭಿನಂದನೆಗಳು.

ಪಿ.ಗೋಕುಲ್‌ದಾಸ್, ಮಂಗಳೂರು

ಈ ವಾರದ ಸಂಚಿಕೆಯಲ್ಲಿನ ಬರಹಗಳು ನಿಜಕ್ಕೂ ಸಾಮಾನ್ಯರ ನಂಬಿಕೆ ಮತ್ತು ಆಚರಣೆಯನ್ನು ಹೇಗೆ ಪುರೋಹಿತಶಾಹಿಗಳು ಸಂದರ್ಭಾನುಸಾರ ತಮ್ಮ ದ್ವಂದ್ವ ನೀತಿಗಳಿಂದ ಸಾಮಾನ್ಯನ ಬದುಕನ್ನು ಇಕ್ಕಟ್ಟಿಗೆ ಸಿಲುಕಿಸುವುದರ ಮೂಲಕ ತಮ್ಮ ಪಾಯಿದೆಯನ್ನು ಪಡೆಯುತ್ತಾರೆ ಎಂಬ ಸತ್ಯ ಹೊತ್ತು ತಂದಿದೆ. ಕೇವಲ ದನದ ಮಾಂಸ ಮಾರುವ ದಲಿತನನ್ನು ರಸ್ತೆಯಲ್ಲಿ ಬೆತ್ತಲೆಗೊಳಿಸಿ ಥಳಿಸುವುದಾದರೆ ಈ ಮನುವಾದಿಗಳ ಅಟ್ಟಹಾಸ ಅತಿರೇಕ ಮುಟ್ಟಿರುವುದರ ಕಣ್ನೋಟ ಇದಾಗಿದೆ. ಇದೇ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ (ಎನ್.ಡಿ.ಎ.) ಈ ದೇಶದ ಕಸಾಯಿಖಾನೆಗಳನ್ನೇಕೆ ಮುಚ್ಚಲು ಸಾಧ್ಯವಾಗಲಿಲ್ಲ? ಕೇವಲ ಬೂಟಾಟಿಕೆಯ ತಂಪುಗಳನ್ನು ಹೊಸೆಯುತ್ತಾ ಜನರನ್ನು ದ್ವಂದ್ವಕ್ಕೆ ನೂಕಿ ಅಪಹಾಸ್ಯ ಮಾಡುವುದನ್ನು ನಿಲ್ಲಿಸದಿದ್ದರೆ ಅದರ ಪರಿಣಾಮ ಜನರಿಂದ ನಿರೀಕ್ಷಿಸಲಾರದಷ್ಟು ಬರಬಹುದೇನೋ. ರಾಮನ ದೇವಸ್ಥಾನ ಕಟ್ಟಲು ಹುಸಿಯಾದಂತೆ ಇದು ಸಹ. ಇವರ ಭಯಕ್ಕೆದರಿ ಇಡೀ ದಲಿತ ಸಮುದಾಯ ಮಾಂಸ ತಿನ್ನುವುದೇನೂ ಬಿಡುವುದೂ ಇಲ್ಲ, ವಿಚಾರ, ಪ್ರಜ್ಞೆ ಮತ್ತು ಸಾಮಾಜಿಕ ನಿಲುವುಗಳಿಲ್ಲದವರಿಂದ ನಾವು ನಿರೀಕ್ಷಿಸುವುದಾದರೂ ಏನನ್ನು?

ಸಿದ್ದು ಅಂಬಾಡಹಳ್ಳಿ




'ರಕ್ಷಣೆ ಎಂಬ ನೆಪ ದಮನಕ್ಕೆ ದಾರಿ' ಓದಿದಾಗ ಈ ಮನು ಮೆಂಟಾಲಿಟಿಯವರು ಕಾಲಾತೀತರು ಅಂದರೆ ಎಲ್ಲಾ ಕಾಲದಲ್ಲೂ, ಎಲ್ಲಾ ಸ್ತರಗಳಲ್ಲೂ ಕಂಡು ಬರುವಂತಹವರು ಅಂತೆನಿಸಿತು.

ಯಾರು ಏನೇ ಹೇಳಿಕೊಳ್ಳಲಿ ಲಿಂಗ ತಾರತಮ್ಯ ವಿಷಯಕ್ಕೆ ಬಂದಾಗ ಹಿಂದಿನ ದಿನಗಳಿಗೆ ಹೋಲಿಸಿದ್ದಲ್ಲಿ ಈಗಿನ ಪೀಳಿಗೆ ಸ್ವಲ್ಪ ಹೆಚ್ಚು ಮೆಚ್ಯೂರ್ಡ್ ಆಗಿರುವಂತೆ ತೋರುತ್ತಿದೆ. ಹಾಗಂತ ಇಂದಿನ ದಿನಗಳಲ್ಲಿ ಸ್ತ್ರೀಯರ ಮೇಲಿನ ದಬ್ಬಾಳಿಕೆಯಾಗಲೀ, ಲೈಂಗಿಕ ಶೋಷಣೆಯಾಗಲೀ ಇಲ್ಲವೇ ಇಲ್ಲವೆಂದೇನೂ ಅಲ್ಲ, ಉದಾಹರಣೆಗೆ ಹಿಂದೆ (ಅಥವಾ ಮೊನ್ನೆ ಮೊನ್ನೆ) ವಿಧವೆ, ವಿಚ್ಛೇದಿತರನ್ನೂ ನೋಡುವ ಬಗೆಯೇ ಬೇರೆಯಿತ್ತು (ಈಗಲೂ ಪೂರ್ತಿಯಾಗಿ ಬದಲಾಗಿಲ್ಲ). ಆದರೆ ಆ ದಿನಗಳಿಗೆ ಹೋಲಿಸಿದರೆ ಈಗ ವಿಧವೆ-ವಿಚ್ಛೇದಿತರನ್ನು ಮದುವೆಯಾಗುವುದು ಇಂದಿನ ದಿನಗಳಲ್ಲಿ ದೊಡ್ಡ ಸಮಸ್ಯೆಯೇ ಅಲ್ಲ.

ಮನುಸ್ಮೃತಿಯಂತಹ ಹಿಂದೂ ಧರ್ಮ ಶಾಸನಗಳಲ್ಲಿ ವಿಧಿಸಲ್ಪಟ್ಟಂತೆ ಸ್ತ್ರೀಯರು ಒಂದು ನಿರ್ದಿಷ್ಟ ಚೌಕಟ್ಟಿನೊಳಗೆ ವ್ಯವಹಾರಗಳಿಗಷ್ಟೇ ಸೀಮಿತವಾಗಿರಬೇಕೆನ್ನುವುದಾಗಲೀ, ವಿಧವೆಯರ (ಚಿಕ್ಕಪ್ರಾಯದವರಾದರೂ) ತಲೆ ಬೋಳಿಸಿ ಹೂ ಕುಂಕುಮ ಅಳಿಸಿ ಬಳೆ ಒಡೆದು ಕುರೂಪಗೊಳಿಸುವುದಾಗಲೀ ಮುಸಲ್ಮಾನರ ಬುರ್ಖಾ ಸಂಸ್ಕೃತಿಯಾಗಲೀ ಇವುಗಳೆಲ್ಲ ಮೂಲತಃ ಪುರುಷನ ದೌರ್ಬಲ್ಯದ ಕಾರಣದಿಂದ ಹುಟ್ಟಿಕೊಂಡು ಮಹಿಳೆಯರನ್ನು ಕಟ್ಟುಪಾಡುಗಳ ಹೆಸರಲ್ಲಿ ಬಂಧಿಸಿಟ್ಟವು. ಪುರುಷನ ಲೈಂಗಿಕ ವಾಂಛೆಯೆನ್ನುವ ದೌರ್ಬಲ್ಯವನ್ನೇ ಒಂದು ಪೆಡಂಭೂತವೆಂದು ಭ್ರಮಿಸಿಕೊಳ್ಳುವ ಮನಸ್ಸುಗಳು ಎಲ್ಲಾ ಕಾಲದಲ್ಲೂ ಇರುತ್ತವೆ. ಇಂತಹ ಪುರುಷರ ಕಣ್ಣಿನಿಂದ ರಕ್ಷಿಸುವ ಸಲುವಾಗಿ ಸ್ತ್ರೀಯರಿಗೆ ಕಟ್ಟುಪಾಡುಗಳ ಹೇರಿಕೆ.

-ರವಿ ಪುತ್ತೂರು(ದ.ಕ.)

## ಪುರೋಹಿತಶಾಹಿ ಪುಂಡರ ವ್ಯವಸ್ಥಿತ ಹುನ್ನಾರಗಳು

ಸಮಾಜದ್ರೋಹಿ, ಪುರೋಹಿತಶಾಹಿ ಸಂಘಪರಿವಾರದವರು ಈಗ ನಿರಂತರ ಚಟುವಟಿಕೆಗಳಲ್ಲಿ ತೊಡಗಿದ್ದಾರೆ.

ಗೋಮಾಂಸ ಸೇವಿಸುವ ಬಡಜನರನ್ನು ಕಂಡಲ್ಲಿ ಹೊಡೆದು, ಬಡಿದು, ಬೆತ್ತಲೆ ಮೆರವಣಿಗೆ ಮಾಡುವುದು ಒಂದು ಭಾಗವಾದರೆ ತಮ್ಮ ವಿರುದ್ಧ ದನಿ ಎತ್ತಿದವರ ಬೆನ್ನುಹತ್ತಿ ಅವರನ್ನು ಮುಗಿಸಲು ಸಂಚು ರೂಪಿಸುತ್ತಿರುವುದು ಇನ್ನೊಂದು ಭಾಗ.

ಇತ್ತೀಚೆಗೆ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಸಿ.ಎಸ್.ದ್ವಾರಕನಾಥ್‌ರವರಿಗೆ ಬಲವಂತವಾಗಿ ತೀರ್ಥ ಕುಡಿಸಿದರು. ಧಾರವಾಡದ ಮನ್ಸೂರು ಮಠದ ಸ್ವಾಮೀಜಿ ಬಸವರಾಜ ದೇವರ ಮೇಲೆ ಹಲ್ಲೆ ಮಾಡಲು ಯತ್ನಿಸಿದರು. ಹಾಗೆಯೇ ಮೊನ್ನೆ ಉಡುಪಿಯ ಪತ್ರಕರ್ತ ಹಾಗೂ ಜನಪರ ಹೋರಾಟಗಾರರ ಶ್ರೀರಾಮದಿವಾಣರಿಗೆ ಕೊಲೆ ಬೆದರಿಕೆಯೊಡ್ಡಿದ್ದು ಕೂಡ ಇದೇ ಪುರೋಹಿತಶಾಹಿಗಳು. ಇದು ಹೀಗೆ ಮುಂದುವರೆದರೆ ಜನಪರ ಹೋರಾಟಗಾರರು, ಪ್ರಗತಿಪರ ಚಿಂತಕರು ದನಿ ಎತ್ತಲಾಗದ ಸ್ಥಿತಿ ಉಂಟಾಗಬಹುದೇ ಎಂಬ ಆತಂಕ ಕಾಡುತ್ತಲಿದೆ.

ಇತ್ತೀಚೆಗೆ ಶ್ರೀರಾಮಸೇನೆಯ ಮುತಾಲಿಕ್ ಹೇಳಿಕೆಯನ್ನು ನೀವು ಗಮನಿಸಿರುತ್ತೀರಿ. ಗೋಹತ್ಯೆ ಮಾಡುವ ದಲಿತರನ್ನು ಸಿಕ್ಕಲ್ಲಿ ಹೊಡೆಯುತ್ತೇವೆ ಹಾಗೂ ಗೋಸಂರಕ್ಷಣೆ, ಭಯೋತ್ಪಾದನೆ, ನಕ್ಸಲಿಸಂನ್ನು ನಿಯಂತ್ರಿಸಲಿಕ್ಕಾಗಿ ಪ್ರತಿ ಮನೆಗೂ ಒಂದು ಪರವಾನಗಿ ಇರುವ ಆಯುಧವನ್ನು ನೀಡಲಾಗುವುದೆಂದು!

ಹೀಗೆ ಸಂಘಪರಿವಾರದವರು ಪ್ರಚೋದನಕಾರಿ ಹೇಳಿಕೆಗಳನ್ನು ಎಲ್ಲೆಂದರಲ್ಲಿ ಹೊರಡಿಸುತ್ತಾ ಮತ್ತು ಸಮಾಜ ವಿರೋಧಿ ಚಟುವಟಿಕೆಗಳನ್ನು ಮಾಡುತ್ತಾ ನಿರ್ಭಯವಾಗಿ ಓಡಾಡಿಕೊಂಡಿರಲು ಇಲ್ಲಿ ಅವಕಾಶ ನೀಡಲಾಗಿದೆ. ಅದೇ ಜನಪರ ಹೋರಾಟಗಾರರು ಮತ್ತು ಪ್ರಗತಿಪರ ಚಿಂತಕರು ಇಂತಹ ಸಮಾಜದ್ರೋಹಿಗಳನ್ನು ಬೆದರಿಸಲಿಕ್ಕಾದರೂ ದನಿ ಎತ್ತುವಂತಿಲ್ಲ, ಇನ್ನು ಆಯುಧಗಳನ್ನು ಹಿಡಿಯಬೇಕೆಂಬ ಹೇಳಿಕೆ ಕೊಟ್ಟರೆ ಈ ದೇಶದೊಳಗೆ ಓಡಾಡುವಂತಿಲ್ಲ. ಕಂಡಲ್ಲಿ ಗುಂಡು ಆದೇಶ ಹೊರಬೀಳುತ್ತದೆ. ಕಡೆಗೊಮ್ಮೆ ಪೊಲೀಸರ ಗುಂಡಿಗೆ ಬಲಿಯಾಗಿ ಹೋದರೂ ಆಶ್ಚರ್ಯ ಪಡಬೇಕಾಗಿಲ್ಲ.

-ಕಿರುಗುಂದ ರಫೀಕ್, ಮುದಿಗೆರೆ



ಳಿ|ದು|ಹೋ|ದ

# ...ೀವಗಳಿಗೆ ಬೆಲೆ ಎಲ್ಲಿ?

...ಅದು ಏಪ್ರಿಲ್ 17, 2004. ಆಗಲೂ ಸಹ ರಾಜ್ಯದ ಎಲ್ಲೆಡೆ ಇವತ್ತಿನಂತೆಯೇ ಚುನಾವಣೆಯ ...) ರಂಗೇರಿತ್ತು, ಪ್ರಚಾರದ ಆರ್ಭಟಗಳು ಮುಗಿಲು ಮುಟ್ಟಿದ್ದವು. ಆ ದಿನ ಮಟಮಟ ...ಧ್ಯಾಹ್ನ ನಡೆದ ವಿಮಾನ ಅಪಘಾತದಲ್ಲಿ ದಕ್ಷಿಣ ಭಾರತದ ಮಹೋನ್ನತ ಪ್ರತಿಭೆಯೊಂದು ...ಸ್ಟಿ ಭಸ್ಮವಾಗಿತ್ತು, ಬಿಜೆಪಿ ಪಕ್ಷದ ಸ್ವಾರ್ಥಕ್ಕಾಗಿ, ಆ ಪಕ್ಷದ ಚುನಾವಣಾ ತೀಟೆಗಾಗಿ ಅಂದು ...ಯಾಗಿದ್ದು ಮುದ್ದುಮುಖದ ನಟಿ ಸೌಂದರ್ಯ. ಆಕೆಯೊಂದಿಗೆ ಅಂದು ಆಕೆಯ ಅಣ್ಣ ...ಅರ್‌ನಾಥ್ ಕೂಡ ಜೀವ ಬಿಟ್ಟಿದ್ದ.

...ಕೆಲಸಕ್ಕೆ ಬಾರದ, ಗುಜುರಿ ಸೇರಬೇಕಿದ್ದ ವಿಮಾನಕ್ಕೆ ಅವರಿಬ್ಬರನ್ನು ಬಿಜೆಪಿ ನಾಯಕರು ...ಸಿದ್ದೇ ಅವರ ಸಾವಿಗೆ ಕಾರಣವಾಗಿತ್ತು, ಆದರೆ ತಮ್ಮ ಪಕ್ಷಕ್ಕೋಸ್ಕರ ಸೌಂದರ್ಯ ತನ್ನ ...ಾವನ್ನೇ ಕಳೆದುಕೊಂಡಿದ್ದರೂ ಆಕೆಯ ನೆನೆಪಿನಲ್ಲಿ ಒಂದೇಒಂದು ಶ್ರದ್ಧಾಂಜಲಿ ಸಭೆಯನ್ನೂ ...ಸದೆ ಬಿಜೆಪಿ ತನ್ನ ಸ್ವಾರ್ಥ ಮತ್ತು ...ಾನವೀಯತೆಯನ್ನು ಮೆರೆದಿತ್ತು.



...ಇದೇ ಏಪ್ರಿಲ್ 17ನೇ ತಾರೀಖಿಗೆ ...ದರ್ಯ ಸತ್ತು ಭರ್ತಿ ನಾಲ್ಕು ವರ್ಷ ತುಂಬು... ಆಕೆ ಸತ್ತ ಬಳಿಕ ಮೊದಲ ಹಲವು ದಿನ ...ು ಮನೆಗೆ ಮುತ್ತಿಗೆ ಇಟ್ಟಿದ್ದ ಬಿಜೆಪಿ ...ಯಕರು ಅದಾದ ನಂತರ ಇವತ್ತಿನ ತನಕ ...ವೊಬ್ಬ ಚಿಡ್ಡಿ ರಾಜಕಾರಣಿಯಾಗಲಿ, ಭಟ್ಟಂಗಿ ...ಗಲಿ ಆಕೆಯ ಮನೆಯ ಕಡೆ ತಲೆಹಾಕಿಲ್ಲ.

...ಜೀವನದಲ್ಲಿ ಬಹಳ ಕಷ್ಟ ಪಟ್ಟು ತನ್ನ ಮಗಳನ್ನು ...ಪಿ ಚಿತ್ರರಂಗದ ಮೇರು ನಟಿಯಾಗಿಸಿದ ಆಕೆಯ ...ಮಿ ಮಂಜುಳಾ ಪ್ರತಿ ದಿನವನ್ನೂ ಕಣ್ಣೀರಿನಲ್ಲೇ ...ಯುತ್ತಿದ್ದಾರೆ. "ನನ್ನ ಮಕ್ಕಳನ್ನು ಅನ್ಯಾಯವಾಗಿ ಕೊಂದರು'' ಎಂದು ರೋಧಿಸುತ್ತಿದ್ದಾರೆ. ಆದರೆ ...ಹಿರಿಯ ಜೀವಕ್ಕೆ ಸಹಾಯ ಮಾಡುವುದಿರಲಿ, ಕಡೇಪಕ್ಷ ಒಂದು ಸಾಂತ್ವನದ ಮಾತನ್ನೂ ಆ ...ರಿ ಪಕ್ಷ ಆಡಿಲ್ಲ. ಸೌಂದರ್ಯಳ ಅಣ್ಣ ಅಮರ್ ಮೊದಲಿನಿಂದಲೂ ಆರೆಸ್ಸೆಸ್ ಪಡೆಯಲ್ಲಿ ...ದ್ದವನೇ. ಆತನ ಸಾವಿನಿಂದ ಜರ್ಜರಿತಗೊಂಡಿರುವ ಆತನ ಮನೆಯವರಿಗೆ ಬಿಜೆಪಿ ಪಕ್ಷವು ...ಾಪೈಸೆಯ ಸಹಾಯವನ್ನೂ ಇಲ್ಲಿಯ ತನಕ ಮಾಡಿಲ್ಲ.

...ಅಮರ್‌ನ ಹೆಂಡತಿ ನಿರ್ಮಲಾ ಇಂದು ಡಾಲರ್ಸ್ ಕಾಲನಿಯ ತಮ್ಮ ಮನೆಯ ಕೆಳಮಹಡಿಯಲ್ಲಿ ...ರ್ ಸೌಂದರ್ಯ ಶಾಲೆ' ಎಂಬ ಸ್ಕೂಲನ್ನು ನಡೆಸುತ್ತಿದ್ದಾರೆ. ಯುಕೆಜಿವರೆಗಿನ ತರಗತಿಗಳನ್ನು ...ಸುತ್ತಿರುವ ನಿರ್ಮಲಾ ಸಮಾಜದಲ್ಲಿನ ಎಲ್ಲ ವರ್ಗದವರಿಗೂ ಸಮಾನವಾದ ಶಿಕ್ಷಣವನ್ನು ...ುವಂಥ ಶಾಲೆಯನ್ನು ನಿರ್ಮಿಸಬೇಕೆಂಬ ಕನಸಿನಲ್ಲಿದ್ದಾರೆ.

..."ನಮ್ಮ ಮನೆಯವರು ಮತ್ತು ಸೌಂದರ್ಯ ತೀರಿಕೊಂಡ ಮೊದಮೊದಲು ಬಿಜೆಪಿಯ ...ಂತ್ ಕುಮಾರ್ ಮತ್ತು ಅವರ ಕಡೆಯವರು ಬಂದು ಭಾರೀ ಭಾರೀ ಭರವಸೆ ನೀಡಿಹೋದರು. ...ರೆ ಇಂದಿನವರೆಗೂ ಅವರ್‍ಯಾರೂ ನಮ್ಮ ಯೋಗಕ್ಷೇಮ ವಿಚಾರಿಸಿಲ್ಲ. ಕಡೇ ಪಕ್ಷ ನಾವು ...ುಕಿದ್ದೇವೋ, ಸತ್ತಿದ್ದೇವೋ ಎಂಬುದನ್ನೂ ನೋಡಿಲ್ಲ. ಕಷ್ಟ ಪಟ್ಟು ಶಾಲೆ ನಡೆಸುತ್ತಿದ್ದೇವೆ. ...ರೆ ನಮ್ಮನ್ನು ಕೇಳುವವರೇ ಇಲ್ಲ. ನಮ್ಮ ಶಾಲೆಗಾದರೂ ಆ ಜನ ಸಹಾಯ ಮಾಡಬಹುದಿತ್ತು ...ನ್ನೂ ಮಾಡಿಲ್ಲ. ಶಾಲೆಯ ಕಟ್ಟಡವನ್ನು ಕಟ್ಟಲು ಕಾಸಿಲ್ಲದೆ ಪರದಾಡುತ್ತಿದ್ದೇನೆ'' ಎಂದು ...ಸುವಾಗ ಆಕೆಯ ಕಣ್ಣಿನಲ್ಲಿ ನೀರುಕ್ಕುತ್ತದೆ.

...ಇನ್ನು ಸೌಂದರ್ಯಳ ಕೈಹಿಡಿದ ಕೆಲವೇ ತಿಂಗಳಲ್ಲಿ ಆಕೆಯನ್ನು ಕಳೆದುಕೊಂಡ ಆಕೆಯ ಪತಿ ...ಸ್. ರಘು ಕೂಡಾ ಪ್ರತೀ ದಿನ ಪತ್ನಿಯ ನೆನಪಿನಲ್ಲೇ ಕಾಲ ದೂಡುತ್ತಿದ್ದಾರೆ. ಬೆಂಗಳೂರಿನ ...ಯನಗರದಲ್ಲಿ ತಮ್ಮದೇ ಸಾಫ್ಟ್‌ವೇರ್ ಸಂಸ್ಥೆಯನ್ನು ಹೊಂದಿರುವ ರಘು ಇಂದಿಗೂ ಇನ್ನೊಂದು ...ದುವೆಯಾಗುವ ನಿರ್ಧಾರ ಮಾಡಿಲ್ಲ. "ಡೌನ್ ಟು ಅರ್ಥ್ ಆಗಿದ್ದ ನನ್ನ ಹೆಂಡತಿ ಅನ್ಯಾಯವಾಗಿ ...ವುದೋ ರಾಜಕೀಯ ಪಕ್ಷದ ಪ್ರಚಾರಕ್ಕೋಸ್ಕರ ಪ್ರಾಣ ಬಿಟ್ಟಳು. ಆದರೆ ಅವಳಿಗಿರಲಿ ಅವಳ ...ಭೆಗೆ ಕೂಡ ಇಂದು ಬೆಲೆಯಿಲ್ಲದಂತಾಗಿದೆ. ಆಕೆಯನ್ನು ಈ ಸಿನಿಮಾದವರು ಮತ್ತು ಆಕೆಯ ...ಾವನ್ನು ತೆಗೆದ ರಾಜಕೀಯ ಪಕ್ಷದವರು ಮರೆತೇಬಿಟ್ಟಿದ್ದಾರೆ. ನನ್ನನ್ನು ಯಾರೂ ವಿಚಾರಿಸುವುದು ...ದ, ಆದರೆ ತನ್ನ ಇಬ್ಬರೂ ಮಕ್ಕಳನ್ನು ಕಳೆದು ಕೊಂಡ ಸೌಂದರ್ಯ ಮತ್ತು ಅಮರ್‌ನ ತಾಯಿ ...ೇ ದಿನ ಮಕ್ಕಳ ನೆನಪಲ್ಲಿ ಬದುಕುತ್ತಿದ್ದಾರೆ. ಆ ತಾಯಿಗಾದರೂ ಆ ಜನ ಸಾಂತ್ವನ ನೀಡಬಹು...?'' ಎಂದು ಪ್ರಶ್ನಿಸುತ್ತಾರೆ. ಅವರ ಪ್ರಶ್ನೆಗೆ ಬಿಜೆಪಿಯ ದಂಡ ಪಿಂಡ ನಾಯಕರು ಉತ್ತರಿಸುವ ...ರ್ಯ ತೋರಿಸುತ್ತಾರೆಯೇ?

...ದಕ್ಷಿಣಭಾರತದ ಚಿತ್ರೋದ್ಯಮದಲ್ಲಿ ತನ್ನದೇ ಆದ ಕ್ರೇಜ್ ಸೃಷ್ಟಿಸಿದ್ದ, ಅಪಾರ ಸಂಖ್ಯೆಯ ...ಮಾನಿಗಳನ್ನು ಹೊಂದಿದ್ದ, ಅಮಿತಾಭ್, ಕಮಲ್, ರಜನಿ, ರವಿಚಂದ್ರನ್.... ಹೀಗೆ ಭಾರತದ ...ಮಾಲೋಕದ ದಿಗ್ಗಜರೊಂದಿಗೆ ನಟಿಸಿದ್ದ, ಬಹುಭಾಷಾ ತಾರೆ ಸೌಂದರ್ಯಾಳಿಗೆ ಚಿದ್ದಿಗಳು ...ೇರಿಸಿದ ಮರ್ಯಾದೆಯ ಚಿತ್ರಣವಿದು. ಇನ್ನು ಸೌಂದರ್ಯಾಳ ತಾಯಿಯ ಕಣ್ಣೀರಿನೊಂದಿಗೆ, ...ದು ಅತ್ತಿಗೆ ಮತ್ತು ಗಂಡನ ರೋಧನದೊಂದಿಗೆ ಅವರು ಹೇಗೆ ಸ್ಪಂದಿಸಿಯಾರು?

... ಚುನಾವಣೆಗಳು ಬರುತ್ತವೆ ಹೋಗುತ್ತವೆ. ಆದರೆ ರಾಜಕೀಯ ಪಕ್ಷಗಳ ದುರಾಸೆಗೆ ಸೌಂದರ್ಯಳಂತೆ ... ಪ್ರಾಣವನ್ನೇ ಕಳೆದುಕೊಳ್ಳುವ ಜೀವಗಳಿಗೆ ಬೆಲೆ ಮಾತ್ರ ಎಂದೂ ಸಿಗುತ್ತಿಲ್ಲ.

■ ಅರುಣ್.ಜಿ

# ತಾರೆಯರ | ರಾಜಕೀಯ | ಖಯಾಲಿ

ಚುನಾವಣೆಗಳು ಸಮೀಪಿಸುತ್ತಿದ್ದಂತೇ ಗಾಂಧಿನಗರದ ಕಲಾವಿದರು ಕೂಡ ತಮ್ಮ ಬಣ್ಣದ ಬಟ್ಟೆಗಳನ್ನು ಬದಿಗಿಟ್ಟು ಖಾದಿ ಬಟ್ಟೆ ಧರಿಸಲು ಶುರುಮಾಡಿದ್ದಾರೆ.

ಚುನಾವಣೆಗಳಿಗೂ, ಕನ್ನಡ ಚಿತ್ರರಂಗದ ಕಲಾವಿದರಿಗೂ ಹತ್ತಿರದ ಸಂಬಂಧ. ಇತ್ತೀಚೆಗಂತೂ ಯಾವುದೇ ಸಿದ್ಧಾಂತ, ತತ್ವ, ಇತ್ಯಾದಿಗಳ ಬಗ್ಗೆ ಚಿತ್ರರಂಗದವರಿಗೆ ಗೊತ್ತಿಲ್ಲದಿದ್ದರೂ ಯಾವುದಾದರೂ ಒಂದು ರಾಜಕೀಯ ಪಕ್ಷದೊಂದಿಗೆ ಗುರುತಿಸಿಕೊಳ್ಳಲು ಹವಣಿಸುತ್ತಾರೆ. ಇದಕ್ಕೆ ಉತ್ತಮ ಉದಾಹರಣೆ ಮಹೇಂದರ್ ಮತ್ತು ಶೃತಿ ಜೋಡಿ. ಕಳೆದ ಹಲವಾರು ವರ್ಷಗಳಿಂದ ಈ ಜೋಡಿ ಎಲ್ಲಾ ರಾಜಕೀಯ ಪಕ್ಷಗಳ ಬಾಗಿಲು ತಟ್ಟುತ್ತಿತ್ತು. ಈ ಕಾರಣಕ್ಕಾಗಿಯೇ ಇತ್ತೀಚೆಗೆ ಕೊಳ್ಳೇಗಾಲದಲ್ಲಿ ಯಾರು ಯಾವುದೇ ಸಮಾರಂಭಕ್ಕೆ ಕರೆದರೂ ಶೂಟಿಂಗ್‌ಗೆ ಚಕ್ಕರ್ ಹೊಡೆದೋ, ತಮ್ಮ ಇತರೆ ಕೆಲಸಗಳನ್ನು ನಿಲ್ಲಿಸಿಯೋ ಈ ತಾರಾ ಜೋಡಿ ಅಲ್ಲಿ ಹಾಜರಾಗುತ್ತಿತ್ತು. ಮೊನ್ನೆ ಬಿಜೆಪಿಯವರು ಇವರಿಬ್ಬರಿಗೆ ಮಂಗಳಾರತಿ ಮಾಡಿ ತಮ್ಮ ಪಕ್ಷಕ್ಕೆ ಸ್ವಾಗತಿಸಿದ್ದಾರೆ. ಈಗ ನಡೆಯಲಿರುವ ಚುನಾವಣೆಯಲ್ಲಿ ಮಹೇಂದರ್ ಕೊಳ್ಳೇಗಾಲದಲ್ಲಿ ಬಿಜೆಪಿ ಟಿಕೆಟ್ ಮೇಲೆ ಸ್ಪರ್ಧಿಸುವುದು ಖಚಿತವಾಗಿದೆ.




ಅದೇ ರೀತಿ ಆಂಧ್ರದಿಂದ ನಟನೆಗಾಗಿ ಕರ್ನಾಟಕಕ್ಕೆ ಬಂದ ಸಾಯಿಕುಮಾರ್ ಕಳೆದ ಬಾರಿಯ ಚುನಾವಣೆಯಲ್ಲಿ 'ಮಾತನಾಡುವ ಗೊಂಬೆ'ಯಾಗಿ ಬಿಜೆಪಿಯ ಸಭೆಗಳಲ್ಲಿ ಭಾಗವಹಿಸಿದ್ದರು. ಈಗ ಅವರು ಬಾಗೇಪಲ್ಲಿಯಿಂದ ಬಿಜೆಪಿ ಪರವಾಗಿ ಸ್ಪರ್ಧಿಸುವುದು ಗ್ಯಾರಂಟಿಯಾಗಿದೆ. ಕಳೆದ ಎರಡು ವರ್ಷಗಳಿಂದ ಸಾಯಿ ಕುಮಾರ್ ಸಮಯ ಸಿಕ್ಕಾಗಲೆಲ್ಲ ಬಾಗೇಪಲ್ಲಿಯಲ್ಲಿ ಮಾಕ್ಯಾಂ ಹೂಡಿ ಸೀರೆ, ಟೀವಿ ಹಂಚುತ್ತಿದ್ದರು.



ಕಳೆದ ಬಾರಿಯ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡ ಸ್ವಯಂ ಘೋಷಿತ ನವರಸ ನಾಯಕ ಜಗ್ಗೇಶ್ ಈ ಬಾರಿ ಮತ್ತೆ ತುರುವೆಗೆರೆ ಕ್ಷೇತ್ರದಿಂದಲೇ ಸ್ಪರ್ಧಿಸುತ್ತೇನೆ ಎಂದು ಘೋಷಿಸಿದ್ದಾರೆ. ರಾಜಕಾರಣಿಯಾಗುವ ಮೊದಲೇ ರಾಜಕಾರಣಿ ಥರಹ ಮಾತನಾಡುವ ಜಗ್ಗೇಶ್ ಕಳೆದ ಮೂರು ವರ್ಷಗಳಿಂದ ಪ್ರತೀ ಶನಿವಾರ ಮತ್ತು ಭಾನುವಾರ ತುರುವೆಗೆರೆಯಲ್ಲಿ ಏನಾದರೊಂದು ಸಮಾರಂಭದಲ್ಲಿ ಭಾಗವಹಿಸುತ್ತಲೇ ಬಂದಿದ್ದಾರೆ. ಅದೆಲ್ಲ ಈಗ ಪ್ರತಿಫಲ ನೀಡಿ ಅವರು ವಿಧಾನ ಸೌಧದ ಮೆಟ್ಟಲುಗಳನ್ನು ಏರುತ್ತಾರೋ ಅಥವಾ ಮತ್ತೆ ಠೇವಣಿ ಕಳೆದುಕೊಳ್ಳುತ್ತಾರೋ ಎಂಬುದನ್ನು ನೋಡಬೇಕಿದೆ.



ಬಿ.ಸಿ. ಪಾಟೀಲ್ ಎಂಬ ಮಾಜಿ ಪೊಲೀಸ್ ಅಧಿಕಾರಿ ಮತ್ತು ಮಾಜಿ ಶಾಸಕ ಮತ್ತೆ ಸ್ಪರ್ಧಿಸುವುದು ಗ್ಯಾರೆಂಟಿ. ಆದರೆ ಕಳೆದ ಬಾರಿ ದೇವೇಗೌಡರ ಪಕ್ಷದಿಂದ ನಿಂತಿದ್ದ ಪಾಟೀಲರು ಈ ಬಾರಿ ಎಂ.ಪಿ. ಪ್ರಕಾಶ್ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ್ದಾರಲ್ಲದೆ ಈಗ ಕಾಂಗ್ರೆ ಸದಸ್ಯರಾಗಿ ಸ್ಪರ್ಧಿಸಬೇಕಿದೆ. ಅಂದರೆ ಈಗ ಅವರು ಕಳೆದ ಬಾರಿಯ ಭಾಷಣಗಳು ಮತ್ತು ಡೈಲಾಗುಗಳನ್ನು ಬಿಸಾಡಿ ಹೊಸ ಚಿತ್ರಕ್ಕೆ ಹೊಸ ಡೈಲಾಗ್‌ಗಳನ್ನು ಕಲಿಯುವ ರೀತಿ ಹೊಸ ಭಾಷಣಗಳನ್ನು ಸಿದ್ಧಗಳಿಸಿಕೊಳ್ಳಬೇಕಿದೆ.



ಇನ್ನು ಮೆಗಾಸಿಟಿ ಯೋಗೇಶ್ ಎಂದೇ (ಕು)ಖ್ಯಾತರಾಗಿರುವ ಯೋಗೇಶ್‌ಗೆ ಎಸ್ಸೆಂ ಕೃಷ್ಣ ಮತ್ತೆ ಸಕ್ರಿಯ ರಾಜಕೀಯದ ಕಡೆ ಬಂದಿರುವುದರಿಂದ ಯಾವ ತೊಂದರೆಯೂ ಇಲ್ಲದೆ ಟಿಕೇಟ್ ಸಿಗುತ್ತದೆ. ಕಳೆದ ಬಾರಿ ಇವರ ವಿರುದ್ಧ ಬಿಜೆಪಿಯ ಪರವಾಗಿ ನಿರ್ಮಾಪಕ ವಿಜಯ ಕುಮಾರ್ ಸ್ಪರ್ಧಿಸಿದ್ದರು. ಇವರಿಬ್ಬರೂ ಮತ್ತೆ ಮುಖಾಮುಖಿಯಾಗುತ್ತಾರೋ ಅಥವಾ ಕ್ಷೇತ್ರ ಮರುವಿಂಗಡಣೆಯಿಂದಾಗಿ ಬೇರೆಬೇರೆಯವರನ್ನು ಎದುರಿಸುತ್ತಾರೋ ಇನ್ನೂ ಗೊತ್ತಿಲ್ಲ.

ಹಿಂದೊಮ್ಮೆ ವಿಷ್ಣುವರ್ಧನ್ ಅವರ ಬಲಗೈ ಭಂಟನಾಗಿದ್ದ ವಿಜಯ್‌ಕುಮಾರ್ ಈಗ ಯಡ್ಯೂರಪ್ಪನವರ ಆಪ್ತ. ಹೀಗಾಗಿ ವಿಜಯಕುಮಾರ್‌ಗೆ ಯಡ್ಡಿ ಕಾಲ್‌ಶೀಟ್ ಸಿಗಲು ಯಾವುದೇ ಕಷ್ಟವಾಗುವುದಿಲ್ಲ.

ಬಂಗಾರಪ್ಪನವರ ಪುತ್ರರಾದ ಕುಮಾರ್ ಬಂಗಾರಪ್ಪ ಮತ್ತು ಮಧು ಬಂಗಾರಪ್ಪ ರಾಜಕೀಯಕ್ಕಿಂತಾ ಸಿನಿಮಾರಂಗದಲ್ಲೇ ಪ್ರಸಿದ್ಧರು. ಆದರೆ ಬಂಗಾರಪ್ಪನವರ ಹಿಡಿತದಿಂದ ಹೊರಬಂದು ನಿಜಜೀವನದಲ್ಲಿ ರೆಬೆಲ್ ಸ್ಟಾರ್ ಎನಿಸಿಕೊಂಡಿರುವ ಕುಮಾರ್ ಬಂಗಾರಪ್ಪ ರಾಜಕೀಯದಲ್ಲಿ ಈಗ 'ಪ್ರಬುದ್ಧ ನಟ'. ಕಾಂಗ್ರೆಸ್ ವತಿಯಿಂದ ಕುಮಾರ್ ಮತ್ತೆ ಸೊರಬ ಕ್ಷೇತ್ರದಿಂದ ಸ್ಪರ್ಧಿಸುವುದು ಶತಸಿದ್ಧ. ಆದರೆ ಕುಮಾರ್ ವಿರುದ್ಧ ಸಹೋದರ ಮಧು ಅದೇ ಕ್ಷೇತ್ರದಲ್ಲಿ ನಿಲ್ಲುತ್ತಾರೆಯೇ? ಸೊರಬದಲ್ಲಿ ಸಹೋದರರ ಸವಾಲ್ ನಡೆಯಲಿದೆಯೇ? ಗೊತ್ತಿಲ್ಲ. ಕೊನೆಗೆ ಮುದ್ದಿನ ಮಗ ಮಧುಗಾಗಿ ಪಕ್ಕದ ಕ್ಷೇತ್ರವನ್ನು ಆಯ್ಕೆ ಮಾಡುವ ಮೂಲಕ ಬಂಗಾರಪ್ಪ ತಮ್ಮ ರಾಜಕೀಯ ಚಾಣಾಕ್ಷತನವನ್ನು ಮೆರೆದರೂ ಆಶ್ಚರ್ಯವಿಲ್ಲ.





ಈ ಮಧ್ಯೆ ರಾಜಕೀಯಕ್ಕೆ ಆರಂಭದಲ್ಲಿ ಧುಮುಕಿದ ಅನಂತ್‌ನಾಗ್ ಮಾತ್ರ ಚುನಾವಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸೂಚನೆಗಳು ಕಾಣಿಸುತ್ತಿಲ್ಲ. ಬಲ್ಲ ಮೂಲಗಳ ಪ್ರಕಾರ ಈ ಬಾರಿ ಅನಂತ್ ನಾಗ್ ಬಿಜೆಪಿಯಿಂದ ಬೆಂಗಳೂರಿನ ಬಸವನಗುಡಿ ಕ್ಷೇತ್ರವನ್ನು ಬಯಸಿದ್ದರಂತೆ. ಆದರೆ ಅದಕ್ಕೆ ಬಿಜೆಪಿ ಒಪ್ಪದಿರುವ ಕಾರಣ ಅವರು ಚುನಾವಣಾರಂಗದಿಂದ ದೂರ ಉಳಿಯಲಿದ್ದಾರೆ. ಆದರೆ ಮತ್ತೊಬ್ಬ ಹಿರಿಯ ನಟ ಅಂಬರೀಶ ಮಾತ್ರ ಈ ಬಾರಿ ದೆಹಲಿಗೆ ಹೋಗುವ ಬದಲು ಇಲ್ಲೇ ವಿಧಾನಸೌಧದಲ್ಲೇ ಇರೋಣ ಎಂದು ನಿರ್ಧರಿಸಿದ್ದಾರೆ. ಆದ್ದರಿಂದ ಮಂಡ್ಯದ ಯಾವುದಾದರೊಂದು ಅಸೆಂಬ್ಲಿ ಕ್ಷೇತ್ರದಿಂದ ಅವರು ಈ ಬಾರಿ ಸ್ಪರ್ಧಿಸುವುದು ಖಚಿತವಾಗಿದೆ. ಹಿಂದೊಮ್ಮೆ ರಾಮನಗರ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಸೋಲಿನ ರುಚಿ ಅನುಭವಿಸಿದ್ದ ಅಂಬರೀಶ್ ಈ ಬಾರಿ ಎಚ್ಚರಿಕೆವಹಿಸಿ ಯಾವ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿದರೆ ಸೂಕ್ತ ಎಂದು ತಮ್ಮ ಸ್ನೇಹಿತರೊಂದಿಗೆ ಚರ್ಚಿಸುತ್ತಿದ್ದಾರೆ.

ದೇವೇಗೌಡರ ಗೆಳೆಯ 'ಮುಂಗಾರು ಮಳೆ' ಖ್ಯಾತಿಯ ಈ. ಕೃಷ್ಣಪ್ಪ ಯಲಹಂಕದಿಂದ ವಿಧಾನಸಭೆಗೆ ಸ್ಪರ್ಧಿಸುವುದು ಖಚಿತವಾಗಿದೆ. ಹಾಗೆಯೇ 'ಮುಂಗಾರು ಮಳೆ'ಯ ಕಾರ್ಯಕಾರಿ ನಿರ್ಮಾಪಕ ಜಿ. ಗಂಗಾಧರ್ ರಾಜಾಜಿನಗರ ಕ್ಷೇತ್ರದಿಂದ ಸ್ಪರ್ಧಿಸುವುದೂ ಖಚಿತವಾಗಿದೆ. ಸಂಜಯ್ ಖಾನ್ ರೆಸಾರ್ಟ್‌ನಲ್ಲಿ ದಳದ ಶಾಸಕರು ಮೂರು ದಿನಗಳ ಕಾಲ ಮೋಜಿನ ಮೀಟಿಂಗ್ ನಡೆಸಿದಾಗ ಅವರ ಉಪಚಾರ ವೆಚ್ಚವನ್ನು ಸಂಪೂರ್ಣವಾಗಿ ಭರಿಸಿದ್ದೇ ಇವರಿಬ್ಬರು ಎಂಬುದು ಇಲ್ಲಿ ಉಲ್ಲೇಖಾರ್ಹ.

ಈ ಮಧ್ಯೆ ಮಾತಿನಮಲ್ಲಿ ಮಾಳವಿಕಾ ಎಂಬ ಟಿವಿ ನಟಿ ಕೂಡಾ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ತನ್ನ ಇಂಗಿತವನ್ನು ವ್ಯಕ್ತಪಡಿಸಿದ್ದಾಳೆ. ಅದೇ ರೀತಿ ಹಿರಿಯ ನಟಿ ಭಾರತಿ ವಿಷ್ಣುವರ್ಧನ್ ಅವರನ್ನು ಬಸವನಗುಡಿ ಕ್ಷೇತ್ರದಿಂದ ನಿಲ್ಲಿಸಲು ಬಿಜೆಪಿ ಹುನ್ನಾರ ನಡೆಸುತ್ತಿದೆ. "ನನಗೆ ಟಿಕೆಟ್ ಕೊಟ್ಟರೆ ನಾನೂ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ'' ಎಂದು ಕೊಬ್ರಿ ಮಂಜು ಬಹಳ ಹಿಂದೆಯೇ ಅನೌನ್ಸ್ ಮಾಡಿದ್ದರೂ ಅವರನ್ನು ಯಾವ ಪಕ್ಷದವರೂ ಇಲ್ಲಿಯವರೆಗೆ ಸಂಪರ್ಕಿಸಿಲ್ಲವಂತೆ.

ಬಿಜೆಪಿಯಲ್ಲಿ ಬಹಳ ವರ್ಷಗಳಿಂದ ಇರುವ ಮುಖ್ಯಮಂತ್ರಿ ಚಂದ್ರು ಈಗ ಅದೇ ಪಕ್ಷದಲ್ಲಿ ಯಾರಿಗೂ ಬೇಡವಾಗಿದ್ದಾರೆ. ಇದಕ್ಕೆ ಕಾರಣ ಯಡ್ಯೂರಪ್ಪನವರ ಕೆಂಗಣ್ಣು ಅವರ ಮೇಲೆ ಬಿದ್ದಿರುವುದು. ಹೀಗಾಗಿ ಈ ಚಂದ್ರುಗೆ ಈ ಬಾರಿ ಟಿಕೆಟ್ ಸಿಗುವುದು ಸ್ವಲ್ಪ ಕಷ್ಟ. ಅಷ್ಟೇ ಅಲ್ಲ, ಅವರಿಗೆ ಪ್ರಚಾರಕ್ಕೂ, ಭಾಷಣ ಮಾಡುವುದಕ್ಕೂ ಅಷ್ಟೊಂದು ಅವಕಾಶ ಸಿಗಲಾರದು. ಮುಖ್ಯಮಂತ್ರಿ ಚಂದ್ರು ಸ್ಥಾನವನ್ನು ಈಗ ಶ್ರೀನಾಥ್ ಅಲಂಕರಿಸಿದ್ದಾರೆ. ಹೀಗಾಗಿ ಪಕ್ಷಕ್ಕೆ ಸೇರಲು ಹೊರಟಿರುವ ನಟನಟಿಯರೆಲ್ಲಾ ಶ್ರೀನಾಥ್‌ರವರ ಹಿಂದು ಮುಂದೇ ಓಡಾಡುತ್ತಿದ್ದಾರೆ.

ಇನ್ನೂ ಅನೇಕ ನಟನಟಿಯರು ಶಾಸಕರಾಗುವ ಕನಸು ಕಾಣುತ್ತಿದ್ದಾರೆ. ಅವರಲ್ಲಿ ಪ್ರಮುಖವಾಗಿ ಕಾಣಿಸುತ್ತಿರುವವರು ಹಾಸ್ಯ ನಟ ದ್ವಾರಕೀಶ್. ಕಳೆದ ಬಾರಿ ಇವರಿಗೆ ವಿಜಯ ಸಂಕೇಶ್ವರರ ಕನ್ನಡನಾಡು ಪಕ್ಷದಿಂದ ಹುಣಸೂರು ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಸಿಕ್ಕಿತ್ತು, ಆದರೆ ದ್ವಾರಕೀಶ್ ಹೀನಾಯವಾಗಿ ಸೋತಿದ್ದರು. ಇನ್ನು ವಿಧಾನ ಪರಿಷತ್ತಿನ ಸದಸ್ಯೆಯಾಗಿ ಅಧಿಕಾರದ ರುಚಿಯನ್ನು ಅನುಭವಿಸಿದ ಉಮಾಶ್ರೀ ಮತ್ತೆ ಎಮ್‌ಎಲ್‌ಸಿ ಆಗುವ ಸಾಧ್ಯತೆಗಳು ಕಡಿಮೆ. ಹೀಗಾಗಿ ಆಕೆಯೂ ಕೂಡ ಉತ್ತರ ಕರ್ನಾಟಕದ ಯಾವುದಾದರೊಂದು ಸೇಫ್ ಕ್ಷೇತ್ರಕ್ಕಾಗಿ ಹುಡುಕಾಟ ನಡೆಸುತ್ತಿದ್ದಾರೆ. ಹಿಂದೊಮ್ಮೆ ಉಮಾಶ್ರೀ ಕೂಡ ಬಂಗಾರಪ್ಪ ಹುಟ್ಟುಹಾಕಿದ್ದ ಕರ್ನಾಟಕ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಿ ಸೋಲನ್ನು ಕಂಡಿದ್ದರು.

ಪ್ರತೀ ಬಾರಿ ಚುನಾವಣೆಗೆ ನಿಂತು ಪ್ರತಿ ಬಾರಿ ಸೋತಿದ್ದರೂ ಇನ್ನೂ ಕೂಡ ರಾಜಕೀಯದಲ್ಲಿ ಆಸಕ್ತಿ ಕಳೆಕೊಳ್ಳದ ಅಭಿನಯ ಶಾರದೆ ಜಯಂತಿ ಮತ್ತೊಮ್ಮೆ ಸ್ಪರ್ಧಿಸುವ ಹುಮ್ಮಸ್ಸಿನಲ್ಲಿದ್ದಾರೆ. ಆಕೆಗೆ ದೇವೇಗೌಡರು ಈ ಬಾರಿ ಯಾವ ಕ್ಷೇತ್ರ ನೀಡುತ್ತಾರೋ ಗೊತ್ತಿಲ್ಲ.

ವಿಚಿತ್ರವೆಂದರೆ ಹೆಚ್ಚಿನ ಸಿನಿಮಾ ನಟರಿಗೆ ಯಾವುದೇ ಸಿದ್ಧಾಂತ, ಪಕ್ಷದ ಆಚಾರ ವಿಚಾರ ಗೊತ್ತಿರುವುದಿಲ್ಲ. ಆದರೂ ಅವರನ್ನು ರಾಜಕೀಯ ಪಕ್ಷಗಳು ಸ್ವಾಗತಿಸುತ್ತವೆ. ಅಷ್ಟೇ ಅಲ್ಲ, ರಾಜಕಾರಣಿಗಳಂತೆ ಇವರಿಗೂ ನಿಜವಾದ ಜನಸೇವೆ, ಜನತೆಯ ಬಗ್ಗೆ ಕಾಳಜಿ ಇರುವುದಿಲ್ಲ. ಆದರೂ ಜನಸೇವೆಯ ಹೆಸರಲ್ಲಿ ರಾಜಕೀಯಕ್ಕೆ ಎಂಟ್ರಿ ಪಡೆಯುತ್ತಾರೆ. ಯಾಕೆಂದರೆ ಈ ಚಿತ್ರ ಜಗತ್ತಿನವರಿಗೆ ರಾಜಕೀಯ ಎಂಬುದು ಕೂಡ ಇನ್ನೊಂದು ಸಿನಿಮಾದ ಪಾತ್ರದಂತೆ ಕಾಣಿಸುತ್ತದೆ.

ಈ ಸಿನಿಮಾ ನಟರಿಂದ ರಾಜಕೀಯ ಪಕ್ಷಗಳಿಗೆ ಯಾವುದೇ ಲಾಭ ಇಲ್ಲ ಎಂಬುದನ್ನು ಇತಿಹಾಸ ತೋರಿಸಿಕೊಟ್ಟಿದೆ. ಆದರೂ ರಾಜಕಾರಣಿಗಳು ಸಿನಿಮಾದವರನ್ನು ಸುತ್ತುವರೆಯುತ್ತಾರೆ. ಈ ಸಿನಿಮಾದವರು ರಾಜಕಾರಣಿಗಳ ಕೃಪಾಕಟಾಕ್ಷಕ್ಕಾಗಿ ಕಾಯುತ್ತಿರುತ್ತಾರೆ.

ಮೇಡ್ ಫಾರ್ ಈಚ್ ಅದರ್ ಅಲ್ಲವೇ?

■ ವೆಂಕಿ

R B P LANKESH, Kannada Weekly Price Rs. 12/- 16-4-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore

# 'ಮಂಜಿನ ಹನಿ'ಯ ಮರ್ಮ!





'ಮಂಜಿನ ಹನಿ'ಯಿಂದ ನಿರ್ಮಾಪಕ ಸಂದೇಶ್ ನಾಗರಾಜರಿಗೆ ನಿರ್ದೇಶಕ ಕಂ ನಾಯಕ ನಟ ರವಿಚಂದ್ರನ್ ಕೊಕ್ ಕೊಟ್ಟಿದ್ದಾರೆ. ಈ ಚಿತ್ರ ಸಂದೇಶ್ ನಾಗರಾಜರ ಬ್ಯಾನರ್ ನಲ್ಲಿ ಪ್ರಾರಂಭವಾಗಿದ್ದರೂ ಈಗ ಅದು ಈಶ್ವರಿ ಬ್ಯಾನರ್ ನಲ್ಲಿ ಸಿದ್ಧಗೊಳ್ಳುತ್ತಿದೆ.


ಇದಕ್ಕೆ ಕಾರಣ ಮೊದಲಿಂದಲೂ ರವಿ ಮತ್ತು ಸಂದೇಶ್ ನಡುವೆ ನಡೆಯುತ್ತಿದ್ದ ಕೋಳಿ ಜಗಳ. ಸಂದೇಶ್ ನಿರ್ಮಾಣದ, ರವಿ ನಟನೆಯ ಚಿತ್ರವೊಂದು ಬಾಕ್ಸಾಫೀಸಿನಲ್ಲಿ ಮುಗ್ಗರಿಸಿದ್ದರಿಂದ ಅದರಿಂದಾದ ಸಾಲವನ್ನು ತೀರಿಸಲೆಂದು ರವಿಚಂದ್ರನ್ ತಮ್ಮ ಕಾಲ್‌ಶೀಟನ್ನು ಮತ್ತೆ ಸಂದೇಶ್‌ಗೆ ನೀಡಿದ್ದರು. ಆದರೆ ಜೊತೆಗೆ ಒಂದು ಕಂಡೀಶನ್ನೂ ಹಾಕಿದ್ದರು. ಅದೇನೆಂದರೆ, ಯಾವುದೇ ಕಾರಣಕ್ಕೂ ಸಂದೇಶ್ ನಾಗರಾಜ್ ಸೆಟ್‌ಗೆ ಬರಬಾರದು. ಆ ಶರತ್ತಿಗೆ ಬದಲಾಗಿ ತಾನು ಚಿತ್ರ ಮುಗಿಸಿ ಮೊದಲ ಕಾಪಿಯನ್ನು ನೀಡುವ ಜವಾಬ್ದಾರಿಯನ್ನು ವಹಿಸುತ್ತೇನೆಂದು ರವಿಚಂದ್ರನ್ ತಾಕೀತು ಮಾಡಿದ್ದರು.

ಆದರೆ ಚಿತ್ರ ಆರಂಭವಾದ ನಂತರ ಈ ಚಿತ್ರದ ಬಗ್ಗೆ ಕ್ರೇಜಿ ಸ್ಟಾರ್‌ಗೆ ವಿಶೇಷವಾದ ಬಾಂಧವ್ಯ ಕುದುರಿದ್ದರಿಂದ ಅದು ನಿಗದಿತ ಅವಧಿಯಲ್ಲಿ ಮುಗಿಯಲಿಲ್ಲ. ಆ ಹಂತದಲ್ಲೇ ಅವರಿಬ್ಬರ ನಡುವೆ ಪುಟ್ಟ ಮನಸ್ತಾಪ ಉಂಟಾಯಿತು. ಕೊನೆಗೆ ಎರಡು ಏರಿಯಾಗಳನ್ನು ಸಂದೇಶ್‌ಗೆ ಬರೆದುಕೊಟ್ಟು, ರವಿಚಂದ್ರನ್ ಎಂದಿನಂತೆ ತನ್ನ ತನು-ಮನ-ಧನವನ್ನು '... ಹನಿ' ಚಿತ್ರಕ್ಕಾಗಿ ಸುರಿಯುತ್ತಾ ಹೋದರು. ಹೀಗಾಗಿ ಈ ಚಿತ್ರಕ್ಕೆ ಕುಂಬಳಕಾಯಿ ಹೊಡೆಯಲು ಸಾಧ್ಯವಾಗಲಿಲ್ಲ. ಮತ್ತೆ ಸಂದೇಶ್ ಕ್ಯಾತೆ ಎತ್ತಿದರು.

ಇದರಿಂದ ಸಿಟ್ಟುಕೊಂಡ ರವಿಚಂದ್ರನ್ ಈ ಬಾರಿ ಇಡೀ ಚಿತ್ರವನ್ನು ಸಂದೇಶರಿಂದ ಖರೀದಿಸಿದರು. ಈಗ ಈಶ್ವರಿ ಸಂಸ್ಥೆ ಬ್ಯಾನರ್‌ನಲ್ಲೇ ಅದನ್ನು ನಿರ್ಮಿಸುತ್ತಿದ್ದಾರೆ. 'ಮಂಜಿನ ಹನಿ'ಯನ್ನು ಗುತ್ತಿಗೆ ಆಧಾರದ ಮೇಲೆ ಆರಂಭಿಸಿದ್ದರೂ ಕ್ರೇಜಿ ಸ್ಟಾರ್ ಯಾವುದೇ ಹಂತದಲ್ಲಿ ರಾಜಿಯಾಗದೇ ಈ ಚಿತ್ರವನ್ನು ಗೆಲ್ಲಿಸಲೇಬೇಕೆಂಬ ಹಠದಲ್ಲಿ ಚಿತ್ರೀಕರಿಸುತ್ತಿದ್ದಾರೆ. ಹೀಗಾಗಿ ಈಗ ಗುತ್ತಿಗೆ ಮೊತ್ತದ ಮೇಲೆಯೂ ಇನ್ನೆಷ್ಟೋ ಕೋಟಿಯನ್ನು ರವಿ ಸುರಿದಿದ್ದಾರೆ.

ಈಗ ಹಳಬರ ಕಾಲದಲ್ಲಿ, ಎಲ್ಲಿ ನೋಡಿದರೂ ಚಿತ್ರರಂಗದಲ್ಲಿ ಯುವಕರದ್ದೇ ರಾಜ್ಯಭಾರ. ಆದರೂ ರವಿಚಂದ್ರನ್ ಈ ಚಿತ್ರದ ಮೇಲೆ ತನ್ನ ಸರ್ವಸ್ವವನ್ನೂ ಸುರಿಯುತ್ತಿದ್ದಾರೆ. ಇದು ಅವರ ಶೈಲಿ. ಇಂತಹ ಸಾಹಸಕ್ಕೆ ಹಾನ ರವಿಗೆ ಕ್ರೇಜಿ ಎಂಬ ಬಿರುದೂ ಸಿಕ್ಕಿದ್ದು. ಹಾಗೆ ನೋಡಿದರೆ, ರವಿಚಂದ್ರನ್ ಪಾಲಿಗೆ 'ಮಂಜಿನ ಹನಿ' ಒಂದು ರೀತಿಯಲ್ಲಿ ಮಂಜು ಮುಂಜಾಗಿದೆ. ಇಲ್ಲಿ ಗೆದ್ದರೆ ಕ್ರೇಜಿ ಗೆದ್ದಂತೆ. ಇಲ್ಲದಿದ್ದರೆ ಮಂಜಿನ ಥರ ಕರಗಲಿದ್ದಾರೆ. ■

## ಸಿನಿ ಬಿಟ್ಸ್




'ದಿಲ್ ಸೆ' ಎಂಬ ಹಿಂದಿ ಚಿತ್ರದಲ್ಲಿ ಹೇಗೆ ಶಾರುಖ್ ಖಾನ್ ಮತ್ತು ಮಲೈಕ ಅರೋರ ಟ್ರೈನ್ ಮೇಲೆ 'ಚಯ್ಯ ಚಯ್ಯ' ಎಂದು ಕುಣಿದಿದ್ದರೋ ಹಾಗೆನೇ 'ಮುಸ್ಸಂಜೆಯ ಮಾತು' ಚಿತ್ರಕ್ಕೆ ಸುದೀಪ್ ಮತ್ತು ರಮ್ಯ ಚಾಮರಾಜನಗರದಿಂದ ಮೈಸೂರಿನ ತನಕ ರೈಲೊಂದರ ಮೇಲೆ ಕುಣಿದು ಕುಪ್ಪಳಿಸಲಿದ್ದಾರೆ. ಆ ಚಿತ್ರದ ನಿರ್ದೇಶಕ ಮಹೇಶ್ ಪ್ರಕಾರ ಈ ಹಾಡಿನ ಚಿತ್ರೀಕರಣ ಮೂರು ದಿನಗಳ ಕಾಲ ನಡೆಯಲಿದ್ದು ಅದಕ್ಕೊಂದು (ಟ್ರೈನ್ ಬಾಡಿಗೆಯೂ ಸೇರಿದಂತೆ) ಸುಮಾರು ಮೂವತ್ತೈದು ಲಕ್ಷ ರೂಪಾಯಿಗಳು ವೆಚ್ಚವಾಗಲಿದೆಯಂತೆ.

---



ತಂದೆ ಗಿರೀಶ್ ಕಾಸರವಳ್ಳಿ ಅಂತರ ರಾಷ್ಟ್ರೀಯ ಗಮನ ಸೆಳೆದಿರುವ ನಿರ್ದೇಶಕ. ತಾಯಿ ವೈಶಾಲಿ ಕಿರುತೆರೆಯಲ್ಲಿ ತನ್ನ ಛಾಪನ್ನು ಮೂಡಿಸಿರುವ ನಿರ್ದೇಶಕಿ. ಅಕ್ಕ ಅನನ್ಯಾ ಈಗಾಗಲೇ ನಟಿಯಾಗಿದ್ದಾಳೆ. ಈಗ ಈ ಕಾಸರವಳ್ಳಿ ಕುಟುಂಬದಿಂದ ಕಲಾ ಪ್ರಪಂಚಕ್ಕೆ ಮತ್ತೊಂದು ಸೇರ್ಪಡೆ! ಗಿರೀಶ್ ಅವರ ಪುತ್ರ ಅಪೂರ್ವ ಕಾಸರವಳ್ಳಿ ತಾಯಿ ವೈಶಾಲಿ ನಿರ್ದೇಶಿಸುತ್ತಿರುವ 'ಮುತ್ತಿನ ತೋರಣ' ಧಾರಾವಾಹಿಯಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡುತ್ತಿದ್ದಾನೆ. ಒಟ್ಟಿನಲ್ಲಿ, ಕಾಸರವಳ್ಳಿ ಕುಟುಂಬ ಸಂಪೂರ್ಣವಾಗಿ ಬಣ್ಣದ ಕುಟುಂಬ ಎನ್ನಬಹುದೇ?!

---



ನಟನೊಬ್ಬ ತಾನು ನಟಿಸುತ್ತಿರುವ ಚಿತ್ರ ಸ್ವಮೇಕ್ ಅಲ್ಲ, ಬದಲಾಗಿ ಅದೊಂದು ರೀಮೇಕ್ ಎಂದು ಚಿತ್ರದ ಪ್ರಾರಂಭದಲ್ಲೇ ಒಪ್ಪಿಕೊಂಡಿದ್ದು ಬಹಳ ವಿರಳ. ಆದರೆ ಮೊನ್ನೆ ದರ್ಶನ್ ಅಂತಹ ಸಾಹಸವನ್ನು ಮಾಡಿದರು. ಇತ್ತೀಚಿನ ದಿನಗಳಲ್ಲಿ ರಿಮೇಕ್ ಚಿತ್ರಗಳ ಬಗ್ಗೆ ಸರ್ಕಾರ ಗೊಂದಲ ಎದುರಿಸುತ್ತಿರುವ ಸಮಯದಲ್ಲಿ ದರ್ಶನ್ ಮಾತು ಸ್ವಾಗತಾರ್ಹ.

---



ಕೆಲವರು ಚಿತ್ರರಂಗದಲ್ಲಿ ಏನೂ ಮಾಡದಿದ್ದರೂ ಯಾವಾಗಲೂ ಸುದ್ದಿಯಲ್ಲಿರುತ್ತಾರೆ. ಇನ್ನು ಕೆಲವರು ದೊಡ್ಡ ಕೆಲಸ ಕೈಗೆತ್ತಿಕೊಂಡರೂ ಸುದ್ದಿಯೇ ಆಗುವುದಿಲ್ಲ. ಎರಡನೇ ವರ್ಗಕ್ಕೆ ಸೇರಿದ ವ್ಯಕ್ತಿ ಎಂ.ಡಿ.ಕೌಶಿಕ್. ಮೊನ್ನೆಮೊನ್ನೆಯಷ್ಟೇ ಅನಂತ್ ನಾಗ್‌ರನ್ನು ಕರೆಸಿ ಕೌಶಿಕ್ ತನ್ನ ಸ್ಟುಡಿಯೋದಲ್ಲಿ ನಿರ್ಮಿಸಿರುವ ಶಂಕರ್ ನಾಗ್ ಫ್ಲೋರ್‌ಅನ್ನು ಉದ್ಘಾಟಿಸಿಕೊಂಡರು. ನಾಲ್ಕು ವರ್ಷದ ಹಿಂದೆ ಇದೇ ರೀತಿ ಪುಟ್ಟಣ್ಣ ಕಣಗಾಲ್ ಫ್ಲೋರ್‌ಅನ್ನು ಆರಂಭಿಸಿದ್ದರು.

ವಿಶೇಷವೆಂದರೆ, ಈ ಕೌಶಿಕ್ ಉದ್ಯಮದಲ್ಲಿ ಅಂತಹ ಚಾಲ್ತಿಯಲ್ಲೇನೂ ಇಲ್ಲ. ಕಿರುತೆರೆ ಮತ್ತು ಹಿರಿತೆರೆಯಲ್ಲಿ ಅಲ್ಲೊಮ್ಮೆ ಇಲ್ಲೊಮ್ಮೆ ಕಾಣಿಸುವ ಕೌಶಿಕ್ ತನ್ನ ಸ್ವಂತ ಹಣದಲ್ಲೇ ಮಾಗಡಿರಸ್ತೆಯ ಸೀಗೆಹಳ್ಳಿ ಬಳಿ ನಾಲ್ಕೂವರೆ ಎಕರೆ ಜಮೀನಿನಲ್ಲಿ ಸರ್ಕಾರದ ಮತ್ತು ಉದ್ಯಮದ ಸಹಾಯ ಹಸ್ತವನ್ನು ನಿರೀಕ್ಷಿಸದೇ ಏಕಾಂಗಿಯಾಗಿ ಒಂದು ಸ್ಟುಡಿಯೋವನ್ನು ಹಂತಹಂತವಾಗಿ ಕಟ್ಟುತ್ತಿದ್ದಾರೆ. ಚಿಕ್ಕ ಪುಟ್ಟ ಸಮಾರಂಭಕ್ಕೆಲ್ಲ ಮಂತ್ರಿ ಮಹೋದಯರನ್ನು ಕರೆಸಿ ಭಾರೀ ಪ್ರಚಾರ ಪಡೆಯುವ ಜನರ ಮಧ್ಯೆ ಕೌಶಿಕ್ ವಿಭಿನ್ನವಾಗಿ ಕಾಣುತ್ತಾರೆ.

## ಬಕ್ರಾ ವಿಷಯ!



'ಮಿ. ಬಕ್ರಾ' ಎಂಬ ಸಿನಿಮಾವನ್ನು ನಿರ್ದೇಶಿಸಿದ್ದ ವಸಂತ್ ಎಂಬಾತ ಮತ್ತೆ ಗಾಂಧಿನಗರದಲ್ಲಿ ಪ್ರತ್ಯಕ್ಷರಾಗಿದ್ದಾರೆ. ಎರಡು ವರ್ಷಗಳ ಹಿಂದೆ ಜಗ್ಗೇಶ್ ಅಭಿನಯದ 'ಮಿ. ಬಕ್ರಾ' ಎಂಬ ಸಿನಿಮಾವನ್ನು ಮಾಡಿ ಅದು ಬಾಕ್ಸಾಫೀಸಿನಲ್ಲಿ ಚೋರಲು ಬಿದ್ದಾಗ ಸ್ವತಃ ತಾನೇ ಬಕ್ರಾ ಆಗಿದ್ದರು ವಸಂತ್. ಅದರಿಂದ ಚೇತರಿಸಿಕೊಳ್ಳಲು ಎರಡು ವರ್ಷಗಳ ಕಾಲವನ್ನು ತೆಗೆದುಕೊಂಡ ವಸಂತ್ ಈಗ ಹೊಸ ಹುಡುಗರೊಂದಿಗೆ 'ಹೃದಯಗಳ ವಿಷಯ'ವನ್ನು ಹೇಳಲು ಹೊರಟಿದ್ದಾರೆ.




ಈಗಾಗಲೇ ಕೆಲ ಚಿತ್ರಗಳಲ್ಲಿ ತಮ್ಮ ಭಯಾನಕ ನಟನಾ ಪ್ರತಿಭೆಯನ್ನು ಪ್ರದರ್ಶಿಸಿರುವ ಪತ್ರಕರ್ತ ರವಿ ಬೆಳಗೆರೆ ಮತ್ತೊಮ್ಮೆ ಜನರ ಮೇಲೆ ಭಯೋತ್ಪಾದನೆ ನಡೆಸಲು ಹೊರಟಿದ್ದಾರೆ. ನಿರ್ದೇಶಕ ವಸಂತ್ ಈ ಹೃದಯಗಳ ವಿಷಯದಲ್ಲೂ ಬಕ್ರಾ ಆಗದಿದ್ದರೆ ಅದೇ ಅವರ ಪುಣ್ಯ.

## ಕುಂಚ ಕಲಾವಿದರ ಒಲವಿನ ಬಣ್ಣ



ಅತ್ತ ದುನಿಯಾ ಸೂರಿ 'ಇಂತಿ ನಿನ್ನ ಪ್ರೀತಿಯ' ಚಿತ್ರದ ಮೂಲಕ ಕಲಾವಿದರ ಬದುಕನ್ನು ಬಣ್ಣಿಸಲು ಹೋಗಿ ಸೋತು ಸೊರಗಿ ಕುಂತಿರುವ ಬೆನ್ನಲ್ಲೇ ಇನ್ನೊಂದು ಕಲಾವಿದರ ತಂಡ ತಮ್ಮ ಜೀವನದ ಅನುಭವಗಳನ್ನೇ ಸಿನಿಮಾ ಮಾಡಲು ಹೊರಟಿದೆ. 'ನನ್ನ ಒಲವಿನ ಬಣ್ಣ' ಎಂಬ ಈ ಚಿತ್ರ ಈಗಾಗಲೇ ಬಹುತೇಕ ಸಂಪೂರ್ಣಗೊಂಡಿದ್ದು ಬಿಡುಗಡೆಗೆ ಅಣಿಯಾಗುತ್ತಿದೆ.

ಉಪೇಂದ್ರನ 'A' ಚಿತ್ರಕ್ಕೆ ವಿಭಿನ್ನವಾದ ಪೋಸ್ಟರ್‌ಗಳನ್ನು ಡಿಸೈನ್ ಮಾಡಿ ಗಮನ ಸೆಳೆದಿದ್ದ ಭೂಪತ್ ಎಂಬ ಕಲಾವಿದ ಈ ಚಿತ್ರದ ನಿರ್ದೇಶಕ. ಈ ಚಿತ್ರದ ಹೀರೋನಿಂದ ಹಿಡಿದು ಬಹುತೇಕ ಎಲ್ಲ ಕಲಾವಿದರೂ ಕೆನ್ ಕಲಾಶಾಲೆಯ ಹಳೆಯ ವಿದ್ಯಾರ್ಥಿಗಳಾಗಿರುವುದು ಮತ್ತೊಂದು ವಿಶೇಷ.



ಒಟ್ಟಾರೆ ಈ ಕುಂಚ ಕಲಾವಿದರ 'ಒಲವಿನ ಬಣ್ಣ' ಪರದೆಯ ಮೇಲೆ ಹೇಗೆ ಮೂಡಿಬರುತ್ತದೆ ಎಂಬುದು ಇಷ್ಟರಲ್ಲೇ ಗೊತ್ತಾಗುತ್ತದೆ.

## ಮಜಾ ನೀಡದ 'ಆಕ್ಸಿಡೆಂಟ್'



'ಮೆರವಣಿಗೆ'ಯಲ್ಲಿ ಪ್ರಜ್ವಲ್ ಮತ್ತು ಐಂದ್ರಿತಾ ರೇ

ರಮೇಶ್ ನಿರ್ದೇಶನದ 'ಆಕ್ಸಿಡೆಂಟ್' ಮೊದಲೇ ತಿಳಿಸಿದ್ದಂತೆ ಸಸ್ಪೆನ್ಸ್ ಥ್ರಿಲ್ಲರ್ ಚಿತ್ರ. ಚಿತ್ರದ ಆರಂಭದಿಂದಲೂ ಕಥೆ ಹಲವಾರು ಕುತೂಹಲಕಾರಿ ತಿರುವುಗಳನ್ನು ಪಡೆಯುತ್ತಾ ಸಾಗುತ್ತದೆ. ಅಷ್ಟರಮಟ್ಟಿಗೆ ರಮೇಶ್ ಚಿತ್ರಕಥೆಯಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಒಟ್ಟಾರೆಯಾಗಿ ಈ ಚಿತ್ರವನ್ನು ನೋಡಿದಾಗ ಇದರಲ್ಲಿ ಅಂತಹ ಮಜಾ ಸಿಗುವುದಿಲ್ಲ. ಮನರಂಜನೆಯ ಅಂಶ ಕಡಿಮೆ. ಜೊತೆಗೆ ಹೃದಯಕ್ಕೆ ತಟ್ಟುವಂತಾ ದೃಶ್ಯಗಳೂ ಇಲ್ಲ, ಹಾಡುಗಳೂ ಅಷ್ಟಕ್ಕಷ್ಟೇ. ಸಸ್ಪೆನ್ಸ್ ಚಿತ್ರವೆಂದರೆ ಹಲವಾರು ಸಸ್ಪೆನ್ಸ್‌ಗಳು ಇರಲೇಬೇಕು ಎಂದು ಭಾವಿಸಿ ಅನೇಕ ದೃಶ್ಯಗಳನ್ನು ರಮೇಶ್ ತುರುಕಿಸಿದಂತಿದೆ. ಆದರೂ ಈ ಪ್ರಯತ್ನವನ್ನು ಸಾರಾಸಗಟಾಗಿ ತಿರಸ್ಕರಿಸುವಂತಿಲ್ಲ. ರಮೇಶ್ ಚಿತ್ರದಿಂದ ಚಿತ್ರಕ್ಕೆ ನಿರ್ದೇಶಕನಾಗಿ ಪ್ರಬುದ್ಧರಾಗುತ್ತಿದ್ದಾರೆ. ಆದರೆ ಎಲ್ಲಾ ವರ್ಗದ ಜನ ಇಷ್ಟಪಡುವಂತಹ ಕಥೆಯನ್ನು ರಮೇಶ್ ಆಯ್ಕೆಮಾಡಿ ಗೆಲ್ಲಬೇಕಿದೆ. ಸಾಫ್ಟ್‌ವೇರ್ ಗೆಳೆಯರೆಲ್ಲ ಸೇರಿ ರಘುನಾಥ್ ನಾಯಕತ್ವದಲ್ಲಿ ನಿರ್ಮಿಸಿದ ವಿಶಿಷ್ಟ ಪ್ರೊಡಕ್ಷನ್‌ನ ಈ ಚೊಚ್ಚಲ ಚಿತ್ರ ನಗರವಾಸಿಗಳಿಗೆ ಮಾತ್ರ ಇಷ್ಟವಾಗಬಹುದು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4. Phone ...
Fax : 26604536, E-mail :lankesh70@rediffmail.com, Printed at Rajhans Enterprises ...